ಸಂಪುಟ: 13 Volume | ಸಂಚಿಕೆ: 312 Issue | ಪುಟಗಳು 08 Pages | ಶನಿವಾರ 31 ಜನವರಿ 2026 | ₹6 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

ಸಂಪಾದಕರು: ರಮೇಶ ರೆಡ್ಡಿ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

**ಬೆಳಗು**

ಗಾಳಿಯಂತೆ ನೀನು ಜೀವನದ ಎಲ್ಲಾ ಭಾಗಗಳಲ್ಲೂ ಪ್ರವೇಶ ಪಡೆ ಆದರೆ ಅಂಟಿಕೊಳ್ಳಬೇಡ.
–ಅವಧೂತ ವೆಂಕಟಾಚಲ ಸದ್ಗುರು

ಮಡಿವಾಳ ಮಾಚಿದೇವ ಜಯಂತಿ ಆಚರಣೆ 6

ಪಟ್ಟಣದಲ್ಲಿ ತ್ರಿವಳಿ ಕೊಲೆ: ಬೆಚ್ಚಿಬಿದ್ದ ಜನರು 7

ಗ್ಯಾರಂಟಿ ಯೋಜನೆಗಳ ಪರಿಶೀಲನಾ ಸಭೆ 8

## ಲೋಕಾ ಬಲೆಗೆ ಇನ್ಸ್‌ಪೆಕ್ಟರ್

**ಬೆಂಗಳೂರು:** ಕ್ರಿಮಿನಲ್ ಪ್ರಕರಣದಲ್ಲಿ ಸಹಾಯ ಮಾಡುವುದಾಗಿ ಆರೋಪಿ ಬಳಿ ಐದು ಲಕ್ಷ ರೂ. ಲಂಚ ಪಡೆದ ಕೆ.ಪಿ. ಅಗ್ರಹಾರ ಠಾಣೆ ಇನ್ಸ್ಪೆಕ್ಟರ್ ಗೋವಿಂದರಾಜು ಅವರನ್ನು ಗುರುವಾರ ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ. ಬಿಲ್ಡರ್ ಮೊಹಮ್ಮದ್ ಅಕ್ಬರ್ ನೀಡಿದ ದೂರಿನ ಮೇರೆಗೆ ಲೋಕಾಯುಕ್ತ ಪೊಲೀಸರು ಈ ಕಾರ್ಯಾಚರಣೆ ಕೈಗೆತ್ತಿಕೊಂಡರು. ಕ್ರಿಮಿನಲ್ ಪ್ರಕರಣವೊಂದರಲ್ಲಿ ರಿಯಾಯಿತಿ ನೀಡಲು ಲಂಚಕ್ಕೆ ಬೇಡಿಕೆಯಿಟ್ಟಿದ್ದರು ಎಂದು ಅಕ್ಬರ್ ಆರೋಪಿಸಿದ್ದರು. ಈ ಹಿನ್ನೆಲೆ, ಚಾಮರಾಜಪೇಟೆಯ ಸಿಎಆರ್ ಮೈದಾನದಲ್ಲಿ ಲಂಚ ಪಡೆಯುತ್ತಿದ್ದಾಗ ಲೋಕಾಯುಕ್ತ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದಾರೆ.

## ಡಾ.ರಾಜ್ ಸ್ಫೂರ್ತಿಯಿಂದ ಬಸ್ ತಂಗುದಾಣ ನಿರ್ಮಾಣ



**ಬೆಂಗಳೂರು:** 'ಕನ್ನಡ ನಮ್ಮ ಉಸಿರು, ನಮ್ಮ ಜೀವ' ಕರ್ನಾಟಕದ ಜನತೆಯ ಅಭಿವೃದ್ಧಿಯೇ ನಮ್ಮ ಮುಖ್ಯ ಗುರಿ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಹೇಳಿದ್ದಾರೆ. ಸರ್ವಜ್ಞನಗರ ವಿಧಾನ ಸಭಾ ಕ್ಷೇತ್ರದ ಮಾರುತಿ ಸೇವಾ ನಗರದ ಬಾಣಸವಾಡಿ ಮುಖ್ಯರಸ್ತೆಯಲ್ಲಿ ಶುಕ್ರವಾರ ನೂತನ ಬಸ್ ತಂಗುದಾಣವನ್ನು ಉದ್ಘಾಟಿಸಿ ಸರ್ವಜ್ಞನಗರ ವಿಧಾನ ಸಭಾ ಕ್ಷೇತ್ರದ ಶಾಸಕರೂ ಆಗಿರುವ ಇಂಧನ ಸಚಿವ ಹಾಗೂ ಕೆ.ಜೆ.ಜಾರ್ಜ್ ಮಾತನಾಡಿದರು. "ಅಖಿಲ ಕರ್ನಾಟಕ ಡಾ.ರಾಜ್‌ಕುಮಾರ್ ಅಭಿಮಾನಿಗಳ ಸಂಘದ ವತಿಯಿಂದ ಬಸ್ ತಂಗುದಾಣ ನಿರ್ಮಾಣವಾಗಿದೆ. ನಾನು ಡಾ.ರಾಜ್‌ಕುಮಾರ್ ಅಭಿಮಾನಿ, ಅವರ ಹೆಸರಿನ ಬಸ್‌ನಿಲ್ದಾಣವನ್ನು ಉದ್ಘಾಟಿಸುತ್ತಿರುವುದು ನನ್ನ ಸೌಭಾಗ್ಯ. ನಮ್ಮ ಕನ್ನಡದ ಧ್ವಜ ಜಾಗತಿಕ ಮಟ್ಟದಲ್ಲಿ ಹಾರಾತ್ತಿದೆ. ಕನ್ನಡವೇ ನನ್ನ ಉಸಿರು, ರಾಜ್ಯದ ಜನರ ಅಭಿವೃದ್ಧಿಯೇ ನಮ್ಮ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರದ ಮುಖ್ಯ ಗುರಿ" ಎಂದರು. "ಸಂಘದವರು ಪ್ರಯಾಣಿಕರಿಗೆ ನೆರಳು, ಮಳೆಯಿಂದ ರಕ್ಷಣೆ ಮತ್ತು ಕುಡಿಯುವ ನೀರಿನ ಸೌಕರ್ಯ ಒದಗಿಸಿಕೊಟ್ಟಿದ್ದಾರೆ. ಇದು ಎಲ್ಲರೂ ಹೆಮ್ಮೆ ಪಡುವ ಕಾರ್ಯಕ್ರಮವಾಗಿದೆ. ಜನ ನೆನಯುವುದು ಒಳ್ಳೆಯ ಕೆಲಸಗಳಿಂದ ಮಾತ್ರ. ಸರ್ವಜ್ಞ ನಗರದ ಪ್ರತಿನಿಧಿಯಾಗಿರುವುದು ನನ್ನ ಭಾಗ್ಯ. ನಮ್ಮ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಬದ್ಧ," ಎಂದು ಕೆ.ಜೆ.ಜಾರ್ಜ್ ತಿಳಿಸಿದರು. "ಸರ್ವಜ್ಞ ನಗರ ವಿಧಾನಸಭಾ ಕ್ಷೇತ್ರದಲ್ಲಿ ನಾಗರಿಕರಿಗೆ ಸೌಕರ್ಯ ಒದಗಿಸಲು ಅನೇಕ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಇನ್ನೊಂದು ವರ್ಷದಲ್ಲಿ ನಮ್ಮ ಕ್ಷೇತ್ರದಲ್ಲಿ ಎಲ್ಲರೂ ನೆನಪಿಟ್ಟುಕೊಳ್ಳುವಂಥ ಯೋಜನೆಗಳು ಅನುಷ್ಠಾನಗೊಳ್ಳಲಿದೆ. ಕಾಚರಕನಹಳ್ಳಿಯಲ್ಲಿ ಕೆರೆಯನ್ನು ಅಭಿವೃದ್ಧಿಪಡಿಸುತ್ತಿದ್ದೇವೆ. ಕ್ರೀಡಾಂಗಣ, ಆಸ್ಪತ್ರೆ ಮಾಡುತ್ತಿದ್ದೇವೆ. ಜತೆಗೆ ಬೃಹತ್ ಸರ್ವಜ್ಞ ಪ್ರತಿಮೆಯನ್ನು ನಿರ್ಮಿಸಲಿದ್ದೇವೆ. ಅಭಿವೃದ್ಧಿ ಎಂದರು.

## ಗಾಮೋಸಾ ನಿರಾಕರಿಸಿದ ರಾಗಾ

• ಮಲ್ಲಮ್ಮ ನುಡಿ ವಾರ್ತೆ ದಿಬ್ರುಗಢ




ಗಣರಾಜ್ಯೋತ್ಸವದಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಆಯೋಜಿಸಿದ್ದ ಔತಣ ಕೂಟ' ಸಮಾರಂಭದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಗಾಮೋಸಾ ಧರಿಸಲು ನಿರಾಕರಿಸುವ ಮೂಲಕ ಈಶಾನ್ಯಕ್ಕೆ ಅಗೌರವ ತೋರಿದ್ದಾರೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಶುಕ್ರವಾರ ಆರೋಪಿಸಿದ್ದಾರೆ.

ಇಂದು ಖಾನಿಕರ್ ಪರೇಡ್ ಮೈದಾನದಲ್ಲಿ ಸಾರ್ವಜನಿಕ ರ್ಯಾಲಿಯನ್ನುದ್ದೇಶಿಸಿ ಮಾತನಾಡಿದ ಅಮಿತ್ ಶಾ, ವಿದೇಶಗಳಿಂದ ಬಂದವರು ಸೇರಿದಂತೆ ಎಲ್ಲಾ ಗಣ್ಯರು ಗೌರವಾರ್ಥವಾಗಿ ಸ್ಕಾರ್ಫ್ (ಗಾಮೋಸಾ) ಧರಿಸಿದ್ದರು. ಆದರೆ ರಾಹುಲ್ ಗಾಂಧಿಯವರು ಗಾಮೋಸಾ ಧರಿಸಲು ನಿರಾಕರಿಸಿದ ಏಕೈಕ ವ್ಯಕ್ತಿ ಎಂದರು. "ರಾಹುಲ್ ಗಾಂಧಿ ಏನು ಬೇಕಾದರೂ ಮಾಡಬಹುದು, ಆದರೆ ಬಿಜೆಪಿ ಅಧಿಕಾರದಲ್ಲಿರುವವರೆಗೆ, ಈಶಾನ್ಯದ ಸಂಸ್ಕೃತಿಗೆ ಯಾವುದೇ ಅಗೌರವ ತೋರಿಸಲು ಅವಕಾಶ ನೀಡುವುದಿಲ್ಲ" ಎಂದು ಹೇಳಿದ್ದಾರೆ.

## ಗಾಂಧಿಗೂ ಟೋಪಿ ಹಾಕುವ ಕೆಲಸ



**ಬೆಂಗಳೂರು:** ಹಿಂದೊಮ್ಮೆ 415 ಸಂಸದರ ಸ್ಥಾನ ಗೆದ್ದಿದ್ದ ಕಾಂಗ್ರೆಸ್ ಪಕ್ಷವು ಇವತ್ತು 2024ರ ಲೋಕಸಭಾ ಚುನಾವಣೆಯಲ್ಲಿ ಕೇವಲ 99 ಸ್ಥಾನಗಳಿಗೆ ತೃಪ್ತಿಪಡುವ ಸ್ಥಿತಿ ನಿರ್ಮಾಣವಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಅವರು ವಿಶ್ಲೇಷಿಸಿದರು.

ವಿಧಾನಸಭೆಯಲ್ಲಿ ಇಂದು ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷಕ್ಕೆ ಯಾಕೆ ಇಂಥ ಹೀನಾಯ ಪರಿಸ್ಥಿತಿ ಬಂದಿದೆ ಎಂದು ಒಂದು ಕ್ಷಣ ಯೋಚಿಸಬೇಕಾಗುತ್ತದೆ. ಹಿಂದೆ ಸೀತೆಯನ್ನು ರಾವಣ ಅಪಹರಿಸಿ ಲಂಕೆಗೆ ತೆಗೆದುಕೊಂಡು ಹೋದನೋ, ಅದೇ ರೀತಿ ಕಾಂಗ್ರೆಸ್ಸಿನವರು ಮಹಾತ್ಮ ಗಾಂಧಿಯವರ ಹೆಸರನ್ನು ಬಳಸಿಕೊಂಡಿದೆ. ಈ ನಕಲಿ ಕಾಂಗ್ರೆಸ್ ಪಕ್ಷವು, ಮಹಾತ್ಮ ಗಾಂಧಿಗೂ ಟೋಪಿ ಹಾಕುವ ಕೆಲಸ ಮಾಡಿದ್ದಾರೆ ಎಂದು ತಿಳಿಸಿದರು. ಅಷ್ಟೇ ಅಲ್ಲ; ಬಡತನ ನಿರ್ಮೂಲನೆ ಮಾಡುತ್ತೇವೆ; ಗರೀಬಿ ಹಟಾವೋ ಎಂದು ಹೇಳಿ, ಈ ದೇಶದ ಬಡವರಿಗೂ ಮಕ್ಮಲ್ ಟೋಪಿ ಹಾಕುವ ಕೆಲಸವನ್ನು ಕಾಂಗ್ರೆಸ್ಸಿನವರು ಮಾಡಿದ ಪರಿಣಾಮವಾಗಿ ಇಂಥ ಹೀನಾಯ ಪರಿಸ್ಥಿತಿ ಕಾಂಗ್ರೆಸ್ ಪಕ್ಷಕ್ಕೆ ದೇಶ ಮತ್ತು ರಾಜ್ಯದಲ್ಲಿ ಬಂದಿದೆ ಎಂದು ನುಡಿದರು.

ಕಾಂಗ್ರೆಸ್ ಪಕ್ಷವು ದೇಶದಲ್ಲಿ ಇಂಥ ಹೀನಾಯ ಪರಿಸ್ಥಿತಿಗೆ ಇವತ್ತು ಯಾಕೆ ಬಂದಿದೆ ಎಂದು ಬೆಳಕು ಚೆಲ್ಲಬೇಕಾಗಿತ್ತು. ಈ ದೇಶದಲ್ಲಿ 1961ರಲ್ಲಿ ಕಾಂಗ್ರೆಸ್ಸಿನ 364 ಸಂಸದರಿದ್ದು, 1984ರಲ್ಲಿ 415 ಸಂಸದರು ಸಂಸತ್ತಿನಲ್ಲಿದ್ದರು ಎಂದು ಗಮನಕ್ಕೆ ತಂದರು.

# ಪೈ ಏಟಿಗೆ ರೆಡ್ಡಿ ತಿರುಗೇಟು

### ಸಚಿವ ರಾಮಲಿಂಗಾರೆಡ್ಡಿ, ಮಾಜಿ ಸಿಎಫ್‌ಒ ಮೋಹನದಾಸ್ ಪೈ ನಡುವೆ ಮಾತಿನ ಚಕಮಕಿ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಸಚಿವ ರಾಮಲಿಂಗಾರೆಡ್ಡಿ ಹಾಗೂ ಮಾಜಿ ಸಿಎಫ್‌ಒ ಮೋಹನದಾಸ್ ಪೈ ಅವರಿಗೂ ಮಾತಿನ ಚಕಮಕಿ ಶುರುವಾಗಿದೆ. ಕರ್ನಾಟಕದ ಸಾರ್ವಜನಿಕ ಸಾರಿಗೆ ವ್ಯವಸ್ಥೆ ಬಗ್ಗೆ ಇನ್ಫೋಸಿಸ್‌ನ ಮಾಜಿ ಸಿಎಫ್‌ಒ ಟಿವಿ ಮೋಹನದಾಸ್ ಪೈ ಅವರು ಮಾಡಿದ್ದ ಪೋಸ್ಟ್‌ಗೆ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿಯವರು ನೀಡಿದ ಪ್ರತಿಕ್ರಿಯೆ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ.

**ಚರ್ಚೆಗೆ ಸಿದ್ಧ:** ಉದ್ಯಮಿ ಮತ್ತು ನಾಗರಿಕ ಕಾರ್ಯಕರ್ತ ಮೋಹನದಾಸ್ ಪೈ ಅವರು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಅವರೊಂದಿಗಿನ ಸಾರಿಗೆ ವಿಧಾನದ ಚರ್ಚೆಯನ್ನು ಮುಂದಕ್ಕೆ ಕೊಂಡೊಯ್ದಿದ್ದಾರೆ. ಸಾರಿಗೆ ಸಚಿವರು ಒಡ್ಡಿದ ಸವಾಲಿಗೆ 'ಚರ್ಚೆಗೆ ಬರಲು ನಾನು ಸಿದ್ಧ, ಆದರೆ ನಿಮ್ಮ ಎಂಡಿಯೊಂದಿಗೆ ಅಲ್ಲ, ನಿಮ್ಮೊಂದಿಗೆ' ಎಂದು ಹೇಳಿದ್ದಾರೆ.

**ಸಚಿವರ ತಿರುಗೇಟು:** ಖಾಸಗಿ ಬಸ್ಗಳಿಗೆ ಅನುಮತಿ ನೀಡಬೇಕೆಂಬ ಮೋಹನ್ ದಾಸ್ ಪೈ ಅವರ ಸಲಹೆಯನ್ನು ತಳ್ಳಿ ಹಾಕಿದ ಅವರು, ಸಾರ್ವಜನಿಕ ಸಾರಿಗೆ ವಾಣಿಜ್ಯ ಸೇವೆಯಲ್ಲ, ಅದು ಸಮಾಜದ ಮೇಲಿನ ಜವಾಬ್ದಾರಿಯಾಗಿದೆ ಎಂದು ಸಚಿವರು ತಿರುಗೇಟು ನೀಡಿದ್ದಾರೆ.



### ರಾಮಲಿಂಗಾ ರೆಡ್ಡಿ ಉತ್ತರ..?

ಪೈಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ, ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಮುಖಾಮುಖಿ ಚರ್ಚೆಗೆ ಬನ್ನಿ ಎಂದು ಮೋಹನ್ ದಾಸ್ ಪೈ ಅವರಿಗೆ ಆಹ್ವಾನಿಸಿದ್ದಾರೆ. ಯಾವುದೇ ವೇದಿಕೆಯಲ್ಲಿ ನಿಮ್ಮೊಂದಿಗೆ ನೇರ ಚರ್ಚೆ ನಡೆಸಲು ನಮ್ಮ ಬಿಎಂಟಿಸಿ ಎಂಡಿಯೇ ಸಾಕು. ದಯವಿಟ್ಟು ಬಂದು ಅವರೊಂದಿಗೆ ನೇರವಾಗಿ ವಾಸ್ತವಾಂಶಗಳನ್ನು ಚರ್ಚಿಸಿ. ನೀವು ಮುಂದಾಗಲು ಸಿದ್ಧರಿದ್ದೀರಾ, ಅಥವಾ ಕೇವಲ ಟ್ವೀಟ್ ಮಾಡುತ್ತಲೇ ಇರುತ್ತೀರಾ? ಎಂದು ಕೇಳಿದ್ದಾರೆ.

### ಪೈ ಅವರ ವಾದ ಏನು..?

ಮೋಹನ್ ದಾಸ್ ಪೈ ಅವರ ಅಭಿಪ್ರಾಯ ಕೇವಲ ಪಕ್ಷಪಾತಿಯಲ್ಲ ? ಅದು ಮೂಲತಃ ಅತಿರೇಕದ ಸಿದ್ಧಾಂತಪರವಾಗಿದೆ ಎಂದು ಕೂಡ ರಾಮಲಿಂಗಾ ರೆಡ್ಡಿ ಟೀಕಿಸಿದರು. ಮೋಹನ್ ದಾಸ್ ಪೈ ಅವರು ಸಾರ್ವಜನಿಕ ಸಾರಿಗೆಯನ್ನು ಲೆಕ್ಕಪತ್ರದ ದೃಷ್ಟಿಕೋನದಿಂದ ನೋಡುತ್ತಾರೆ, ಆದರೆ ಸರ್ಕಾರವು ಅದನ್ನು 1.5 ಕೋಟಿ ನಾಗರಿಕರಿಗೆ ನೀಡುವ ಸೇವೆಯಾಗಿ ನೋಡುತ್ತದೆ ಎಂದು ಹೇಳಿದರು.

### ಬಸ್‌ಗಳ ಅಗತ್ಯತೆ ಬಗ್ಗೆ..?

ಬೆಂಗಳೂರಿನ ಪ್ರಸ್ತುತ ಸಾರಿಗೆಯ ಅಸಮರ್ಪಕತೆಯನ್ನು ಎತ್ತಿ ತೋರಿಸಿದ ಮೋಹನ್ ದಾಸ್ ಪೈ, ಈಗಿರುವ 7,000 ಬಿಎಂಟಿಸಿ ಬಸ್‌ಗಳು ನಗರದ ಬೆಳೆಯುತ್ತಿರುವ ಪ್ರಯಾಣದ ಅಗತ್ಯಗಳನ್ನು ಪೂರೈಸಲು ಸಾಕಾಗುವುದಿಲ್ಲ. ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು ಮತ್ತು ವಿಶ್ವಾಸಾರ್ಹ ಸಾರ್ವಜನಿಕ ಸಾರಿಗೆಯನ್ನು ಒದಗಿಸಲು ದೊಡ್ಡ ಮತ್ತು ಸಣ್ಣ ವಾಹನಗಳು ಸೇರಿದಂತೆ ಕನಿಷ್ಠ 15,000 ಬಸ್‌ಗಳ ಅಗತ್ಯವಿದೆ ಎಂದು ಮೋಹನ್ ದಾಸ್ ಪೈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.



### ಪೈ ಮಾಡಿರುವ ಟೀಕೆಯೇನು?

ಮೂರು ವರ್ಷಗಳಿಂದ ಬಸ್ಗಳ ಕೊರತೆಯಿದೆ ಎಂದು ಆರೋಪಿಸಿ, ಸಮರ್ಪಕ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಖಚಿತಪಡಿಸಲು ಸರ್ಕಾರ ವಿಫಲವಾಗಿದೆ ಎಂದು ಮೋಹನ್ ದಾಸ್ ಪೈ ಎಕ್ಸ್ ಖಾತೆಯಲ್ಲಿ ಒಂದು ಪೋಸ್ಟ್ ಹಾಕಿದರು. ಯಾರು ನಡೆಸಿದರೂ ಪರವಾಗಿಲ್ಲ, ನಾಗರಿಕರಿಗೆ ವಿಶ್ವಾಸಾರ್ಹ ಸಾರ್ವಜನಿಕ ಸಾರಿಗೆ ಅಗತ್ಯವಿದೆ ಎಂದು ಹೇಳಿ, ಸೇವೆಗಳನ್ನು ಒದಗಿಸಲು ರಾಜ್ಯವು ಖಾಸಗಿ ಸಂಚಾಲಕರಿಗೆ ಅನುಮತಿ ನೀಡಬೇಕು ಎಂದು ಬರೆದುಕೊಂಡಿದ್ದಾರೆ.

## ಅಪೆಕ್ಸ್ ಬ್ಯಾಂಕ್ ಚುನಾವಣೆ ಮುಂದೂಡಿಕೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷ ಸ್ಥಾನಕ್ಕೆ ಜ.29ರಂದು ನಡೆಯಬೇಕಿದ್ದ ಚುನಾವಣೆಯನ್ನು ಕೊನೆಯ ಕ್ಷಣದಲ್ಲಿ ಮುಂದೂಡಲಾಗಿದೆ.

ಬೆಳಿಗ್ಗೆ 11 ಗಂಟೆಗೆ ನಾಮಪತ್ರ ಪ್ರಕ್ರಿಯೆ ಆರಂಭವಾದಾಗ ಬಿಜೆಪಿ ಮಾಜಿ ಶಾಸಕ ಬಿಜೆಪಿಯ ಬೆಳ್ಳಿ ಪ್ರಕಾಶ್ ಅಧ್ಯಕ್ಷ ಸ್ಥಾನಕ್ಕೆ ಅರ್ಜಿ ಸಲ್ಲಿಸಿದ್ದರು. ಅಧ್ಯಕ್ಷ ಸ್ಥಾನದ ಅಭ್ಯರ್ಥಿ ಆಯ್ಕೆಯಲ್ಲಿ ಕಾಂಗ್ರೆಸ್ ಬೆಂಗಲಿತರ ಮಧ್ಯೆ ಒಮ್ಮತ ಮೂಡದ ಕಾರಣ ಯಾರೂ ಅರ್ಜಿ ಸಲ್ಲಿಸಲಿಲ್ಲ. ಕೊನೆಗೆ ಒಮ್ಮತದ ಅಭ್ಯರ್ಥಿಯ ಆಯ್ಕೆಗೆ ಸಹರಿಸಲು ಬೆಳ್ಳಿ ಪ್ರಕಾಶ್ ಸಮ್ಮತಿಸಿ, ನಾಮಪತ್ರ ವಾಪಸ್ ಪಡೆದರು. ಹಾಗಾಗಿ, ಚುನಾವಣೆಯನ್ನು ಮುಂದೂಡಲಾಯಿತು.

ಸಿದ್ದರಾಮಯ್ಯ ಬಣದಿಂದ ಕೆ.ಎನ್.ರಾಜಣ್ಣ ಮತ್ತೊಮ್ಮೆ ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರಾಗಬೇಕೆಂದು ಪಟ್ಟು ಹಿಡಿದಿದ್ದಾರೆ. ಇನ್ನೊಂದೆಡೆ ಡಿಕೆ ಶಿವಕುಮಾರ್ ಬಣದ ನಾಯಕರು ತಾವು ಆಗುತ್ತೇವೆಂದು ಹಠಕ್ಕೆ ಬಿದ್ದಿದ್ದಾರೆ. ಹೀಗಾಗಿ ಸಿಎಂ ಡಿಸಿಎಂ ಬಣ ರಾಜಕೀಯ ತೀವ್ರ ಸ್ವರೂಪ ಪಡೆದುಕೊಂಡಿದ್ದರಿಂದ ಚುನಾವಣೆ ಮುಂದೂಡಲಾಗಿದೆ.

## ಮೋದಿ ಮಾದರಿ ಸರ್ಕಾರ ಏಕಿಲ್ಲ..?

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವನ್ನು ಹೊಗಳ್ತಾನೇ ರಾಜ್ಯ ಬಿಜೆಪಿಗೆ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ್ ತಿರುಗೇಟು ನೀಡಿದ್ದಾರೆ. ವಿಧಾನಸಭೆಯಲ್ಲಿ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಬೆಂಬಲಿಸಿ ಮಾತನಾಡಿ, ನರೇಂದ್ರ ಮೋದಿಯನ್ನು ಹೊಗಳುತ್ತೀರಿ. ಆದ್ರೆ ಈ ಹಿಂದೆ ಕರ್ನಾಟಕದಲ್ಲಿ ಮೋದಿ ಮಾದರಿ ಸರ್ಕಾರ ಏಕೆ ಕೊಟ್ಟಿಲ್ಲ ಎಂದು ಪ್ರಶ್ನಿಸಿದರು

ತಪ್ಪು ಯಾರೇ ಮಾಡಿದರೂ ತಪ್ಪೇ. ನಾನು ಯಾರನ್ನು ವಹಿಸಿ ಮಾತನಾಡುವುದಿಲ್ಲ ಎಂದು ಬಿಜೆಪಿ ನಾಯಕರಿಗೆ ಟಾಂಗ್ ಕೊಟ್ಟಿದ್ದಾರೆ.

ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ನಡುವೆ ಕೆಲವೊಂದು ಸಮಸ್ಯೆಗಳು ಇದ್ದರೂ ಅದನ್ನು ಯಾವ ರೀತಿಯಲ್ಲಿ ಪರಿಹಾರ ಮಾಡಬೇಕು ಎಂಬ ಚರ್ಚೆ ರಾಜ್ಯಪಾಲರ ಭಾಷಣದಲ್ಲಿ ಆಗಬೇಕು. ರಾಜ್ಯಪಾಲರ ಭಾಷಣದಲ್ಲಿ ಕೇಂದ್ರ ಸರ್ಕಾರದ ಟೀಕೆ ಹಾಗೂ ಗ್ಯಾರಂಟಿ ಜಪ ಬಿಟ್ಟರೆ ಘರ್ಷಣೆಯ ಹಾದಿಯಲ್ಲಿ ಸಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

# ದುಶ್ಚಟಗಳಿಂದ ಯುವ ಶಕ್ತಿ ದೂರವಿರಲು ಶ್ರೀಗಳ ಕರೆ



• ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ

ಯುವ ಪೀಳಿಗೆ ದುಶ್ಚಟಗಳಿಗೆ ಒಳಗಾಗದೇ ಉತ್ತಮ ಸಂಸ್ಕಾರ, ಶಿಸ್ತು ಹಾಗೂ ನೈತಿಕ ಮೌಲ್ಯಗಳನ್ನು ಅಳವಡಿಸಿಕೊಂಡು ಸಮಾಜದ ಪ್ರಗತಿಗೆ ಕೈಜೋಡಿಸಬೇಕು ಎಂದು ಹಾರಕೂಡಶ್ರೀ ಅವರು ಕರೆ ನೀಡಿದರು.

ಗುರುವಾರ ಬಸವಕಲ್ಯಾಣ ತಾಲೂಕಿನ ಇಸ್ಲಾಂಪೂರ ಗ್ರಾಮದ ಶ್ರೀ ದತ್ತಾತ್ರೆಯ ಮೂರ್ತಿ ಪ್ರತಿಷ್ಠಾಪನಾ ಜರುಗಿಸಿ ಸಮಾರಂಭವನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.



ಅವರು, ಮದ್ಯಪಾನ, ಮಾದಕ ವಸ್ತು ಸೇವನೆ, ಜೂಜು ಸೇರಿದಂತೆ ದುಶ್ಚಟಗಳು ಯುವಕರ ಭವಿಷ್ಯವನ್ನು ಹಾಳುಮಾಡುತ್ತಿದ್ದು, ಕುಟುಂಬ ಹಾಗೂ ಸಮಾಜದ ಮೇಲೆ ದುಷ್ಪರಿಣಾಮ ಬೀರುತ್ತಿವೆ ಎಂದರು. ಯುವಕರು ಅಧ್ಯಯನ, ಕ್ರೀಡೆ, ಸೇವಾ ಮನೋಭಾವ ಹಾಗೂ ಧಾರ್ಮಿಕ ಚಿಂತನೆಗಳತ್ತ ಮನಸ್ಸು ಕೇಂದ್ರೀಕರಿಸಬೇಕು ಎಂದು ಸಲಹೆ ನೀಡಿದರು.

### ಸಶಕ್ತ ಸಮಾಜ ನಿರ್ಮಾಣ

ಪೋಷಕರು ಮಕ್ಕಳ ಮೇಲಿನ ಗಮನ ಹೆಚ್ಚಿಸಬೇಕು ಹಾಗೂ ಶಿಕ್ಷಕರು ವಿದ್ಯಾರ್ಥಿಗಳಿಗೆ ನೈತಿಕ ಶಿಕ್ಷಣ ನೀಡುವ ಮೂಲಕ ಸದ್ಗುಣಗಳನ್ನು ಬೆಳೆಸಬೇಕು ಎಂದು ಹಾರಕೂಡಶ್ರೀ ಹೇಳಿದರು. ಯುವಶಕ್ತಿ ಸರಿಯಾದ ದಾರಿಯಲ್ಲಿ ಸಾಗಿದಾಗ ಮಾತ್ರ ಶಾಂತ, ಸದೃಢ ಹಾಗೂ ಸಶಕ್ತ ಸಮಾಜ ನಿರ್ಮಾಣ ಸಾಧ್ಯವೆಂದು ಅವರು ಅಭಿಪ್ರಾಯಪಟ್ಟರು. ಮೂರ್ತಿಯನ್ನು ಗ್ರಾಮದ ಮೂಲವಾಸಿ ಮಾರುತಿ ತಿಪ್ಪಣ್ಣ ಕುಂಬಾರ ರವರು ನೀಡಿದ್ದು ಉತ್ತಮ ಕಾರ್ಯವಾಗಿದೆ. ಇದೆ ತರಹ ತಾವುಗಳು ಗ್ರಾಮ ಹಿತಕ್ಕಾಗಿ ಯುವಕರು ದುಡಿಯಬೇಕು ಎಂದು ಹಾರಕೂಡಶ್ರೀ ತಿಳಿಸಿದ್ದಾರೆ.

### ಗಣ್ಯಾತಿ ಗಣ್ಯರು ಹಾಜರು

ಮಾಜಿ ಜಿಪಂ ಸದಸ್ಯ ವೀರಣ್ಣ ಪಾಟೀಲ, ಮಲ್ಲಮ್ಮ ನುಡಿ ಪ್ರಧಾನ ಸಂಪಾದಕ ಮಾಣಿಕರೆಡ್ಡಿ ಕೌಡಾಳೆ, ಹಿರಿಯರಾದ ನಾಗರೆಡ್ಡಿ ಬೈಯಾನ್, ಪ್ರಭುರೆಡ್ಡೆ ಕೌಡಾಳೆ, ದೇವಸ್ಥಾನ ಸಮಿತಿಯ ಅಧ್ಯಕ್ಷ ಸುಭಾಷರೆಡ್ಡಿ ಬೆಲ್ಲಂಕುಮಡಾ. ಕಾಶಣ್ಣಾ ಕಾಡಾದಿ, ಮುಖಂಡರಾದ ಇರಪ್ಪಾ ಕೌಡಾಳೆ, ಮಲ್ಲು ಕಾಡದಿ, ಸಂತೋಷ ಕಾಡದಿ, ವೆಂಕಡರಡ್ಡಿ, ಭೀಮರಡ್ಡಿ ಪುಟ್ಟಾ ಸೇರಿದಂತೆ ಇತರರಿದ್ದರು. ಮಾಜಿ ಗ್ರಾಮ ಪಂಚಾಯತ ಸದಸ್ಯರುಗಳು, ಅನೇಕ ಭಕ್ತರು ಹಾಗೂ ಯುವಕರು ಉಪಸ್ಥಿತರಿದ್ದು, ಹಾರಕೂಡಶ್ರೀ ಅವರ ಸಂದೇಶಕ್ಕೆ ಮೆಚ್ಚುಗೆ

**ಮಹಾತ್ಮ ಗಾಂಧಿಯನ್ನು ಈ ದೇಶದಲ್ಲಿ ಮತ್ತೆ ಮತ್ತೆ ಕೊಲ್ಲಲಾಗುತ್ತಿದೆ: ಬಿ.ಕೆ ಹರಿಪ್ರಸಾದ್**

# ರೈತರ ವಿವಿಧ ಬೇಡಿಕೆ ಈಡೇರದಿದ್ದಲ್ಲಿ
## ಫೆ. 5 ರಂದು ರಸ್ತೆ ರೋಕೋ ಆಂದೋಲನ ಎಚ್ಚರಿಕೆ



**ಮಲ್ಲಮ್ಮ ನುಡಿ ವಾರ್ತೆ ಕಮಲನಗರ:**

ಕಬ್ಬು ಕಟಾವು ಅವಧಿ ಮುಗಿದಿದ್ದರೂ ಕಟಾವು ಕಾರ್ಯಕ್ಕೆ ಮುಂದಾಗದಿರುವ ಜಿಲ್ಲೆಯ ಸಕ್ಕರೆ ಕಾರ್ಖಾನೆ ಅಧಿಕಾರಿಗಳ ವಿರುದ್ಧ ಹಾಗೂ ಪರಿಹಾರ ಹಣ ಜಮಾ ಆಗದೆ ಇರುವುದು ಕೂರಿತು ಕರ್ನಾಟಕ ರಾಜ್ಯ ರೈತ ಸಂಘ ಹಾಗ ಹಸಿರು ಸೇನೆ ತಾಲೂಕು ಘಟಕ ಅಧ್ಯಕ್ಷ ಪ್ರವೀಣ ಕುಲಕರ್ಣಿ ಹಾಗೂ ಸ್ಥಳಿಯ ರೈತರು ನೇತೃತ್ವದಲ್ಲಿ ತಹಶೀಲ್ದಾರ್ ಅಮಿತಕುಮಾರ ಕುಲಕರ್ಣಿ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಕಾರ್ಯದರ್ಶಿ ಪ್ರಶಾಂತ ಖಾನಾಪುರೆ ಮಾತನಾಡಿ, ಕಮಲನಗರ ತಾಲ್ಲೂಕಿನ ಕಬ್ಬು ಬೆಳೆಗಾರರ ಕಬ್ಬು ಕಟವು ನಿಗಧಿತ ಸಮಯದಲ್ಲಿ ತೆಗೆದುಕೊಂಡು ಹೋಗಲು ನಿಮ ಪಾಲಿಸುತಿಲ್ಲ. ರೈತರು ಕೇಳಿದರೇ ವಾಹನಗಳಿಲ್ಲ. ಎನ್ನುವವರು ನೆರೆ ರಾಜ್ಯಗಳಿಂದ ಕಬ್ಬು ತರುತಿರುವುದು ಸರಿಯಲ್ಲ. ಇದನ್ನು ಮೊದಲು ನಿಲ್ಲಿಸಬೇಕು. ಇಲ್ಲವಾದಲ್ಲಿ ಮೂಂದಿನ ದಿನಗಳಲ್ಲಿ ರೈತ ಸಂಘಟನೆ ರಸ್ತೆಗಿಳಿದು ರಸ್ತೆ ರೋಕೋ ಆಂಧೋಲನ ಮಾಡಲಾಗುವುದು ಎಂದು ಎಚ್ಚರಿಸಿದರು.

ಕಬ್ಬು ಕಟಾವು ಮಾಡುವ ಲೇಬರ್ ಪ್ರತಿ ಎಕರೆಗೆ ರೂ. 3 ಸಾವಿರದಿಂದ 4 ಸಾವಿರ ರೂ. ಬೇಡಿಕೆಯಿದೆ. ಪ್ರತಿ ವಾಹನಕ್ಕೆ ಎಂಟ್ರಿ ಮಾಡುವ ನೆಪದಲ್ಲಿ 5 ನೂರುದಿಂದ 6 ನೂರು ರೂ. ಪಡೆದುಕೊಳ್ಳುತ್ತಿದ್ದು, ರೈತರಿಗೆ ಇದು ಹೊರೆಯಾಘಿದೆ. ಇದನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿದರು.

ನಾಲ್ಕೈದು ವರ್ಷಗಳಿಂದ ಅತಿವೃಷ್ಟಿ ಅನಾವೃಷ್ಟಿ ಅವಾಂತರಗಳಿಂದ ರೈತ ಬೆಳೆ ಕಳೆದುಕೊಂಡು ರೋಷಿಹೋಗಿದ್ದಾರೆ. ರೈತರು ಖಾಸಗಿ ಮತ್ತು ಸರ್ಕಾರದಿಂದ ಸಾಲ ಪಡೆದು ಕಷ್ಟಕ್ಕೆ ಸಿಲುಕಿದುಂಟ್ಟು. ರೈತ ಸಾಲ ಮರುಪಾವತಿ ಮಾಡಲು ವಿಫಲಗೊಂಡ ಪರಿಣಾಮ ರೈತರು ಹೆದರಿ ಆತ್ಮಹತ್ಯೆಗೆ ಶರಣರಾಗುತ್ತಿದ್ದಾರೆ. ಹೀಗಾಗಿ, ಳಿದೆಲ್ಲ ರೈತರು ಬೆಳೆ ಹಾನಿ ಪರಿಹಾರ ಮತ್ತು ಬೆಳೆ ವಿಮೆ ಖಾತೆಗೆ ಜಮಾ ಆಗಬೇಕು ಎಂದು ಆಗ್ರಹಿಸಿದರು.

ರೈತ ಸಂಘ ಗೌರವಧ್ಯಕ್ಷ ವೈಜಿನಾಥ ವಡ್ಡೆ ಮಾತನಾಡಿ, ಕೂಡಲೇ ರೈತರ ನ್ಯಾಯಯತ ಬೇಡಿಕೆಗಳು ಈಡೇರಿಸಬೇಕು. ವಿಳಂಬ ನೀತಿ ಅನುಸರಿಸಿದ್ದಲ್ಲಿ ಫೆ.5 ರಂದು ಬೆಳಿಗ್ಗೆ 11 ಗಂ-ಟೆಗೆ ಅಲ್ಲಮ ಪ್ರಭು ವೃತ್ತ ಬಳಿ ರಸ್ತೆ ರೋಕೋ ಆಂದೋಲನ ಮಾಡಲಾಗುವುದು ಎಂದು ಎಚ್ಚರಿಸಿದ್ದರು.ಈ ಸಂದರ್ಭದಲ್ಲಿ ರೈತರಾದ ವಿಜಯಕುಮಾರ ಶೇಟಕಾರ, ನಾಗೇಶ ರಾಂಪುರೆ, ಸಾಯಿನಾಥ ಕಾಂಬ್ಳೆ, ಮನೋಜಕುಮಾರ ಪೊಲೀಸ್ ಪಾಟೀಲ, ಸೂರ್ಯಕಾಂತ ಶಿವಣಕರ, ಸಂತೋಷ ಕಾಡೋದೆ, ರಾಜಕುಮಾರ ವಡಗಾಂವೆ, ಮಹಾದೇವ, ಸಂಗಮೇಶ, ಬಾಬುರಾವ ಪಾಟೀ ಡಿಗ್ಗಿ, ಕಿರಣ, ರವಿ, ಪರಶುರಾಮ, ಮಹೇಶ ಭೀಮರಾವ, ಜಗನಾಥ, ಉಪಾಧ್ಯಕ್ಷ ಭೀಮರಾವ ಕಣಜೆ, ರಂಗಾರಾವ ಜಾಧವ, ಅಣ್ಣಾರಾವ ಭವರಾ ಸೇರಿದಂತೆ ತಾಲೂಕಿನ ವಿವಿಧ ಹಳ್ಳಿಯ ಅನೇಕ ರೈತರು ಉಪಸ್ಥಿತರಿದ್ದರು.

# ಅಕ್ರಮ ಪಡಿತರ ಅಕ್ಕಿ ಜಪ್ತಿ



**• ಮಲ್ಲಮ್ಮ ನುಡಿ ವಾರ್ತೆ,ಸಿಂಧನೂರು**

ತಾಲೂಕಿನ ಸಾಸಲಮರಿ ಕ್ಯಾಂಪ್ ನ ಸುತ್ತಮುತ್ತ ಬರುವ ವಿವಿಧ ಗ್ರಾಮಗಳಲ್ಲಿ ನ್ಯಾಯ ಬೆಲೆ ಅಂಗಡಿಗಳ ಸಾರ್ವಜನಿಕರು ಮನೆ ಮನೆಗೆ ಹೋಗಿ ಪಡಿತರ ಅಕ್ಕಿಯನ್ನು ಕಡಿಮೆ ಬೆಲೆಗೆ ಖರೀದಿಸಿ ಸಾಸಲಮರಿ ಕ್ಯಾಂಪ್ ನಲ್ಲಿ ರಾಮದೇವ್ ದೇವಸ್ಥಾನ ಪಕ್ಷದ ಸಂದಿಯಲ್ಲಿ ಅಕ್ರಮವಾಗಿ ಸ್ಟಾಕ್ ಮಾಡಿ ಹನುಮಂತ ತಂದೆ ಯಂಕಪ್ಪ ಎಂಬಾತ ಕಳ್ಳ ಸಂತೆಯಲ್ಲಿ ಮಾರಾಟ ಮಾಡುತ್ತಿದ್ದಾನೆ ವಿಷಯ ಇಂದು ದಿನಾಂಕ.29-01-2026 ರಂದು ಬೆಳಿಗ್ಗೆ ನನಗೆ ಬಾತ್ಮಿದಾರರಿಂದ ಬೆಳಿಗ್ಗೆ 8-30 ಗಂಟೆಗೆ ನನಗೆ ಸಿರುಗುಪ್ಪ ರಸ್ತೆಯಲ್ಲಿ ಬರುವ ಸಾಸಲಮರಿ ಕ್ಯಾಂಪಿನ ನಂದಿನಿ ಸುರೇಶ ಇವರ ಮನೆಯ ಪಕ್ಕದ ಸಾರ್ವಜನಿಕ ರಸ್ತೆಯಲ್ಲಿ ರಸ್ತೆಯಲ್ಲಿ ಪಡಿತರ ಅಕ್ಕಿಯನ್ನು ಅಕ್ರಮವಾಗಿ ದಾಸ್ತಾನು ಮಾಡಿರುವುದರ ಬಗ್ಗೆ ಖಚಿತ ಮಾಹಿತಿ ಬಂದ ಮೇರೆಗೆ ನಾನು ತಹಸೀಲ್ ಆಹಾರ ಶಿರಸ್ತೇದಾರ್ ಆನಂದ ಮೋಹನ್ ಮತ್ತು ಸಿಂಧನೂರು ಗ್ರಾಮೀಣ ಪೊಲೀಸ್ ಠಾಣೆಯ ಮೌನೇಶ ರಾಠೋಡ್ ಪಿ.ಎಸ್.ಐ (ಕಾ.ಸು) ರವರಿಗೆ ಕರೆ ಮಾಡಿ ಅವರನ್ನು ಮತ್ತು ಅವರ ಸಿಬ್ಬಂದಿಯವರಾದ ದೌಲತಸಾಬ ಎ.ಎಸ್.ಐ,ಮಲ್ಲಿಕಾರ್ಜುನ ಪಿಸಿ 591, ಅಮರೇಗೌಡ ಪಿಸಿ 475 ರವರುಗಳನ್ನು ತಹಶೀಲ್ ಕಾರ್ಯಾಲಯದ ಆವರಣದಲ್ಲಿ ಬರಮಾಡಿಕೊಂಡು ಉಭಯ ಪಂಚರೊಂದಿಗೆ ಠಾಣೆಯ ಸರ್ಕಾರಿ ಜೀಪಿನಲ್ಲಿ ಘಟನಾ ಸ್ಥಳಕ್ಕೆ ಹೋಗಿ ದಾಳಿ ಜರುಗಿಸಿದಾಗ, ಸ್ಥಳದಲ್ಲಿ ಪ್ಲಾಸ್ಟಿಕ್ ಬರಕಾ ಚೀಲಗಳಲ್ಲಿ ದಾಸ್ತಾನು ಮಾಡಿದ್'ದ ಚೀಲಗಳು ಕಂಡು ಬಂದಿದ್ದು,

ಅವುಗಳನ್ನು ಪಂಚರ ಸಮಕ್ಷಮದಲ್ಲಿ ಒಂದೊಂದಾಗಿ ಚೀಲ ಬಾಯಿ ತೆಗೆದು ಪರಿಶೀಲನೆ ಮಾಡಲಾಗಿ ಒಟ್ಟು 33 ಬಾಯಿಕಟ್ಟಿರುವ ತುಂಬಿದ ಚೀಲಗಳು ಇದ್ದು, ಪ್ರತಿ ಚೀಲದಲ್ಲಿ ಅಂದಾಜು 40 ರಿಂದ 50 ಕೆ.ಜಿ ತೂಕ ಪಡಿತರ ಅಕ್ಕಿ ಇದ್ದು, ಪ್ರತಿ ಕೆಜಿಗೆ ರೂ.15/- ಗಳಂತೆ ಒಟ್ಟು ಅ.ಕಿ.ರೂ.23,700/- ರೂ.ಬೆಲೆಬಾಳುವುದು ಅಕ್ಕಿ ಇರುತ್ತದೆ.

ಸ್ಥಳೀಯರಲ್ಲಿ ವಿಚಾರಣೆ ಮಾಡಲಾಗಿ ಹನುಮಂತ ತಂದೆ ಯಂಕಪ್ಪ, ವಯ-29, ಸಾ: ಅಂಭಾಮಠ ಕ್ರಾಸ್, ವೆಂಕಟೇಶ್ವರ ಕ್ಯಾಂಪ್, ತಾ:ಸಿಂಧನೂರು ಎನ್ನುವಾತನು ಇವುಗಳನ್ನು ಪಡಿತರ ಚೀಟಿದಾರರಿಂದ ಕಡಿಮೆ ಬೆಲೆಗೆ ಪಡಿತರ ಅಕ್ಕಿಯನ್ನು ಖರೀದಿ ಮಾಡಿ ಹೆಚ್ಚಿನ ಬೆಲೆಗೆ ಕಾಳಸಂತೆಯಲ್ಲಿ ಮಾರಾಟ ಮಾಡಲು ಅಕ್ರಮವಾಗಿ ಸಾಗಾಣಿಕೆ ಮಾಡಲು ಇಲ್ಲಿ ದಾಸ್ತಾನು ಮಾಡಿರುವುದಾಗಿ ತಿಳಿದು ಬಂದಿರುತ್ತದೆ.

ನಂತರ ಸದರಿ ಅಕ್ಕಿ ತುಂಬಿದ ಚೀಲಗಳನ್ನು ದುಲಾಲ್ ವೆಂಕಟೇಶ ಎನ್ನುವವರ ಬುಲೆರೋ ಮ್ಯಾಕ್ಸ್ ಗೂಡ್ಸ್ ಕ್ಯಾರಿಯರ್ ವಾಹನದಲ್ಲಿ ಲೋಡ್ ಮಾಡಿಕೊಂಡು ಠಾಣೆಗೆ ತಂದಿದ್ದು, ಅಕ್ರಮವಾಗಿ ಪಡಿತರ ಅಕ್ಕಿಯನ್ನು ದಾಸ್ತಾನು ಮಾಡಿರುವ ಹನುಮಂತ ತಂದೆ ಯಂಕಪ್ಪ, ವಯ-29, ಸಾ:ಅಂಭಾಮಠ ಕ್ರಾಸ್, ವೆಂಕಟೇಶ್ವರ ಕ್ಯಾಂಪ್, ತಾ:ಸಿಂಧನೂರು ಇವನ ವಿರುದ್ಧ ಕಲಂ : 3 ಮತ್ತು 7 ಅಗತ್ಯ ವಸ್ತುಗಳ ಕಾಯ್ದೆ - 1955 ಅಡಿಯಲ್ಲಿ ಕೇಸ್ ದಾಖಲಿಸಿಕೊಂಡಿದ್ದಾರೆ.

# ನಶೆಯ ವಿರುದ್ಧ ಪೊಲೀಸ್ ಗರ್ಜನೆ



**• ಮಲ್ಲಮ್ಮ ನುಡಿ ವಾರ್ತೆ,ಕಮಲನಗರ:**

ಕಮಲನಗರ ಪಿ.ಎಸ್.ಐ ಆಶಾ ರಾಠೋಡ ಅವರ ನೇತೃತ್ವದಲ್ಲಿ ನಡೆದ ಅಭಿಯಾನದಲ್ಲಿ, ಮಾದಕ ವ್ಯಸನದಿಂದ ಕುಟುಂಬಗಳು ಬೀದಿಗೆ ಬೀಳುತ್ತಿರುವ ಬಗ್ಗೆ ಸಾರ್ವಜನಿಕರಿಗೆ ಶುಕ್ರವಾರ ಮನವರಿಕೆ ಮಾಡಿಕೊಡಲಾಯಿತು.ಠಾಣೆಯ ಸಿಬ್ಬಂದಿಗಳೊಂದಿಗೆ ಬೀದಿಗಿಳಿದ ಅವರು, ಮಾದಕ ದ್ರವ್ಯಗಳ ಜಾಲದಿಂದ ದೂರವಿರಲು ಕರೆ ನೀಡಿದರು.

ಈ ವೇಳೆ ಮಾತನಾಡಿ,ಕ್ಷಣಿಕ ಸುಖಕ್ಕಾಗಿ ಮಾದಕ ದ್ರವ್ಯಗಳಿಗೆ ದಾಸರಾಗಿ ಜೀವನ ಹಾಳುಮಾಡಿಕೊಳ್ಳದಂತೆ ಎಚ್ಚರಿಕೆ ವಹಿಸಿ,ಸಮಾಜದಲ್ಲಿ ಮಾದಕ ವಸ್ತುಗಳ ಮಾರಾಟ ಅಥವಾ ಸೇವನೆ ಕಂಡುಬಂದಲ್ಲಿ ಕೂಡಲೇ ಪೊಲೀಸರಿಗೆ ಮಾಹಿತಿ ನೀಡಲು ತಿಳಿಸಿದರು.

ನಮ್ಮ ಠಾಣಾ ವ್ಯಾಪ್ತಿಯನ್ನು ನಶಾ ಮುಕ್ತ ಮಾಡುವುದೇ ನಮ್ಮ ಗುರಿ. ಯುವಕರು ಮಾದಕ ಜಾಲದ ಆಕರ್ಷಣೆಗೆ ಒಳಗಾಗದೆ, ಉತ್ತಮ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ಹೇಳಿದರು.

# ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಗಾಂಧೀಜಿಯ ಪಾತ್ರ ಅವಿಸ್ಮರಣೀಯ



**• ಮಲ್ಲಮ್ಮ ನುಡಿ ವಾರ್ತೆ ,ಭಾಲ್ಕಿ :**

ಭಾರತದ ಸ್ವತಂತ್ರ ಚಳುವಳಿಯಲ್ಲಿ ಮಹಾತ್ಮ ಗಾಂಧೀಜಿ ಅವರ ಪಾತ್ರ ಅವಿಸ್ಮರಣೀಯ ಎಂದು ಎನ್ ಎಸ್ ಎಸ್ ಅಧಿಕಾರಿ ಡಾ. ಬಿ. ಸೂರ್ಯಕಾಂತ್ ಅಭಿಪ್ರಾಯಪಟ್ಟರು. ಭೀಮಣ್ಣ ಖಂಡ್ರೆ ತಾಂತ್ರಿಕ ಮಹಾವಿದ್ಯಾಲಯದಲ್ಲಿ ರಾಷ್ಟ್ರಪಿತ ಮಹಾತ್ಮಾ ಗಾಂಧಿಜಿಯವರ ಪುಣ್ಯಸ್ಮರಣೆಯ ಪ್ರಯುಕ್ತ ಹುತಾತ್ಮ ದಿನಾಚರಣೆಯನ್ನು ಆಚರಿಸಿ ಮಾತನಾಡಿ, ದೇಶಕ್ಕೆ ಶಾಂತಿ, ಅಹಿಂಸೆ, ಸತ್ಯಾಗ್ರಹದ ಮೂಲಕ ದೇಶಕ್ಕೆ ಸ್ವತಂತ್ರ ಕೊಟ್ಟ ಮಹಾನುಭಾವರು ಎಂದು ಹೇಳಿದರು. ಗಾಂಧಿಜಿಯವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಮಾಲಾರ್ಪಣೆ ಮಾಡಿ ಕಾರ್ಯಕ್ರಮವನ್ನು ನಡೆಸಲಾಯಿತು. ಕಾರ್ಯಕ್ರಮದಲ್ಲಿ ಎನ್. ಎಸ್. ಎಸ್. ಘಟಕದ ಪದಾಧಿಕಾರಿಗಳಾದ ಪ್ರೊ .ಸುನೀಲ ಸಂಗಮೆ, ಪ್ರೊ. ಕಾವೇರಿ, ರಶ್ಮಿ, ಡಾ. ಮಲ್ಲಿಕಾರ್ಜುನ ಮುಗ್ಗಿ, ವಿಭಾಗ ಮುಖ್ಯಸ್ಥರಾದ ಡಾ. ಪ್ರಶಾಂತ ಸಂಗುಳಗಿ, ಪ್ರೊ.ಬಿ.ಎಮ್.ಪಾಟೀಲ, ಡಾ.ಅಶೋಕ ಕೋಟಿ, ಪ್ರೊ. ಯೋಗೇಶ ಗಂದಗೆ, ಡಾ. ವಿಜಯಕುಮಾರ ದುರ್ಗ, ಶ್ರೀ ಶಾಂತಕುಮಾರ ಶೆಟಕಾರ ಮುಂತಾದವರು ಭಾಗವಹಿಸಿದ್ದರು.

# ಹೃದಯಘಾತಕ್ಕೆ ವಿದ್ಯಾರ್ಥಿನಿ ಸಾವು

**• ಮಲ್ಲಮ್ಮ ನುಡಿ ವಾರ್ತೆ,ಕುಕನೂರು :**



ಪಿಯುಸಿ ಪಸ್ಟ ಇಯರ ವಿದ್ಯಾರ್ಥಿನಿ ಹೃದಯಘಾತಕ್ಕೆ ಬಲಿಯಾದ ಘಟನೆ ನಡೆದಿದೆ. ಕುಕನೂರು ತಾಲೂಕಿನ ರಾವಣಕಿ ಗ್ರಾಮದ ಕಾವ್ಯ ತಂದೆ ಶಿವಪ್ಪ ಚಲವಾದಿ ಎನ್ನುವ 17 ವರ್ಷದ ಕುಕನೂರು ಪಟ್ಟಣದ ಪಿಯುಸಿ ಫಸ್ಟ್ ಇಯರ್ ವಿದ್ಯಾರ್ಥಿ ಸಾವನ್ನಪ್ಪಿದೆ. ಮಂಗಳವಾರ ದಿವಸ ಮನೆಯಲ್ಲಿ ಕೆಲಸ ಮಾಡುವ ಸಂದರ್ಭದಲ್ಲಿ ಕುಸಿದು ಬಿದ್ದು ಸಾವನಪ್ಪಿದೆ ಎಂದು ತಿಳಿದುಬಂದಿದೆ.

# ಬೆಳ್ಳಂಬೆಳಗ್ಗೆ ಲೋಕಾಯುಕ್ತ ರೇಡ್



**• ಮಲ್ಲಮ್ಮ ನುಡಿ ವಾರ್ತೆ,ಕೊಪ್ಪಳ:**

ವೈದ್ಯಕೀಯ ವಿಜ್ಞಾನ ಸಂಸ್ಥೆ (ಕಿಮ್ಸ್) ಆಡಳಿತಾಧಿಕಾರಿ ಬಿ. ಕಲ್ಲೇಶ ಅವರ ಭಾಗ್ಯನಗರದಲ್ಲಿರುವ ಮನೆ ಮೇಲೆ ಶುಕ್ರವಾರ ಬೆಳಿಗ್ಗೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದು, ದಾಖಲೆಗಳನ್ನು ಪರಿಶೀಲಿನೆಯ ನಡೆಸುತ್ತಾರೆ.

ಕೊಪ್ಪಳ ಲೋಕಾಯುಕ್ತ ಡಿವೈಎಸ್ಪಿ ಲೋಕೇಶ್, ಗದಗ, ಹಾವೇರಿ, ರಾಯಚೂರು ಲೋಕಾಯುಕ್ತ ಅಧಿಕಾರಿಗಳಿಂದ ದಾಳಿ ಮಾಡಲಾಗಿದೆ ಎನ್ನಲಾಗುತ್ತಿದೆ.ಕಿಮ್ಸ್ ಆಡಳಿತಾಧಿಕಾರಿ ಬಿ. ಕಲ್ಲೇಶ್ ಅವರ ಸಂಬಂಧಿಕರ ಮನೆಗಳ ಮೇಲೂ ದಾಳಿ ನಡೆದಿದೆ. ಸುಮಾರು 30 ಜನರ ಅಧಿಕಾರಿಗಳ ತಂಡದಿಂದ ಏಕಕಾಲಕ್ಕೆ ದಾಳಿ ನಡೆಸಿ ದಾಖಲೆಗಳ ಪರಿಶೀಲನೆ ನಡೆಸಲಾಗಿದೆ.

ಈ ಹಿಂದೆ ವಾಲ್ಮೀಕಿ ನಿಗಮದ ಹಗರಣದಲ್ಲಿ ಕಲ್ಲೇಶ್ ರವರ ಹೆಸರು ಕೇಳಿಬಂದಿತ್ತು.

# ಶ್ರೀ ಸೋಮಲಿಂಗೇಶ್ವರರ 20ನೇ ಜಾತ್ರಾ ಮಹೋತ್ಸವ ಫೆ.3ರಂದು




**• ಮಲ್ಲಮ್ಮ ನುಡಿ ವಾರ್ತೆ,ಹುಮನಾಬಾದ:**

ತಾಲ್ಲೂಕಿನ ಚಿತ್ತಕೋಟಾ ಗ್ರಾಮದ ಶ್ರೀ ಸೋಮಲಿಂಗೇಶ್ವರ ದೇವಸ್ಥಾನದ 20ನೇ ಜಾತ್ರಾ ಮಹೋತ್ಸವ ಕಾರ್ಯಕ್ರಮ ಜರುಗಲಿದೆ. ಫೆ.1ರಿಂದ ಸಾಯಂಕಾಲ 4 ಗಂಟೆಗೆ ಡೊಂಗರಗಾಂವ ಕ್ರಾಸ್ ಹತ್ತಿರವಿರುವ ರೇವಣಸಿದ್ಧೇಶ್ವರ ಮಠ ಶ್ರೀ.ಷ.ಬ್ರ.ಉದಯರಾಜಯೋಗೇಂದ್ರ ಶಿವಾಚಾರ್ಯರಿಂದ ಷಟಸ್ಥಳ ಧ್ವಜಾರೋಹಣ ಮಾಡಲಿದ್ದಾರೆ. ಸಾಯಂಕಾಲ 5 ಗಂಟೆಗೆ ರಥಕ್ಕೆ ಕಳಸಾರೋಹಣ ಶಾಖಾ ಮಠ ಇಟಗಾ ಶ್ರೀ.ಷ.ಬ್ರ ಶಿವಸಿದ್ಧ ಸೋಮೇಶ್ವರ ಶಿವಾಚಾರ್ಯರು ಬೆಳಗಾಂವ ರವರ ಸ್ಪರ್ಶ ಹಸ್ತದಿಂದ ಸಾಯಂಕಾಲ 6 ಗಂಟೆಗೆ ಪಾದ ಪೂಜೆ ಜರುಗಲಿದೆ. ಸಾಯಂಕಾಲ 6:30 ಗಂಟೆಗೆ ಕಲ್ಲೂರ ಹಿರೇಮಠದ ಶ್ರೀ.ಷ.ಬ್ರ. ಮೃತ್ಯುಂಜಯ ಶಿವಯೋಗಿ ಶಿವಾಚಾರ್ಯರಿಂದ ಪ್ರವಚನ ಜರುಗಲಿದೆ. ಹಾಗೂ ಹಳ್ಳಿಖೇಡ (ಕೆ) ಶ್ರೀ ಮಲ್ಲಯ್ಯ ಚಿಕ್ಕಮಠ ಹಾಗೂ ಕಲ್ಬುರ್ಗಿಯ ಶ್ರೀ ಗುರುಶಾಂತಯ್ಯ ಸ್ಥಾವರಮಠ ಹಾಗೂ ಸಂಗಡಿಗರಿಂದ ಸಂಗೀತ ಕಾರ್ಯಕ್ರಮ ಜರುಗುವವು. ಫೆ.2 ರಂದು ಬೆಳಿಗ್ಗೆ 8 ಗಂಟೆಗೆ ಕರ್ತ್ರು ಗದ್ದುಗೆಗೆ ಸಂಗೀತ ರುದ್ರಾಭಿಷೇಕ ಪೂಜೆ ಜರುವುವುದು. ಬೆಳಿಗ್ಗೆ 9 ಗಂಟೆಯಿಂದ ಸದಲಾಪೂರದ ಹಿರೇಮಠ ಸಂಸ್ಥಾನದ ಪೀಠಾಧಿಪತಿಯಾದ ಶ್ರೀ ಷ.ಬ್ರ ಸಿದ್ಧಲಿಂಗ ಶಿವಾಚಾರ್ಯರ ನೇತೃತ್ವದಲ್ಲಿ ಕುಂಭಮೇಳ ಜರುಗಲಿದೆ. ಸಾಯಂಕಾಲ 4 ಗಂಟೆಗೆ ಅಗ್ನಿ ಪೂಜೆ ಜರುಗಲಿದೆ. ಸಾಯಂಕಾಲ 6 ಗಂಟೆಗೆ ಕಲ್ಲೂರ ಹಿರೇಮಠದ ಪೀಠಾಧಿಪತಿ ಷ.ಬ್ರ.ಮೃತ್ಯುಂಜಯ ಶಿವಯೋಗಿ ಶಿವಾಚಾರ್ಯರು ಹಾಗೂ ಡೊಂಗರಗಾಂವದ ಷ.ಬ್ರ.ಉದಯರಾಜಯೋಗೇಂದ್ರ ಶಿವಾಚಾರ್ಯರಿಂದ ಪ್ರವಚನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುವವು. ನಂತರ ರಾತ್ರಿ 10 ಗಂಟೆಗೆ ಗ್ರಾಮದ ಪ್ರಮುಖ ರಸ್ತೆಗಳ ಮುಖಾಂತರ ಪಲ್ಲಕ್ಕಿ ಉತ್ಸವ ಜರುಗಲಿದೆ. ಫೆ.3 ರಂದು ಬೆಳಿಗ್ಗೆ 9 ರಿಂದ ಪ್ರಸಿದ್ಧ ಮಂಡಳಿಯವರಿಂದ ಭಜನೆ ಹಾಗೂ ಜನಪದ ಕಾರ್ಯಕ್ರಮಗಳು ಜರುಗಲಿವೆ. ಸಾಯಂಕಾಲ 4 ಗಂಟೆಗೆ ಗಂಟಿಗೆ ಕುಂಭ ಪೂಜೆ ಹಾಗೂ ನಂದಿಕೋಲು ಸೇವೆ ಜರುಗಲಿದ್ದು, ಸಾಯಂಕಾಲ 5:30 ಗಂಟೆಗೆ ಸುಕ್ಷೇತ್ರ ಮುತ್ಯಾಬಬಲಾದ ಶ್ರೀಮ.ನಿ.ಪ್ರ.ಸ್ವ.ಡಾ.ಗುರುಪಾದಲಿಂಗ ಮಹಾಶಿವಯೋಗಿಗಳು ಸೋಮಲಿಂಗೇಶ್ವರರ ರಥೋತ್ಸವಕ್ಕೆ ಚಾಲನೆ ನೀಡುವರು. ಸಾಯಕಾಂಲ 6 ಗಂಟೆಗೆ ಧರ್ಮಸಭೆ ಜರುಗುವುದು. ಸಾಯಂಕಾಲ 6:45 ಗಂಟೆಗೆ ಕಲ್ಬುರ್ಗಿಯ ಸ್ವರಾಂಜಲಿ ಮೆಲೋಡಿಸ್ ರವರಿಂದ ಹಾಸ್ಯ ಹಾಗೂ ಸಂಗೀತ ರಸಮಂಜರಿ ಜರುಗಲಿದೆ. ಕಲ್ಲೂರ ಹಿರೇಮಠದ ಪೀಠಾಧಿಪತಿಗಳಾದ ಶ್ರೀ.ಷ.ಬ್ರ. ಮೃತ್ಯುಂಜಯ ಶಿವಯೋಗಿಗಳು ದಿವ್ಯಸಾನ್ನಿಧ್ಯವಹಿಸುವರು. ಶಾಖಾ ಮಠ ಇಟಗಾ ಶ್ರೀ.ಷ.ಬ್ರ ಶಿವಸಿದ್ಧ ಸೋಮೇಶ್ವರ ಶಿವಾಚಾರ್ಯರು ಬೆಳಗಾಂವ, ಡೊಂಗರಗಾಂವದ ಉದಯರಾಜಯೋಗೇಂದ್ರ ಶಿವಾಚಾರ್ಯರು, ಹಿರೇಮುನ್ನೊಳ್ಳಿ ಹಾಗೂ ಪಾರೇಶವಾಡದ ಶ್ರೀ.ಷ.ಬ್ರ. ಶಂಭುಲಿಂಗೇಶ್ವರ ಶಿವಾಚಾರ್ಯರು, ಸದಲಾಪೂರ ಹಿರೇಮಠದ ಸಿದ್ಧಲಿಂಗ ಶಿವಾಚಾರ್ಯರು, ಸೊಂತ ಹಿರೇಮಠದ ಸದ್ಗುರು ದತ್ತ ದಿಗಂಬರ ಅಭಿನವ ಬಾಲಯೋಗಿ ಶಂಕರಲಿಂಗ ಮಹಾರಾಜರು ನೇತೃತ್ವ ವಹಿಸುವರು. ಈ ಕಾರ್ಯಕ್ರಮದ ಅಧ್ಯಕ್ಷತೆ ಶಾಸಕ ಸಿದ್ಧಲಿಂಗಪ್ಪ ಪಾಟೀಲ, (ಸಿದ್ದು ಪಾಟೀಲ) ವಹಿಸುವರು. ಗ್ರಾ.ಪಂ.ಅಧ್ಯಕ್ಷ ಶಿವಕುಮಾರ ಎಸ್.ಪಾಟೀಲ ಕಾರ್ಯಕ್ರಮವನ್ನು ಉದ್ಘಾಟಿಸುವರು. ಮಾಜಿ ಸಚಿವ ರಾಜಶೇಖರ ಬಿ.ಪಾಟೀಲ ರವರು ಶ್ರೀ ಸೋಮಲಿಂಗೇಶ್ವರರ ಭಾವಚಿತ್ರಕ್ಕೆ ಪೂಜೆ ಹಾಗೂ ಮಾಲಾರ್ಪಣೆ ಮಾಡುವರು. ಮುಖ್ಯಅತಿಥಿಗಳಾಗಿ ಬೀದರ ಸಂಸದ್ ಸಾಗರ್ ಖಂಡ್ರೆ, ವಿಧಾನ ಪರಿಷತ್ ಸದಸ್ಯ ಡಾ.ಚಂದ್ರಶೇಖರ ಬಿ.ಪಾಟೀಲ, ಭೀಮರಾವ ಪಾಟೀಲ, ಮಾಜಿ ಶಾಸಕ ಸುಭಾಷ ಕಲ್ಲೂರ, ಬೀದರ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರಾದ ವೀರಣ್ಣಾ ಹೆಚ್.ಪಾಟೀಲ ಆಗಮಿಸುವರು. ಅತಿಥಿಗಳಾಗಿ ಗ್ರಾ.ಪಂ. ಉಪಾಧ್ಯಕ್ಷೆ ಸುವರ್ಣ ತುಕಾರಾಮ ಚಿಂಚೋಳಿ ಹಾಗೂ ಚಿತ್ತಾಕೋಟಾ ಗ್ರಾಮದ ಸದಸ್ಯರಾದ ವೀರಣ್ಣಾ ಪೂಜಾರಿ, ಶಾರದಾಬಾಯಿ ಪ್ರಭುರಾವ ಅಂಬೆ, ಶ್ರೀಮತಿ ಕಾವೇರಿ ಮಲ್ಲಯ್ಯ ಸ್ವಾಮಿ ಹಾಗೂ ಗ್ರಾ.ಪಂ. ಸರ್ವಸದಸ್ಯರು ಆಗಮಿಸುವರು. ಸೋಮಲಿಂಗೇಶ್ವರರ ಜಾತ್ರಾ ಮಹೋತ್ಸವದ ನಿಮಿತ್ತವಾಗಿ ಸತತವಾಗಿ ಮೂರು ದಿವಸ ಅನ್ನದಾಸೋಹ ಜರುಗಲಿದೆ. ಸದ್ಭಕ್ತರು ಆಗಮಿಸಿ ಪ್ರಸಾದ ಸ್ವೀಕರಿಸಿ ಪುನಿತರಾಗಬೇಕು, ಹಾಗೂ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಸೋಮಲಿಂಗೇಶ್ವರ ಪಂಚಕಮಿಟಿ ಹಾಗೂ ಸಕಲ ಗ್ರಾಮಸ್ಥರ ಪರವಾಗಿ ವಿನಂತಿಸಿಕೊಂಡಿದ್ದಾರೆ.




ಕಮಲನಗರ:ಮಲ್ಲಮ್ಮ ನುಡಿ ದಿನ ಪತ್ರಿಕೆ ಹೊರ ತಂದ 2026ರ ವಿಶಿಷ್ಟ ಕ್ಯಾಲೆಂಡರರನ್ನು ಕಮಲನಗರ ಪಿ.ಕೆ.ಪಿ.ಎಸ್ ಅಧ್ಯಕ್ಷರಾದ ಶ್ರೀ ಗಂಗಾಧರ ಸೋಲಾಪುರೆ ಹಾಗೂ ಕಾರ್ಯದರ್ಶಿ ಶ್ರೀ ಶಾಂತಪ್ಪ ಬಿರಾದಾರ ಅವರಿಗೆ ಕ್ಯಾಲೆಂಡರ್ ನೀಡಿ ಹೊಸ ವರ್ಷದ ಶುಭ ಕೋರಲಾಯಿತು.ಈ ಸಂದರ್ಭದಲ್ಲಿ ಕಮಲನಗರ ತಾಲೂಕ ವರದಿಗಾರ ಪರಮೇಶ ರಾಂಪುರೆ ಇದ್ದರು.

# ಕುಷ್ಠರೋಗ ಜಾಗೃತಿ ಅಭಿಯಾನದ ಕರಪತ್ರ ಬಿಡುಗಡೆ



**• ಮಲ್ಲಮ್ಮನುಡಿ ವಾರ್ತೆ,ಕೊಪ್ಪಳ :**

ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕೊಪ್ಪಳ ಜಿಲ್ಲಾ ಕ್ಷಯರೋಗ ಮತ್ತು ಕುಷ್ಠರೋಗ ನಿರ್ಮೂಲನಾಧಿಕಾರಿಗಳ ಕಾರ್ಯಾಲಯ ಕೊಪ್ಪಳ, ಇವರ ಸಹಯೋಗದಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧಿಜೀ ಅವರ ಹುತಾತ್ಮರಾದ ಈ ದಿನದಂದು ಶ್ರದ್ಧಾಪೂರ್ವಕವಾಗಿ ಸ್ಮರಿಸಿ, ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮ ಜಿಲ್ಲಾಡಳಿತ ಭವನದಲ್ಲಿ ಶುಕ್ರವಾರ ನಡೆಯಿತು.

ಜಿಲ್ಲಾಧಿಕಾರಿ ಡಾ.ಸುರೇಶ್ ಬಿ. ಇಟ್ನಾಳ ಅವರು ಮಾತನಾಡಿ, ಗ್ರಾಮೀಣ ಪ್ರದೇಶಗಳಿಗೆ ಅಧಿಕಾರಿಗಳು ಹೋಗಿ ಸ್ಪರ್ಶ್ ಕುಷ್ಠರೋಗ ಜಾಗೃತಿ ಅಭಿಯಾನ ಕುರಿತು ಜಾಗೃತಿ ಮೂಡಿಸಿ ಕುಷ್ಠರೋಗವನ್ನು ಪತ್ತೆಹಚ್ಚಿ ಚಿಕಿತ್ಸೆ ಕೊಡುವ ಕೆಲಸ ಮಾಡಬೇಕು. ಈ ರೋಗದ ತಪ್ಪು ಕಲ್ಪನೆಗಳನ್ನು ಜನರಲ್ಲಿ ಹೋಗಲಾಡಿಸಿ "ತಾರತಮ್ಯವನ್ನು ಕೊನೆಗೊಳಿಸುವುದು, ಘನತೆಯನ್ನು ಕಾಪಾಡುವುದು" ಎಂಬ ಘೋಷವಾಕ್ಯವನ್ನು ಹೇಳಿ, "ಸ್ಪರ್ಶ್ ಕುಷ್ಠರೋಗ ಜಾಗೃತಿ ಅಭಿಯಾನ-2026" ಕರಪತ್ರಗಳನ್ನು ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಟಿ.ಲಿಂಗರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕರ್ಣಕುಮಾರ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.



**ವಕೀಲರ ಭಕ್ತವೃಂದ ವತಿಯಿಂದ ಬೆಂಗಳೂರಿನಲ್ಲಿಂದು ನಡೆದ ಡಾ.ಶಿವಕುಮಾರ ಮಹಾಶಿವಯೋಗಿಗಳ 7 ನೆ ಪುಣ್ಯ ಸ್ಮರಣೆ ಕಾರ್ಯಕ್ರಮವನ್ನು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಉದ್ಘಾಟಿಸಿದರು.**

# ಶಿಕ್ಷಣದೊಂದಿಗೆ ವ್ಯಕ್ತಿತ್ವ ವಿಕಸನಕ್ಕಾಗಿ ಎನ್.ಎಸ್.ಎಸ್. ಅನಿವಾರ್ಯ



**• ಮಲ್ಲಮ್ಮ ನುಡಿ ವಾರ್ತೆ,ಕಮಲನಗರ :**

ಅಪೇಕ್ಷೆಯಿಲ್ಲದ ಸೇವೆ ಎನ್ಎಸ್ಎಸ್‌ನಿಂದ ಮಾತ್ರ ಸಾಧ್ಯ. ಶಿಕ್ಷಣದೊಂದಿಗೆ ವ್ಯಕ್ತಿತ್ವ ವಿಕಸನಕ್ಕಾಗಿ ಎನ್.ಎಸ್.ಎಸ್ ಶಿಬಿರ ಅನಿವಾರ್ಯ ಯುವ ಸಮುದಾಯಸಮಾಜದ ಸರ್ವತೋಮುಖ ಅಭಿವೃದ್ಧಿಯಲ್ಲಿ ತೊಡಗಿಸಿ ಕೊಳ್ಳಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಹೇಳಿದರು.ಪಟ್ಟಣದ ಶಾಂತಿವರ್ಧಕ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು ಯುವ ತಾನು ರಕ್ಷಿಸಿಕೊಂಡು, ಸಮಾಜ ಮತ್ತು ರಾಷ್ಟ್ರದ ಪ್ರಗತಿ ಸಾಧ್ಯವೆಂದರು.

ಈ ಸಂದರ್ಭದಲ್ಲಿ ಪ್ರಾಂಶುಪಾಲ ಶಿವಾಜಿ ಪ್ರಾಸ್ತಾವಿಕ ಮಾತನಾಡಿ, ಮಕ್ಕಳಿಗೆ ಶಿಕ್ಷಣ ಜೊತೆಯಲ್ಲಿ ಸಾಮಾಜಿಕ ಬದ್ಧತೆಯನ್ನು ಏನ್. ಎಸ್. ಎಸ್. ಶಿಬಿರ ಕಳಿಸಿ ಕೂಡುತ್ತದೆ.ಎನ್ಎಸ್ಎಸ್‌ದಿಂದ ಯುವಕರಲ್ಲಿ ಸೇವಾ ಮನೋಭಾವ ಬೆಳೆಸಿ. ಜಾಗತಿಕ ಮುಖ್ಯವಾಹಿನಿ ಜೊತೆಗೆ ಕೈ ಜೋಡಿಸುವ ಅವಕಾಶ ಗುಣಮಟ್ಟದ ಶಿಕ್ಷಣದೊಂದಿಗೆ ಸಂಸ್ಕಾರ ಅತ್ಯವಶ್ಯಕ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮುಖಂಡರಾದ ಪ್ರವೀಣ ಪಾಟೀಲ, ಬಾಬುರಾವ ಪಾಟೀಲ್, ಉಪನ್ಯಾಸಕರಾದ ಓ.ಕೆ ಸೂರ್ಯವಂಶಿ, ನಾಗನಾಥ ಕೋಳ್ಳಾ, ಕಾಳಿದಾಸ ಬೌದ್ದೆ, ಶಿವಶಂಕರ್ ಕಾಂಬಳೆ, ಶ್ರೀಕಾಂತ ಪ್ಯಾಗೆ, ಶರಣಗೌಡ ಪಾಟೀಲ ಇದ್ದರು. ವಿಜಯಕುಮಾರ ವಾರದ ವಂದಿಸಿದರು, ಓಂಕಾರ ಸೂರ್ಯವಂಶಿ ನಿರೂಪಿಸಿದರು, ಶಿಬಿರಾರ್ಥಿಗಳು ಪ್ರಾರ್ಥನಾ ಗೀತೆ ಹಾಡಿದರು.

# ಸ್ಪರ್ಶ ಕುಷ್ಟರೊಗ ಕಳಂಕ ಹೋಗಲಾಡಿಸಲು ಜಾಗೃತಿ ಅಗತ್ಯ ಡಾ. ಅಯ್ಯನಗೌಡ

ಮಲ್ಲಮ್ಮನುಡಿವಾರ್ತೆ,ಸಿಂಧನೂರು



ಸ್ಪರ್ಶ ಕುಷ್ಠ ರೋಗ ಜಾಗೃತಿ ಅಭಿಯಾನ 2026,ಈ ಕಾರ್ಯಕ್ರಮವು ದಿನಾಂಕ-30-01-2026ರಿಂದ 13-02-2026 ವರಗೆ ನಡೆಯುತದೆ ಎಂದು ತಿಸಿದರು, ನಂತರ ಪ್ರತಿಜ್ಞಾ ವಿಧಿಯನ್ನು ಭೋದಿಸಿದರು, ಸಾರ್ವಜನಿಕರಲ್ಲಿ ಯಾವುದೇ ಭಯ ಬೇಡ ಮೂಢನಂಬಿಕೆ ಬೇಡ ಇದು ದೇವರ ಶಾಪವಲ್ಲ ಇದೊಂದು ಸೂಕ್ಷ್ಮಾಣ ಜೀವಿಯಿಂದ ಬರುವ ಖಾಯಿಲೆ ಎಂದು ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದರು ಮತ್ತು ಈ ಕಾರ್ಯಕ್ರಮಕ್ಕೆ ಚಾಲನೆ ಕೊಟ್ಟರು. ಶತಮಾನಗಳಿಂದ ಸಮುದಾಯದಲ್ಲಿರುವ ಕುಷ್ಟರೋಗವನ್ನು ನಿರ್ಮೂಲನೆ ಮಾಡಲು ದೇಹದ ಮೇಲಿನ ಸ್ಪರ್ಶ ಜ್ಞಾನವಿಲ್ಲದ ತಿಳಿ ಬಿಳಿ ತಾಮ್ರ ಬಣ್ಣದ ಮಚ್ಚೆಗಳು ಹಾಗೂ ನರ ಮತ್ತು ಚರ್ಮದ ಕಾಯಿಲೆಯಾಗಿದ್ದು ಇದನ್ನು ಮಾತ್ರೆಗಳ ಮೂಲಕ ಸಂಪೂರ್ಣ ಗುಣಪಡಿಸುವುದು ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಉಚಿತ ಚಿಕಿತ್ಸೆ ಲಭ್ಯವಿರುತ್ತದೆ ಹೆಚ್ಚಿನ ಜಾಗೃತಿಯನ್ನು ಸಮುದಾಯಕ್ಕೆ ತಲುಪುವಂತೆ ಹೆಚ್ಚು ಹೆಚ್ಚು ಜಾಗೃತಿ ಮೂಡಿಸಬೇಕು ಎಂದು ಮುಖ್ಯ ಆಡಳಿತ ವೈದ್ಯಧಿಕಾರಿಗಳು ಸಾರ್ವಜನಿಕ ಆಸ್ಪತ್ರೆ ಸಿಂಧನೂರು ಡಾ, ಸುರೇಶ ಗೌಡ ಇವರು ಮಾತನಾಡಿ ಘೋಷಣೆ- "ತಾರತಮ್ಯವನ್ನು ಕೊನೆಗೊಳಿಸಿ ಘನತೆಯನ್ನು ಕಾಪಾಡೋಣ " ಘೋಷಣೆಯೊಂದಿಗೆ ನಿಮ್ಮ ಮನೆಗೆ ಭೇಟಿ ನೀಡುವ ಆರೋಗ್ಯ ಸಹಾಯಕರು ಆಶಾ ಮತ್ತು ಸ್ವಯಂಸೇವಕರಿಂದ ಪರೀಕ್ಷಿಸಿಕೊಳ್ಳಿ, ಬನ್ನಿ ಕೈಜೋಡಿಸಿ ಕುಷ್ಟರೋಗ ನಿವಾರಿಸಿ ಕುಷ್ಟರೋಗದ ಬಗ್ಗೆ ಅರಿವು ಮೂಡಿಸೋಣ ಭಾರತವನ್ನು ಕುಷ್ಟರೋಗ ಮುಕ್ತ ಮಾಡಲು ಸರ್ವ ಪ್ರಯತ್ನ ಮಾಡೋಣ ಎಂದು ತಿಳಿಸಿದರು.

ಸದರಿ ಕಾರ್ಯಕ್ರಮದಲ್ಲಿ ತಾಲೂಕು ಸಾರ್ವಜನಿಕ ಆಸ್ಪತ್ರೆಯ ಡಾ. ಮಂಜುನಾಥ್ ಆಯುಷ್ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ತಾಲೂಕು ಆರೋಗ್ಯ ಅಧಿಕಾರಿಗಳ ಕಾರ್ಯಾಲಯದ ಎಲ್ಲಾ ಸಿಬ್ಬಂದಿಗಳು ನಂತರ ತಾಲೂಕಿನ ಎಲ್ಲಾ ಹಿರಿಯ ಆರೋಗ್ಯ ನಿರಕ್ಷಣಾಧಿಕಾರಿಗಳು ಹಿರಿಯ ಪ್ರಾಥಮಿಕ ಸುರಕ್ಷತಾ ಅಧಿಕಾರಿಗಳು ಆಶಾ ಕಾರ್ಯಕತೆ-ರ್ಯರು ಸ್ತ್ರೀ ಶಕ್ತಿ ಸಂಘದ ಸದಸ್ಯರು ಡಿ ದರ್ಜೆ ನೌಕರರು ಸಾರ್ವಜನಿಕರು ಉಪಸ್ಥಿತರಿದ್ದರು.

# ಫೆಬ್ರವರಿ 10 ರಂದು ಕಾಯಕ ಶರಣರ
## ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲು ನಿರ್ಧಾರ

• **ಮಲ್ಲಮ್ಮ ನುಡಿ ವಾರ್ತೆ,ಕಲಬುರಗಿ:**

ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಶರಣರ ಜಯಂತಿಯನ್ನು ಫೆಬ್ರವರಿ 10 ರಂದು ವಿಜೃಂಭಣೆಯಿಂದ ಆಚರಿಸಲು ಜಿಲ್ಲಾಧಿಕಾರಿ ಕಚೇ-ರಿಯ ಚುನಾವಣೆ ಶಾಖೆಯ ತಹಸಿಲ್ದಾರರಾದ ಪಂಪಯ್ಯ ಅವರ ಸಭೆಯಲ್ಲಿ ನಿರ್ಧರಿಸಲಾಯಿತು.

ಇತ್ತೀಚಿಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಿದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿ, ಇದೆ ಫೆಬ್ರವರಿ 10 ರಂದು ಮಧ್ಯಾಹ್ನ 12 ಗಂಟೆಗೆ ಕಲಬುರಗಿ ನಗರದ ಡಾ. ಎಸ್ ಎಂ ಪಂಡಿತ ರಂಗಮಂದಿರದಲ್ಲಿ ಕಾಯಕ ಶರಣರ ಜಯಂತಿ ಕಾರ್ಯಕ್ರಮ ಜರುಗಲಿದ್ದು, ಈ ಕಾರ್ಯಕ್ರಮದಲ್ಲಿ ಅಧಿಕಾರಿಗಳು ಸಮಾಜದ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಲು ಸೂಚಿಸಿದರು. ಅಂದು ಬೆಳಿಗ್ಗೆ 9 ಗಂಟೆಗೆ ಕಡ್ಡಾಯವಾಗಿ ಎಲ್ಲಾ ಜಿಲ್ಲಾ ಹಾಗೂ ತಾಲೂಕು ಮಟ್ಟದ ಸರ್ಕಾರಿ ಕಚೇರಿಗಳಲ್ಲಿ, ಶಾಲಾ-ಕಾಲೇಜುಗಳಲ್ಲಿ ಕಡ್ಡಾಯವಾಗಿ ಜಯಂತಿ ಆಚರಿಸಬೇಕು. ಸಭೆಯಲ್ಲಿ ನುರಿತ ಉಪನ್ಯಾಸಕರನ್ನು ಸಹ ಆಹ್ವಾನಿಸಲು ತೀರ್ಮಾನಿಸಲಾಯಿತು. ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದರ ಜೊತೆಗೆ ಸ್ವಚ್ಛತೆ ಮತ್ತು ನೈರ್ಮಲ್ಯ ಕಾಪಾಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು. ಈ ಸಂದರ್ಭದಲ್ಲಿ ಜಯಂತಿ ಸಮಿತಿ ಅಧ್ಯಕ್ಷರನ್ನಾಗಿ ಹಾಗೂ ನುರಿತ ಉಪನ್ಯಾಸಕರನ್ನು ನೇಮಕ ಮಾಡಲಾಗುವುದು. ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪನಿರ್ದೇಶಕಿ ಜಗದೀಶ್ವರಿ ನಾಶಿ ಪ್ರೋಟೋಕಾಲ್ ಪ್ರಕಾರ ಕಾರ್ಯಕ್ರಮ ಪತ್ರಿಕಾ ಆಮಂತ್ರಣ ಮುದ್ರಿಸಲಾಗುವುದು. ನಾಡ ಗೀತೆ,ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗುವುದು ಎಂದರು. ಈ ಸಂದರ್ಭದಲ್ಲಿ ಸಮಾಜದ ಮುಖಂಡರಾದ ರಮೇಶ್ ಹೊಸಮನಿ, ಜಗನ್ನಾಥ್, ಶಿವಕುಮಾರ, ದೇವೇಂದ್ರ, ವಿಜಯಲಕ್ಷ್ಮಿ, ರವಿ .ಎಸ್. ಕೊಡ್ಲಾ, ಗುರುಲಿಂಗ ಕೊಡ್ಲಾ, ಡಾ. ಬಲಭೀಮ್ ಸಾಂಗ್ಲಿ, ಸಿದ್ದಣ್ಣ ಬಾವಿಮನಿ, ನಾಗರಾಜ್ ಎಸ್ ಒಂಟಿ, ಕಾಶಿರಾಯ್ ನಂದರ್ಕರ್, ಸೈಬಣ್ಣ ಎಂ ಹೊಳ್ಕರ, ಶಿವಶರಣಪ್ಪ ದೊಡ್ಡಮನಿ ಉಪಸ್ಥಿತರಿದ್ದರು.

# ಶ್ರೀ ಸಂತ ಸೇವಾಲಾಲ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲು ನಿರ್ಧಾರ



**ಮಲ್ಲಮ್ಮ ನುಡಿ ವಾರ್ತೆ,ಕಲಬುರಗಿ:** ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಶ್ರೀ ಸಂತ ಸೇವಾಲಾಲ ಜಯಂತಿಯನ್ನು ಫೆಬ್ರವರಿ 15 ರಂದು ವಿಜೃಂಭಣೆಯಿಂದ ಆಚರಿಸಲು ಅಪರ ಜಿಲ್ಲಾಧಿಕಾರಿಯಾದ ರಾಯಪ್ಪ ಹುಣಸಗಿ ಅವರ ಅಧ್ಯಕ್ಷತೆಯಲ್ಲಿ ನಿರ್ಧರಿಸಲಾಯಿತು.

ಅಂದು ಬೆಳಿಗ್ಗೆ 9 ಗಂಟೆಗೆ ಕಡ್ಡಾಯವಾಗಿ ಎಲ್ಲಾ ಜಿಲ್ಲಾ ಹಾಗೂ ತಾಲೂಕು ಮಟ್ಟದ ಸರ್ಕಾರಿ ಕಚೇರಿಗಳಲ್ಲಿ, ಶಾಲಾ-ಕಾಲೇಜುಗಳಲ್ಲಿ ಕಡ್ಡಾಯವಾಗಿ ಜಯಂತಿ ಆಚರಿಸಬೇಕು. ಸಭೆಯಲ್ಲಿ ನುರಿತ ಉಪನ್ಯಾಸಕರನ್ನು ಸಹ ಆಹ್ವಾನಿಸಲು ತೀರ್ಮಾನಿಸಲಾಯಿತು. ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದರ ಜೊತೆಗೆ ಸ್ವಚ್ಛತೆ ಮತ್ತು ನೈರ್ಮಲ್ಯ ಕಾಪಾಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಜಯಂತಿ ಸಮಿತಿ ಅಧ್ಯಕ್ಷರಾಗಿ ರೇವುನಾಯಕ್ ಬೆಳಮಗಿ, ಉಪನ್ಯಾಸಕರಾಗಿ ಡಾ. ಗಣಪತಿ ರಾಠೋಡ ಹಾಗೂ ವಿನೋದ್ ಎಲ್ ಚವ್ಹಾಣ ಕಾರ್ಯಕ್ರಮದ ನಿರೂಪಕರನ್ನಾಗಿ ಆಯ್ಕೆ ಮಾಡಲಾಯಿತು.

ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪನಿರ್ದೇಶಕಿ ಜಗದೀಶ್ವರಿ ನಾಶಿ ಅವರು ಪ್ರೋಟೋಕಾಲ್ ಪ್ರಕಾರ ಕಾರ್ಯಕ್ರಮ ಪತ್ರಿಕಾ ಆಮಂತ್ರಣ ಮುದ್ರಿಸಲಾಗುವುದು. ನಾಡಗೀತೆ, ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುವುದು ಎಂದರು.

ವೇದಿಕೆ ಮೇಲೆ ಜಿಲ್ಲಾಧಿಕಾರಿ ಕಚೇರಿಯ ಚುನಾವಣೆ ಶಾಖೆ ತಹಶೀಲ್ದಾರರಾದ ಪಂಪಯ್ಯ ಸೇರಿದಂತೆ ಸಮಾಜದ ಮುಖಂಡರಾದ ವಿಜಯಕುಮಾರ್ ರಾಠೋಡ್, ರಮೇಶ್ ಬಿ.ಚವ್ಹಾಣ್, ಲಲಿತಾಬಾಯಿ ಆರ್, ರೇಣುಕಾ ರಾಠೋಡ್, ಪ್ರಶಾಂತ್ ರಾಠೋಡ್, ಭೀಮಸಿಂಗ್ ರಾಠೋಡ್, ನಾರಾಯಣ್ ದಿವಾಕರ್ ಇತರರು ಉಪಸ್ಥಿತರಿದ್ದರು.

# ವಿಜ್ಞಾನ, ಸುಜ್ಞಾನದಿಂದ ಭವಿಷ್ಯ ಪ್ರಜ್ವಲ: ಹಾರಕೂಡ ಶ್ರೀ.



• **ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ:**

ವಿಜ್ಞಾನ ಮತ್ತು ಸುಜ್ಞಾನ ಮೇಳೈಸಿ ನಡೆದಾಗ ಜಗತ್ತಿಗೆ ಪ್ರಜ್ವಲ ಭವಿಷ್ಯ ವಿರುತ್ತದೆ ಎಂದು ಹಾರಕೂಡದ ಪೂಜ್ಯ ಶ್ರೀ ಡಾ. ಚನ್ನವೀರ ಶಿವಾಚಾರ್ಯರು ನುಡಿದರು.

ತಾಲೂಕಿನ ಇಸ್ಲಾಂಪುರ ಗ್ರಾಮದಲ್ಲಿ ದತ್ತಾತ್ರೇಯ ಪ್ರತಿಮೆ ಪ್ರಾಣ ಪ್ರತಿಷ್ಠಾಪನೆ ಸಮಾರಂಭದ ಪಾವನ ಸನ್ನಿಧಾನ ವಹಿಸಿ ಮಾತನಾಡಿದ ಶ್ರೀಗಳು, ಒಂದು ಕಿರುನಗೆಯ ಜ್ಯೋತಿಯಿಂದ ಮನೆ ಬೆಳಗಿದರೆ, ಸುಜ್ಞಾನದ ಧರ್ಮ ಜ್ಯೋತಿಯಿಂದ ಇಡೀ ಧರೆಯೇ ಬೆಳಗುತ್ತದೆ.

ಇವತ್ತಿನ ಸಂಕೀರ್ಣ ಸಮಾಜದಲ್ಲಿ ನಮ್ಮ ದೇಶದ ತಾರುಣ್ಯ ಯಾವತ್ತೂ ದಾರಿ ತಪ್ಪಬಾರದು, ಯುವಕರು ದುರಾಭ್ಯಾಸಗಳ ದಾಸರಾಗದೆ ದತ್ತಾತ್ರೇಯರ ದಿವ್ಯ ಬೆಳಕಿನಲ್ಲಿ ಧರ್ಮ ಕಾರ್ಯಗಳಲ್ಲಿ, ದೇಶ ಕಟ್ಟುವ ಪವಿತ್ರ ಕಾರ್ಯದಲ್ಲಿ ತಮ್ಮನ್ನು ತೊಡಿಸಿಕೊಳ್ಳಬೇಕು. ಬಸವ ನೆಲದ ತರುಣರು ಹಾಗೂ ಸಮಸ್ತರು ಕಾಯಕ ಪ್ರಜ್ಞೆಯಿಂದ ದುಡಿಮೆ ಮಾಡಿ, ಹಸನಾದ ಬದುಕು ಸಾಗಿಸಬೇಕು ಇಸ್ಲಾಂಪೂರದ ದತ್ತಾತ್ರೇಯ ಪೀಠ ಉತ್ತರೋತ್ತರವಾಗಿ ಬೆಳೆದು ಸರ್ವರಿಗೂ ಸನ್ಮಂಗಳವನ್ನುಂಟುಮಾಡಲಿ ಎಂದು ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಶ್ರೀ ಬಾಬು ಸ್ವಾಮಿ ರಾಜೇಶ್ವರ, ಈರಣ್ಣ ಪಾಟೀಲ, ಮಾಣಿಕ ರೆಡ್ಡಿ ಕೌಡಾಳೆ, ಪ್ರಭು ಮೇತ್ರೆ, ಸಂತೋಷ ಕಾಡಾದಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಸುಭಾಷ ರೆಡ್ಡಿ ಸ್ವಾಗತಿಸಿದರು. ಕಾರ್ತಿಕ ಸ್ವಾಮಿ ಪ್ರಾರ್ಥನಾ ಗೀತೆ ಹಾಡಿದರು.

# ಪಟ್ಟಣದ ಸುಗಮ ರಸ್ತೆ ಸಂಚಾರಕ್ಕೆ ಮುಂದಾದ ಪುರಸಭೆ ಹಾಗೂ ಪೊಲೀಸ್ ಇಲಾಖೆ





ಪಟ್ಟಣದಲ್ಲಿ ಕೆಲವು ಗುರುತಿಸಿದ ಸ್ಥಳಗಳಲ್ಲಿ ಅಪಘಾತ ವಲಯ, ಶಾಲಾ ವಲಯಗಳಂತಹ ಸೂಚನಾ ಫಲಕಗಳನ್ನು ಜಣಟಜಜಜುಟಜಜ-ಡಣೆ ಮಾಡಲಾಗುತ್ತಿದೆ, ಹಾಗೂ ಅಂಬಿಗರ ಚೌಡಯ್ಯ ವೃತ್ತ ಮತ್ತು ನಗರೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಸಿಬ್ಬಂದಿ ಆಯೋಜಿಸಿ ಸಾರ್ವಜನಿಕರಿಗೆ ಅತಿಯಾದ ಟ್ರಾಫಿಕ್ ತಪ್ಪಿಸಲು ಕ್ರಮ ತೆಗೆದುಕೊಳ್ಳಲಾಗುವದು.

**ವೀರಣ್ಣ ದೊಡ್ಡಮನಿ**
**ಪಿ ಐ, ಗುರುಮಠಕಲ್ ಪೊಲೀಸ್ ಠಾಣೆ**



ಶೀಘ್ರದಲ್ಲಿಯೇ ತರಕಾರಿ ಮಾರುವ ವ್ಯಾಪರಸ್ಥರಿಗೆ ಪುರಸಭೆ ಮಳಿಗೆಗಳು ಹರಾಜು ಮುಖಾಂತರ ನೀಡಲಾಗುವದು, ತಳ್ಳುಗಡಿಯಲ್ಲಿ ಹಣ್ಣಿನ ವ್ಯಾಪರಸ್ಥರಿಗೆ ವಾಹನ ಸಂಚಾರಕ್ಕೆ ತೊಂದರೆ ಆಗದಂತೆ ಸೂಚಿಸಿದ ಸ್ಥಳದಲ್ಲಿ ವ್ಯಾಪಾರ ನಡೆಸಲು ತಿಳಿಸಲಾಗಿದೆ.

**ಶರಣಪ್ಪ ಮಡಿವಾಳ**
**ಪುರಸಭೆ ಮುಖ್ಯಾಧಿಕಾರಿಗಳು.**

• **ಮಲ್ಲಮ್ಮ ನುಡಿ ವಾರ್ತೆ ,ಗುರುಮಠಕಲ್:**

ಪಟ್ಟಣದಲ್ಲಿ ಇತ್ತೀಚಿನ ದಿನಗಳಲ್ಲಿ ಅತಿಯಾದ ಟ್ರಾಫಿಕ್ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾದ ಪೊಲೀಸ್ ಇಲಾಖೆ ಹಾಗೂ ಪುರಸಭೆ ಅಧಿಕಾರಿಗಳು.

ರಸ್ತೆ ಅತಿಕ್ರಮಣ ಮಾಡಿ ಸಂಚಾರಕ್ಕೆ ತೊಂದರೆ ಆಗುತ್ತಿರುವ ಹಿನ್ನಲೆಯಲ್ಲಿ ರಸ್ತೆಯ ಸಂಚಾರಕ್ಕೆ ತೊಂದರೆ ಆಗದಂತೆ ಪುರಸಭೆ ಮುಖ್ಯಾಧಿಕಾರಿ ಹಾಗೂ ಪಿ ಐ ವೀರಣ್ಣ ದೊಡ್ಡಮನಿ ಗುರುವಾರ ವ್ಯಾಪಾರಸ್ಥರಿಗೆ ತಿಳಿಸಿದರು. ರಸ್ತೆ ಸಂಚಾರಿ ನಿಯಮಗಳ ಪಾಲನೆ ಸೇರಿದಂತೆ ಅಪ್ರಾಪ್ತ ವಯಸ್ಕರು ವಾಹನ ಚಾಲನೆ ಮಾಡದಿರುವಂತೆ ಸಲಹೆ ನೀಡಿ, ನಿಯಮ ಉಲ್ಲಂಘನೆ ಮಾಡಿದವರಿಗೆ ದಂಡ ವಿಧಿಸುವದಾಗಿ ಸಾರ್ವಜನಿಕರಲ್ಲಿ ಜಾಗೃತಿ ಕೆಲಸ ಸಹ ಈ ಸಂದರ್ಭದಲ್ಲಿ ಮೂಡಿಸಲಾಯಿತು.

## ಇಟಕಾಲ್ ಶಾಲೆಗೆ ಜಿಲ್ಲಾ ಪಂಚಾಯತ್ ಸಿ.ಇ.ಓ ಭೇಟಿ
# ಎಸ್.ಎಸ್.ಎಲ್.ಸಿ. ಫಲಿತಾಂಶ ಹೆಚ್ಚಳಕ್ಕೆ ಶಿಕ್ಷಕರಿಗೆ ಸೂಚನೆ



**ಮಲ್ಲಮ್ಮ ನುಡಿ ವಾರ್ತೆ,ಕಲಬುರಗಿ:**

ಸೇಡಂ ತಾಲೂಕಿನ ಇಟಕಾಲ್ ಸರ್ಕಾರಿ ಪ್ರೌಢಶಾಲೆಗೆ ಗುರುವಾರ ಜಿಲ್ಲಾ ಪಂಚಾಯತ ಸಿ.ಇ.ಓ ಭಂವರಸಿಂಗ್ ಮೀನಾ ಅವರು ಭೇಟಿ ನೀಡಿ ಅರ್ಧಗಂಟೆಕ್ಕಿಂತ ಹೆಚ್ಚಿನ ಹೊತ್ತು 10ನೇ ತರಗತಿ ಮಕ್ಕಳೊಂದಿಗೆ ಕಳೆದಿದ್ದಲ್ಲದೆ ಕನ್ನಡ ವಿಷಯ ಬೋಧನೆ ಮಾಡುವ ಮೂಲಕ ಕನ್ನಡ ಮೇಷ್ಟ್ರಾಗಿ ಗಮನ ಸೆಳೆದರು.

ಈ ಸಂದರ್ಬದಲ್ಲಿ ಮಕ್ಕಳೊಂದಿಗೆ ಸಂವಾದ ನಡೆಸಿ ಮಾತನಾಡಿದ ಅವರು, ಎಸ್.ಎಸ್.ಎಲ್.ಸಿ ಪರೀ-ಕ್ಷೆ ನಿಮ್ಮ ಜೀವನದ ಅತ್ಯಮೂಲ್ಯ ಘಟ್ಟವಾಗಿದ್ದು, ಸಮಯ ವ್ಯರ್ಥ ಮಾಡದೆ ಓದಿನತ್ತ ಹೆಚ್ಚು ಗಮನ ಹರಿಸಬೇಕು. ಕಾಲಹರಣ ಮಾಡದೆ ಸಮಯಕ್ಕೆ ಬೆಲೆ ಕೊಡಬೇಕು. ಅಂದಾಗ ಭವಿಷ್ಯದಲ್ಲಿ ಏನಾದರು ಸಾದಿಸುವಿರಿ ಎಂದು ಮಕ್ಕಳಿಗೆ ಪ್ರೋತ್ಸಾಹದಾಯಕ ಮಾತುಗಳನ್ನಾಡಿದರು.

ಇನ್ನು ಜಿಲ್ಲೆಯಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆ ಸುಧಾರಣೆಯಾಗಬೇಕು. ಫಲಿತಾಂಶ ಹೆಚ್ಚಿಸಲು ಶಿಕ್ಷಕರು ಹೆಚ್ಚು ಮುತುವರ್ಜಿ ವಹಿಸಬೇಕು. ಮಕ್ಕಳ ಮೇಲೆ ವಿಶೇಷ ಗಮನ ಹರಿಸಬೇಕು ಎಂದರಲ್ಲದೆ "ಅರಿವೇ ಗುರು" ಪುಸ್ತಕದ ಮಹತ್ವ ಹಾಗೂ ಪರೀಕ್ಷೆಗೆ ಈ ಪುಸ್ತಕ ತುಂಬಾ ಉಪಯುಕ್ತವಾಗಿದ್ದು ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕೆಂದು ತಿಳಿಸಿದರು.

ನಂತರ ಅಕ್ಷರ ದಾಸೋಹ ಬಿಸಿಯೂಟ ಕೋಣೆಗೆ ಭೇಟಿ ನೀಡಿದ ಭಂವರ್ ಸಿಂಗ್ ಮೀನಾ ಅವರು, ಬೇಳೆ, ಅಕ್ಕಿ, ಹಾಲಿನ ಪುಡಿ, ರಾಗಿ, ಎಣ್ಣೆ ಹಾಗೂ ಇನ್ನಿತರ ಪದಾರ್ಥಗಳನ್ನು ಪರಿಶೀಲಿಸಿ ಮಕ್ಕಳಿಗೆ ನೀಡುವ ಭಿಸಿಯೂಟ ಗುಣಮಟ್ಟದಿಂದಿರಬೇಕು. ಪಾತ್ರೆಗಳ ನಿರ್ವಹಣೆ ಸರಿಯಾಗಿರಬೇಕು. ಸ್ವಚ್ಛತೆ, ನೈರ್ಮಲ್ಯಕ್ಕೆ ಹೆಚ್ಚಿನ ಒತ್ತು ನೀಡಬೇಕೆಂದು ಅಡುಗೆ ಸಿಬ್ಬಂದಿಗಳಿಗೆ ಖಡಕ್ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ತಾಲೂಕಾ ಪಂಚಾಯತ್ ಇ.ಓ ಚೆನ್ನಪ್ಪ ರಾಯಣ್ಣನವರ, ಬಿ.ಇ.ಓ ಮಾರುತಿ ಹುಜರತಿ ಸೇರಿದಂತೆ ಇತರೆ ಅಧಿಕಾರಿಗಳು, ಶಾಲೆಯ ಮುಖ್ಯ ಗುರುಗಳು, ಶಿಕ್ಷಕರು, ಪಿ.ಡಿ.ಓ ಉಪಸ್ಥಿತರಿದ್ದರು.

# ಹದಗೆಟ್ಟ ರಸ್ತೆ ರಿಪೇರಿಗೆ ಒತ್ತಾಯ.



**ಮಲ್ಲಮ್ಮ ನುಡಿ ವಾರ್ತೆ,ಬಸವಕಲ್ಯಾಣ:**

ಕಿಟ್ಟಾ ಗ್ರಾಮದಿಂದ ಬಸವಕಲ್ಯಾಣ ತಾಲ್ಲೂಕಿಗೆ ಸಂಪರ್ಕ ಕಲ್ಪಿಸುವ ಈ ರಸ್ತೆಯು ವಿವಿಧೆಡೆ ರಸ್ತೆ ಹದಗೆಟ್ಟು ಹೋಗಿವೆ ಈ ರಸ್ತೆಯು ಅಲ್ಲ ಅಲ್ಲಿ ಬಹಳಷ್ಟು ತಗು ಗುಂಡಿಗಳು ಬಿದ್ದಿರುವುದರಿಂದ ರಸ್ತೆಯ ಮೇಲೆ ಓಡಾಡುವ ಬೈಕ್ ಸವಾರರು ಬಿದ್ದು ಸಣ್ಣಪುಟ್ಟ ಗಾಯಗಳಾಗಿವೆ ಎಂದು ಬಹುಜನ ಸಮಾಜ ಪಕ್ಷದ ತಾಲ್ಲೂಕು ಅಧ್ಯಕ್ಷರಾದ ಶಂಕರ್ ಫುಲೆ ಒತ್ತಾಯಿಸಿದ್ದಾರೆ. ಕಿಟ್ಟಾ ಗ್ರಾಮದ ರಸ್ತೆಯು ಅಲ್ಲ ಅಲ್ಲಿ ಹದಗೆಟ್ಟು ಹೋಗಿದೆ ಇವುಗಳ ರಿಪೇರಿ ಮಾಡುವುದು ಬಹಳ ಅವಶ್ಯಕತೆ ಇದೆ. ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಇತ ಕಡೆ ಗಮನ ಹರಿಸುತ್ತಿಲ್ಲ ಎಂದು ದೂರಿದ್ದಾರೆ. ಇಲ್ಲಿಂದಲೆ ಬಹಳಷ್ಟು ಗ್ರಾಮಗಳಿಗೆ ವಾಹನ ಸಂಚರಿಸುತ್ತವೆ ದ್ವಿಚಕ್ರವಾಹನ ಅಟು ಬಸು. ಲಾರಿ ಸೇರಿದಂತೆ ಅನೇಕ ವಾಹನಗಳು ಸಂಚರಿಸುತ್ತವೆ ಎಂದರು. ಈ ಭಾಗದ ಜನರು ರಸ್ತೆಯ ಮೇಲೆ ಓಡಾಡುವ ಬೈಕ್ ಸವಾರರು ಬಿದ್ದು ಸಣ್ಣಪುಟ್ಟ ಗಾಯಗಳಾಗಿವೆ ಎಂದು ತಿಳಿಸಿದ್ದಾರೆ. ಇನ್ನುಮುಂದೆ ಯಾದರು ಸಂಬಂಧಿಸಿದ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಇತ ಕಡೆ ಗಮನ ಹರಿಸಿ ಆದಷ್ಟು ಬೇಗ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ಒತ್ತಾಯಿಸಿದ್ದಾರೆ.

# ಕುಷ್ಠ ರೋಗದ ತಿಳುವಳಿ ಅಗತ್ಯ: ಡಾ. ವಿಜಯ ಹಿರಸ್ಕರ್

• **ಮಲ್ಲಮ್ಮ ನುಡಿ ವಾರ್ತೆ,ಚಿಟಗುಪ್ಪ:**



ಕುಷ್ಠರೋಗದ ಬಗ್ಗೆ ಸಾರ್ವಜನಿಕರು ಸರಿಯಾದ ತಿಳಿವಳಿಕೆ ಪಡೆದುಕೊಳ್ಳುವ ಅಗತ್ಯವಿದೆ ಎಂದು ಆಡಳಿತ ವೈದ್ಯಾಧಿಕಾರಿ ಡಾ. ವಿಜಯ ಹಿರಸ್ಕರ್ ತಿಳಿಸಿದರು. ರಾಷ್ಟ್ರಪಿತ ಮಹಾತ್ಮ ಗಾಂಧಿಯವರು ಹುತಾತ್ಮರಾದ ದಿನದ ಪ್ರಯುಕ್ತ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ದಿನದ ಪ್ರತಿಜ್ಞೆ ಭೋದಿಸಿ ಮಾತನಾಡಿದ ಅವರು, ಕುಷ್ಠರೋಗ ಅಂಟುರೋಗವಲ್ಲ, ರೋಗಿಗಳ ಸ್ಪರ್ಶದಿಂದ, ಅವರೊಡನೆ ಊಟ ಮಾಡುವುದರಿಂದ ರೋಗ ಹರಡುವುದಿಲ್ಲ, ಈ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು ವೈದ್ಯಕೀಯ ಕ್ಷೇತ್ರದಲ್ಲಿ ಕೆಲಸ ಮಾಡುವ ಪ್ರತಿಯೊಬ್ಬರ ಹೊಣೆ ಎಂದರು. ಮನುಷ್ಯನನ್ನು ವಿರೂಪಗೊಳಿಸುವ ಈ ಕಾಯಿಲೆಗೆ ಇಂದಿನ ದಿನಗಳಲ್ಲಿ ಚಿಕಿತ್ಸೆ ಲಭ್ಯವಿದೆ. ರೋಗವು ಪ್ರಾರಂಭಿಕ ಹಂತದಲ್ಲಿದ್ದರೆ ವಾಸಿಮಾಡಬಹುದು. ರೋಗಿಗಳಿಗೆ ಕುಟುಂಬದವರ ಪ್ರೀತಿ ಮತ್ತು ಕಾಳಜಿ ಬಹು ಅವಶ್ಯ ಎಂದರು. ಈ ಸಂದರ್ಭದಲ್ಲಿ ಡಾ. ವೀರಾರೆಡ್ಡಿ, ಸಂತೋಷ ಗಾದಾ, ದೇವಿಂದ್ರ ನಾಗನಕೇರಾ, ಪ್ರಭು ಮುದ್ನಾಳಕರ್, ಪ್ರಶಾಂತ, ಗೀತಾ ತುಳಾಜೆ, ಸುಮಾ, ವಂದನಾ, ಆಫ್ರೆದಿ, ಸಿದ್ದಲಿಂಗ, ಅನೀಲಕುಮಾರ, ಅರುಣಕುಮಾರ, ಹಲಿಮಾ ಸೇರಿದಂತೆ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಶ್ರೀ ವೀರಭದ್ರೇಶ್ವರ ಐಟಿಐನಲ್ಲಿ ಗಾಂಧಿಜಿ ಅವರ ಪುಣ್ಯಸ್ಮರಣೆ ಕಾರ್ಯಕ್ರಮ ನಡೆಯಿತು



• **ಮಲ್ಲಮ್ಮ ನುಡಿ ವಾರ್ತೆ,ಬೀದರ್:**

ಹುಮನಾಬಾದ್ ಪಟ್ಟಣದ ಶ್ರೀ ವೀರಭದ್ರೇಶ್ವರ ಐಟಿಐನಲ್ಲಿ ಶುಕ್ರವಾರ ಮಹಾತ್ಮ ಗಾಂಧಿಜಿ ಪುಣ್ಯಸ್ಮರಣೆ ಆಚರಿಸಲಾಯಿತು.

ಕಾಲೇಜಿನ ತರಬೇತಿ ಅಧಿಕಾರಿ ವಿಶ್ವನಾಥ ಬಿರಾದಾರ ಅವರು ಗಾಂಧಿಜಿ ಅವರ ಜೀವನ ಮತ್ತು ಸಾಧನೆ ಮೇಲೆ ಬೆಳಕು ಚೆಲ್ಲಿದರು.

ಮೇರಾ ಯುವ ಭಾರತ್‌ನ ತಾಲ್ಲೂಕು ಕಾರ್ಯಕ್ರಮ ಸಂಯೋಜಕ ಲಕ್ಷ್ಮಣ ಪಿ. ಮಚಕುರೆ ಅವರು ಮೇರಾ ಯುವ ಭಾರತ್ ಕಾರ್ಯ ಚಟುವಟಿಕೆ ಕುರಿತು ಮಾಹಿತಿ ನೀಡಿದರು. ವಿದ್ಯಾರ್ಥಿಗಳು ಮನಸ್ಸು ಮಾಡಿದರೆ ಏನನ್ನು ಬೇಕಾದರೂ ಮಾಡಬಹುದು ಎಂದು ಪ್ರೋತ್ಸಾಹಕ ಮಾತುಗಳನ್ನು ಆಡಿದರು.

ಪ್ರಾಚಾರ್ಯ ಶಿವಕುಮಾರ ಡಿ. ಅಧ್ಯಕ್ಷತೆ ವಹಿಸಿದ್ದರು. ರಮೇಶ ಎಸ್. ಹೊಸಮನಿ, ಉಪನ್ಯಾಸಕರಾದ ಆರತಿ, ಮಲ್ಲಮ್ಮ, ನಿವೇದಿತಾ, ಗಂಗಾ, ರೇಖಾ ಉಪಸ್ಥಿರಿದ್ದರು. ಶಶಿಕಾಂತ ರೆಡ್ಡಿ ನಿರೂಪಿಸಿದರು.

ಪಿಯುಸಿ, ಐಟಿಐ ವಿದ್ಯಾರ್ಥಿಗಳು, ಬೋಧಕ, ಬೋಧಕೇತರ ಸಿಬ್ಬಂದಿ ಪಾಲ್ಗೊಂಡಿದ್ದರು.

ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯಿತಿ, ಕೇಂದ್ರ ಸರ್ಕಾರದ ಯುವ ಕಾರ್ಯ ಮತ್ತು ಕ್ರೀಡಾ ಸಚಿವಾಲಯ ಅಧೀನದ ಮೇರಾ ಯುವ ಭಾರತ ಹಾಗೂ ಮಾಡಗೂಳದ ಸ್ವಾಮಿ ವಿವೇಕಾನಂದ ಯುವಕ ಸಂಘಗಳ ಸಹಯೋಗದಲ್ಲಿ ಕಾರ್ಯಕ್ರಮ ಹ್ಮಮಿಕೊಳ್ಳಲಾಗಿತ್ತು.

# ಮದುವೆ ಹುಟ್ಟು ಹಬ್ಬಗಳಿಗೆ ಉಡುಗರೆಯಾಗಿ ಹೆಲ್ಮೇಟ ನೀಡಬೇಕು

## ಜಾಫರ್ ಸಾಧಿಕ್

**ಮಲ್ಲಮ್ಮ ನುಡಿ ವಾರ್ತೆ**
**ಬೀದರ:**





ಯುವಕರು ದ್ವಿ ಚಕ್ರ ವಾಹನ ನಡೆಸುವಾಗ ಕುದಲು ಉದುರುತ್ತವೆ ಎಂದು ಹೆಲ್ಮೇಟ ಹಾಕಲು ಹಿಂದೇಟು ಹಾಕಬಾರದು ಎಂದು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ಮಹ್ಮದ್ ಜಾಫರ್ ಸಾಧಿಕ್ ಅವರು ನುಡಿದ್ದರು

ಅವರು ಇಂದು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ ಭಾಲ್ಕಿ ಹಾಗು ಎನ.ಕೆ.ಜಾಬಶೆಟ್ಟಿ ಅರ್ಯುವೆದಿಕ ಮೇಡಿಕಲ ಕಾಲೇಜ ಸಹಯೋಗದಲ್ಲಿ 37ನೇ ರಾಷ್ಟೀಯ ರಸ್ತೆ ಸುರಕ್ಷತಾ ಮಾಸಾಚರಣ ಕಾರ್ಯಕ್ರಮವನ್ನು ಜ್ಯೋತಿ ಬೇಳಗಿಸುವ ಮೂಲಕ ಉಧ್ಘಾಟಿಸಲಾಯಿತು.

ವಾಹನ ಚಾಲಕರು ಅಪಘಾತಕ್ಕೆ ಒಳಗಾದರೆ ಮೊದಲು ಪೆಟ್ಟು ಬೀಳುವುದು ತೇಲೆಯ ಭಾಗಕ್ಕೆ ಹಾಗಾಗಿ ಎಲ್ಲರು ಕಡ್ಡಾಯವಾಗಿ ಹೆಲ್ಮೇಟ ಧರಿಸಿ ವಾಹನ ಚಲಾಯಿಸಬೇಕು ಕಾರ ಚಾಲಕರು ಕಡ್ಡಾಯವಾಗಿ ಸೀಟ ಬೆಲ್ಟ ಧರಿಸಬೇಕು ಸೀಟ ಬೇಲ್ಟ ಧರಿಸುವುದರಿಂದ ಅಪಘಾತಕ್ಕೆ ಒಳಗಾದರೆ ಚಾಲಕರ ತಲೆಗೆ ಎಟ ಬೀಳುವುದಿಲ್ಲಾ ಎಂದು ನುಡಿದ್ದರು. ಸಾರ್ವಜನಿಕರು ಮದುವೆ ಹುಟ್ಟಿನ ಹಬ್ಬ ಇನ್ನಿತರ ಕಾರ್ಯಕ್ರಮಗಳಲ್ಲಿ ಹೆಲ್ಮೇಟ ಉಡುಗರೆಯಾಗಿ ನೀಡಲು ಹವ್ಯಾಶ ಬೇಳಸಿ ಕೋಳಬೆಕೆಂದು ನುಡಿದ್ದರು. ವಾಹನ ಚಲಾಯಿಸುವಾಗ ಇಬ್ಬರಿಗಿಂತ ಹೆಚ್ಚು ವಿದ್ಯಾರ್ಥಿಗಳು ಚಾಲನೆ ಮಾಡಬಾರದು. ಎಲ್ಲರು ಕಡ್ಡಾಯವಾಗಿ ಸಂಚಾರಿ ನಿಯಮಗಳನ್ನು ತಪ್ಪದೆ ಪಾಲಿಸುವುದರಿಂದ ಅಪಘಾತ ಕಡಿಮೆ ಮಾಡಲು ಸಾಧ್ಯ ಎಂದು ನುಡಿದ್ದರು.

ಮೋಟಾರ ವಾಹನ ನಿರಿಕ್ಷಕರಾದ ಹುಶೇನಸಾಬ ನದಾಫ ಅವರು ಮಾತನಾಡಿ ಮಧ್ಯಪಾನ ಮಾಡಿ ವಾಹನ ಚಲಾಯಿಸಬಾರದು. ಒಂದು ವೇಳೆ ಕಂಡುಬಂದಲ್ಲಿ ಚಾಲನಾ ಪರವಾನಗಿ ರದ್ದುಗೋಳಿಸಲಾಗುವುದು ಎಂದು ನುಡಿದ್ದರು. ಈ ಕಾರ್ಯಕ್ರಮದಲ್ಲಿ ವೇದಿಕೆಯ ಮೇಲೆ ಕಾಲೇಜಿನ ಪ್ರಾಚರ್ಯರಾದ ಡಾ.ಚಂದ್ರಕಾತ ಹಳ್ಳಿ.ಡಾ.ಹಾವಗಿರಾವ ಮೈಲಾರೆ.

ಭಾಗ್ಯವಂತಿ ಮೋಟಾರ ವಾಹನ ತರಬೇತಿ ಶಾಲೆಯ ಪ್ರಾಚರ್ಯರಾದ ಶಿವರಾದ ಜಮಾದರ ಖಾಜಾಪುರ, ಕಾರ್ಯಕ್ರಮದಲ್ಲಿ ಡಾ.ಸಂಜುಕುಮಾರ ಪ್ರೀತಿ.ಡಾ.ರವಿಚಂದ್ರ ಸುರೆಶ ಸ್ವಾಮಿ ಹಾಗು ಕಾಲೇಜಿನ ವಿದ್ಯಾರ್ಥಿ.ವಿದ್ಯಾರ್ಥಿನಿಯರು ಹಾಜರಿದ್ದರು. ಕಾಲೇಜಿನ ವಿದ್ಯಾರ್ಥಿಗಳಿಗೆ ಪ್ರಭಂದ ಸ್ಪರ್ದೆಗಳಿಗೆ ಮೂವರಿಗೆ ವಿದ್ಯಾರ್ಥಿಗಳಿಗೆ ಸಾರಿಗೆ ಇಲಾಖೆ ಇಂದ ಉಚಿತ ಹೆಲ್ಮೇಟ ನಿಡಲಾಯಿತು ,

# ಮಧುಮೇಹ ನಿಯಂತ್ರಣ ಮತ್ತು ಆಯುಷ್ ಉಚಿತ ತಪಾಸಣೆ ಚಿಕಿತ್ಸಾ ಶಿಬಿರ

**ಮಲ್ಲಮ್ಮ ನುಡಿ ವಾರ್ತೆ,ಕಲಬುರಗಿ:**

ಕಲಬುರಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆಯುಷ್ ಇಲಾಖೆ, ಆಯುಷ್ಮಾನ ಆರೋಗ್ಯ ಮಂದಿರ (ಆಯುಷ್), ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ ರಾಜಾಪೂರ, ವಿವೇಕ ಜಾಗೃತಿ ಯೋಗ ವಿದ್ಯಾಪೀಠ ಪಿ.ಜಿ. ಡಿಪ್ಲೋಮಾ ಯೋಗ ಕಾಲೇಜು ಹಾಗೂ ವಿಶ್ವಭಾರತಿ ಮಹಿಳಾ ಪತ್ತಿನ ಸಹಕಾರ ಸಂಘ ಇವುಗಳ ಸಹಯೋಗದಲ್ಲಿ ರಾಷ್ಟ್ರೀಯ ಆಯುಷ್ ಆರೋಗ್ಯ ಕಾರ್ಯಕ್ರಮದ ಅಂಗವಾಗಿ ಮಧುಮೇಹ ನಿಯಂತ್ರಣ ಕಾರ್ಯಕ್ರಮ ಆಯುಷ್ ಉಚಿತ ತಪಾಸಣೆ ಹಾಗೂ ಚಿಕಿತ್ಸಾ ಶಿಬಿರವನ್ನು ಇದೇ ಜನವರಿ 31ರಂದು ಬೆಳಿಗ್ಗೆ 10 ಗಂಟೆಗೆ ಕಲಬುರಗಿ ಗಣೇಶ ನಗರದ ವಿವೇಕ ಜಾಗೃತಿ ಯೋಗ ವಿದ್ಯಾಪೀಠ ಪಿ.ಜಿ. ಡಿಪ್ಲೋಮಾ ಯೋಗ ಕಾಲೇಜಿನಲ್ಲಿ ಆಯೋಜಿಸಲಾಗಿದೆ. ಕಲಬುರಗಿ ಕೆನರಾ ಬ್ಯಾಂಕ್ ವಿಶ್ರಾಂತ ಅಧಿಕಾರಿಗಳು, ಸಮಾಜ ಚಿಂತಕರು ಹಾಗೂ ಲೇಖಕ ಮಹಾದೇವಯ್ಯ ಕರದಳ್ಳಿ ಅಧ್ಯಕ್ಷತೆ ವಹಿಸುವರು. ಕಲಬುರಗಿ ಮುಖ್ಯ ವೈದ್ಯಾಧಿಕಾರಿ (ಆಯುರ್ವೇದ) ಡಾ. ರವೀಂದ್ರ ಸಿ. ಹೂಗಾರ, ಗುಲಬರ್ಗಾ ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ವಿಭಾಗದ ಯೋಗ ತರಬೇತಿದಾರ ಡಾ. ಚಂದ್ರಕಾಂತ ಬಿ. ಬಿರಾದಾರ, ವಿಶ್ವಭಾರತಿ ಮಹಿಳಾ ಪತ್ತಿನ ಸಹಕಾರ ಸಂಘದ ಅಧ್ಯಕ್ಷೆ ವಿಜಯಲಕ್ಷ್ಮೀ ಬಿರಾದಾರ, ಜಯನಗರ ಜಿಲ್ಲಾ ಆಯುಷ್ ಇಲಾಖೆಯ ಯೋಗ ತರಬೇತಿದಾರ ಸುದೀಪ ಮಾಳಗಿ, ರಾಜಾಪೂರ ಜಿಲ್ಲಾ ಆಯುಷ್ ಇಲಾಖೆಯ ಯೋಗ ತರಬೇತಿದಾರ

# ಜಾತ್ರೆಗಳಿಂದ ಸಮಾಜದಲ್ಲಿ ಸಾಮರಸ್ಯ ಮೂಡುತ್ತದೆ : ಕಾಶಿ ಜಗದ್ಗುರು

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.



ನಮ್ಮ ದೇಶ ಆಧ್ಯಾತ್ಮಿಕ ಪ್ರಧಾನವಾಗಿದೆ, ಇಲ್ಲಿ ಅನಾದಿ ಕಾಲದಿಂದ ತಮ್ಮ ಬದುಕನ್ನೆ ಸಮಾಜಕ್ಕೆ ಅರ್ಪಣೆ ಮಾಡಿದ ಮಹಾತ್ಮರ, ಶರಣರ ಹೆಸರಿನಲ್ಲಿ ನಡೆಯುವ ಜಾತ್ರೆಗಳಿಂದ ಎಲ್ಲಾ ವರ್ಗದ ಜನರಲ್ಲಿ ಸಾಮರಸ್ಯ, ಏಕತೆ ಮೂಡಿ, ಬದಲಾವಣೆಗೆ ಪ್ರೇರಣೆ ಸಿಗುತ್ತದೆ ಎಂದು ಕಾಶಿ ಜ್ಞಾನ ಸಿಂಹಾಸನಧೀಶ್ವರ 1008 ಜಗದ್ಗುರು ಡಾ. ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಜಿ ನುಡಿದರು,

ಇಲ್ಲಿಗೆ ಸಮೀಪದ ತಿಂಥಣಿ ಹತ್ತಿರ ಕೃಷ್ಣಾನದಿ ದಂಡೆಯ ಮೇಲಿರುವ ಸುಕ್ಷೇತ್ರ ಹಾಸನಕಟ್ಟಿ ವೀರಘಟ್ಟದ ಆದಿ ಜಗದ್ಗುರು ಶ್ರೀ ಆದಿ ಮೌನಲಿಂಗೇಶ್ವರ ಜಾತ್ರಾ ಮಹೋತ್ಸವ ಹಾಗೂ ಸಾಮೂಹಿಕ ವಿವಾಹ ಕಾರ್ಯಕ್ರಮದ ನಂತರ ನಡೆದ ಧರ್ಮಸಭೆಯನ್ನು ಉದ್ಘಾಟಿಸಿ ಆಶೀರ್ವಚನ ನೀಡಿದರು,

ಕಲ್ಯಾಣ ಕರ್ನಾಟಕ ಪವಿತ್ರ ಶರಣರ, ಸೂಫಿ ಸಂತರ ನಾಡು, ಇಲ್ಲಿ ಆಯಾ ಕಾಲಕ್ಕೆ ಶರಣರು ತಮ್ಮ ಆಧ್ಯಾತ್ಮಿಕ ಶಕ್ತಿಯಿಂದ ತಮ್ಮ ಬಳಿಗೆ ಬರುವ ಭಕ್ತರ ಸಂಕಷ್ಟಗಳನ್ನು ದೂರ ಮಾಡಿ, ಅವರಿಗೆ ಸನ್ಮಾರ್ಗ ತೋರಿಸುವ ಮೂಲಕ ಅನೇಕರು ಇನ್ನೂ ಜನಮಾನಸದಲ್ಲಿ ಉಳಿದು ಪೂಜಿಸಿಕೊಳ್ಳುತ್ತಿದ್ದಾರೆ, ಈ ಕ್ಷೇತ್ರವನ್ನು ಅಡವಿಲಿಂಗ ಮಹಾರಾಜರು ಭೂಕೈಲಾಸ ಕ್ಷೇತ್ರವನ್ನಾಗಿ ಮಾಡಿ, ನಿರಂತರ ಧಾರ್ಮಿಕ, ಸಾಮಾಜಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬರುವ ಮೂಲಕ ಸಮ ಸಮಾಜ ನಿರ್ಮಾಣಕ್ಕೆ ಯತ್ನಿಸುತ್ತಿರುವ ಕಾರ್ಯ ಶ್ಲಾಘನೀಯ ಎಂದರು. ಇನ್ನೊಂದು ಕಡೆ ನಮ್ಮ ಸನಾತನ ಧರ್ಮ ಆಚರಣೆಗಳನ್ನು ಕೆಲವರು ಟೀಕಿಸಿ, ಜನರಲ್ಲಿ ಗೊಂದಲ ಮೂಡಿಸುತ್ತಿದ್ದಾರೆ, ಅವರ ಯತ್ನ ವಿಫಲವಾಗುತ್ತದೆ, ಅದಕ್ಕೆ ಉದಾಹರಣೆ ಕಳೆದ ವರ್ಷ ಪ್ರಯಾಗರಾಜ್‌ನಲ್ಲಿ ನಡೆದ ಮಹಾ ಕುಂಭಮೇಳ ಉತ್ಸವವೇ ಸಾಕ್ಷಿಯಾಗಿದೆ, ಎಲ್ಲರೂ ಧಾರ್ಮಿಕ ಆಚರಣೆಗಳನ್ನು ಉಳಿಸಿ–ಬೆಳೆಸಿ ದೇಶದ ಐಕ್ಯತೆಗೆ ಶಕ್ತಿ ತುಂಬಬೇಕೆಂದು ಕರೆ ನೀಡಿದರು.

ಈ ಕ್ಷೇತ್ರದಲ್ಲಿ ಪ್ರತಿ ವರ್ಷ ನಡೆಯುತ್ತಿರುವ ಸಾಮೂಹಿಕ ವಿವಾಹ ಕಾರ್ಯಕ್ರಮಗಳಿಂದ ನೂರಾರು ಬಡ ಕುಟುಂಬಗಳಿಗೆ ಆರ್ಥಿಕ ಸಹಕಾರಿಯಾಗಿ ದುಂದುವೆಚ್ಚಕ್ಕೆ ಕಡಿವಾಣ ಹಾಕಿದಂತಾಗಿದೆ ಎಂದರು.

ಪ್ರಸಕ್ತ ದಿನಗಳಲ್ಲಿ ದೇಶದ ಬೆನ್ನೆಲುಬಾಗಿರುವ ರೈತರು ಹಾಗೂ ಯುವಜನತೆ ಹಲವಾರು ಕಾರಣಗಳಿಗೆ ಬದುಕಿನ ಉತ್ಸಾಹವನ್ನು ಕಳೆದುಕೊಂಡು ಆತ್ಮಹತ್ಯೆಗೆ ಶರಣಾಗುತ್ತಿರುವುದು ದುರಂತವಾಗಿದೆ, ಕಷ್ಟ ಪ್ರತಿಯೊಬ್ಬರ ಬದುಕಿನಲ್ಲಿ ಬರುವುದು ಸಹಜ, ಕಷ್ಟವೇ ಬದುಕಿನ ಜೀವಂತ ಲಕ್ಷಣ ಎಂದು ಭಾವಿಸಿ, ಆತ್ಮವಿಶ್ವಾಸದಿಂದ, ಶ್ರಮದಿಂದ ಅದನ್ನು ಮೆಟ್ಟಿ ಬಾಳಬೇಕು, ಅಂದಾಗ ಮಾತ್ರ ಇದು ಇತರರಿಗೆ ಪ್ರೇರಣೆಯಾಗುತ್ತದೆ ಎಂದು ತಿಳಿಸಿದರು.

ಇಂದು ಸಮಾಜದಲ್ಲಿ ಜನರು ಹಾಗೂ ಯುವಕರು ಕೆಟ್ಟ ಚಟಗಳಿಗೆ ಬೇಗನೇ ಆಕರ್ಷಿತರಾಗಿ ಬಲಿಯಾಗುತ್ತಿದ್ದಾ–ರೆ, ನಾವೆಲ್ಲರೂ ವ್ಯಸನಮುಕ್ತ ಸಮಾಜ ನಿರ್ಮಾಣ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇವೆ, ಕಾರಣ ಎಲ್ಲರೂ ಜಾಗೃತರಾಗಿ ಆತ್ಮಾವಲೋಕನ ಮಾಡಿಕೊಂಡು ಧರ್ಮದ ಹಾದಿಯಲ್ಲಿ ಒಳ್ಳೆಯ ಹವ್ಯಾಸಗಳನ್ನು ಮೈಗೂಡಿಸಿಕೊಂಡು ಕ್ರೀಯಾಶೀಲರಾಗಿ, ಪರೋಪಕಾರಿಯಾಗಿ ಬಾಳಿದಾಗ ಮಾತ್ರ ಬದುಕಿನ ಮೌಲ್ಯ ವೃದ್ಧಿಯಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜಾಲಹಳ್ಳಿಯ ಜಯಶಾಂತಲಿಂಗೇಶ್ವರ ಶಿವಾಚಾರ್ಯರು ಮಾತನಾಡಿ, ಮನುಷ್ಯ ಮೊದಲು ಸಮಾಜದಲ್ಲಿ ಆರೋಗ್ಯ ಹಾಗೂ ಗೌರವದಿಂದ ಬಾಳಬೇಕಾದರೆ ಮೊದಲು 3 ತತ್ವಗಳಾದ ಕರ್ಮ, ಧರ್ಮ, ದೇವರ ಬಗ್ಗೆ ಶ್ರದ್ಧೆ ಅಳವಡಿಸಿಕೊಂಡಾಗ ಮಾತ್ರ ಬದುಕು ಸಾರ್ಥಕವಾಗುತ್ತದೆ ಎಂದು ಹೇಳಿದರು. ಬಳ್ಳಾರಿ ಬಿಜೆಪಿ ಜಿಲ್ಲಾಧ್ಯಕ್ಷ ಅನೀಲಕುಮಾರ ಮಾತನಾಡಿ, ನಮ್ಮ ದೇಶದಲ್ಲಿರುವ ಮಠ–ಮಾನ್ಯಗಳು ಅಭಿವೃದ್ಧಿಗೆ ನೀಡಿರುವ ಕೊಡುಗೆ ಅಪಾರ, ಅವರು ತ್ರಿವಿಧ ದಾಸೋಹಗಳ ಮೂಲಕ ಸಮಾಜವನ್ನು ಗಟ್ಟಿಯಾಗಿ ನೆಲೆಗೊಳ್ಳುವ ಮೂಲಕ ಸನಾತನ ಧರ್ಮ ಪ್ರಗತಿಯತ್ತ ಸಾಗಲು ಮುನ್ನುಡಿ ಬರೆದ ಪರಿಣಾಮ ಎಲ್ಲರೂ ಶಾಂತಿ–ನೆಮ್ಮದಿಯಿಂದ ಬಾಳುತ್ತಿದ್ದೇವೆ ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು, ಈ ನಿಸರ್ಗದಲ್ಲಿ ಪವಿತ್ರ ಶಕ್ತಿಯಿದೆ, ಅದನ್ನು ನಾವೂ ಗೌರವದಿಂದ ಕಾಣಬೇಕು, ಅದರೊಂದಿಗೆ ಹೊಂದಾಣಿಕೆಯಾಗಿ ಜೀವನ ಸಾಗಿಸಬೇಕು, ಯಾವುದೇ ಧರ್ಮಕ್ಷೇತ್ರಕ್ಕೆ ಭೇಟಿ ನೀಡಬೇಕಾದರೆ ಆ ವ್ಯಕ್ತಿಗೆ ಯೋಗ–ಭೋಗ ಇರಬೇಕು, ಇಂತಹ ಪವಿತ್ರ ಕಾರ್ಯಕ್ರಮದಲ್ಲಿ ನಾವೂ ಭಾಗಿಯಾಗಿ, ಪುನೀತರಾಗಿದ್ದೇವೆ ಎಂದು ಹೇಳಿದರು. ಕ್ಷೇತ್ರದ ಪೀಠಾಧಿಪತಿ ಅಡವಿಲಿಂಗ ಮಹಾರಾಜರು ಮಾತನಾಡಿ, ಭಕ್ತರ ಸಹಕಾರದಿಂದ ಕ್ಷೇತ್ರದಲ್ಲಿ ಧಾರ್ಮಿಕ ಚಟುವಟಿಕೆಗಳ ಜೊತೆಗೆ ಸಮಾಜಮುಖಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು, ವೇದಿಕೆ ಮೇಲೆ ಶ್ರೀಗಿರಿಯ ಡಾ. ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಜಿ, ಗುರುಲಿಂಗ ಶಿವಾಚಾರ್ಯರು, ಪಂಚಾಚಾರ್ಯ ಮಹಾಸ್ವಾಮಿಜಿ, ಸೋಮೇಶ್ವರ ಸ್ವಾಮಿಜಿ, ವೀರಣ್ಣ ಪಾಣಿ, ಮಾಜಿ ಸಚಿವ ಶಿವನಗೌಡ ನಾಯಕ, ಶಾಸಕಿ ಕರೆಮ್ಮ ಜಿ. ನಾಯಕ, ಭೀಮಣ್ಣ ನಾಡಗೌಡ ಚಿಂಚೋಡಿ, ಶ್ರೀನಿವಾಸರಡ್ಡಿ ಪಾಟೀಲ್ ಚೆನ್ನೂರ, ಸಂಜೀವರಡ್ಡಿ, ಬಸವರಾಜ ಪಡಕೋಟಿ, ಆದನಗೌಡ ಪಾಟೀಲ್ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಇದಕ್ಕೂ ಮೊದಲು ಜಗದ್ಗುರುಗಳ ಅಡ್ಡ ಪಲ್ಲಕ್ಕಿ ಉತ್ಸವ ಚಿಂಚೋಡಿ ಗ್ರಾಮದಿಂದ ವೀರಘಟ್ಟದವರೆಗೆ ಜರುಗಿತು, ನಂತರ ಭವ್ಯ ರಥೋತ್ಸವ ಜರುಗಿತು.

# ನಗದು, ಬಂಗಾರ, ಬೈಕ್ ಸೇರಿ 13.20 ಲಕ್ಷ ರೂ. ಜಪ್ತಿ.



ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.

ಕಳೆದ ಜ.16 ರಂದು ಹಾಡುಹಗಲೇ ಕಾರ್ ನಲ್ಲಿ ಇಟ್ಟಿದ್ದ ಶರಣಪ್ಪ ಕೊನೆಮನಿ ಎಂಬುವವರಿಗೆ ಸೇರಿದ್ದ ನಗದು 9.50 ಲಕ್ಷ ರೂ. 29 ಗ್ರಾಂ ಬಂಗಾರ ದೋಚಿದ್ದ ಖತರನಾಕ್ ಕಳ್ಳರಿಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ಶಿವಮೊಗ್ಗ ಜಿಲ್ಲೆಯ ಭದ್ರಾವತಿಯ ಸಂದೀಪ್ ಬೋವಿ, ಶಂಕರ ಬೋವಿ ಎಂಬ ಕಳ್ಳರೇ ಬಂಧಿತರು.

ಅವರಿಂದ ನಗದು 8.20 ಲಕ್ಷ ರೂ. 4.50 ಲಕ್ಷ ರೂ.ಮೌಲ್ಯದ 29 ಗ್ರಾಂ ಹಾಗೂ ಒಂದು ಲಕ್ಷ ರೂ.ಮೌಲ್ಯದ ಎರಡು ಬೈಕ್ ಜಪ್ತಿ ಮಾಡಿದ್ದಾರೆ.

ಎಸ್ ಪಿ ಪೃಥ್ವಿಕ್ ಶಂಕರ್, ಹೆಚ್ಚುವರಿ ಎಸ್ ಪಿ ಧರಣೇಶ ನೇತೃತ್ವದಲ್ಲಿ ಡಿವೈಎಸ್ ಪಿ ಸುರೇಶ ನಾಯಕ, ಸಿಪಿಐ ಸುನೀಲ್ ಮೂಲಿಮನಿ, ಪಿಎಸ್ ಐ ಮಂಜನಗೌಡ ಎಂಬ ಅಧಿಕಾರಿಗಳ ತಂಡ ಪೊಲೀಸ ಸಿಬ್ಬಂದಿಗಳ ಸಹಕಾರದಿಂದ ಈ ಕಳ್ಳರನ್ನು ಬಂಧಿಸಿದ್ದಾರೆ. ನಗರ ಠಾಣೆಯಲ್ಲಿ ಈ ಕುರಿತು ಪ್ರಕರಣ ದಾಖಲಾಗಿದೆ.

# ಭಗವಾನ್ ಬುದ್ಧರ ಮೂರ್ತಿ ಪ್ರತಿಷ್ಠಾಪನೆ ಹಾಗೂ ಅಭಿವೃದ್ಧಿಗೆ ಅನುದಾನ ನೀಡಿ: ದಸಂಸ್ವಾಒ ಮನವಿ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.

ಯಾದಗಿರಿ ನಗರದ ಲುಂಬಿನಿ ಉದ್ಯಾನವನವು ನಗರದ ಪ್ರಮುಖ ಪ್ರವಾಸಿ ತಾಣವಾಗಿದ್ದು, ಮತ್ತು ಇದೊಂದು ಉತ್ತಮ ಪರಿಸರವುಳ್ಳ ಶಾಂತಿಯುತ ಪ್ರವಾಸಿ ತಾನವಾಗಿದ್ದು ವಾಯು ವಿಹಾರ ಕೇಂದ್ರವಾಗಿದ್ದು, ಈಗಾಗಲೇ ಜಿಲ್ಲಾಡಳಿತ ಮತ್ತು ನಗರಸಭೆಯಿಂದ ಲುಂಬಿನಿ ಉದ್ಯಾನವನ ಎಂದು ಹೆಸರು ಘೋಷಣೆ ಮಾಡಿದ್ದು, ಲುಂಬಿನಿ ಉದ್ಯಾನವದಲ್ಲಿ ಭಗವಾನ ಬುದ್ಧನ ಮೂರ್ತಿ ಪ್ರತಿಷ್ಠಾಪನೆ ಮಾಡಬೇಕೆಂದು ದಲಿತ ಸಂಘಟನೆಗಳ ಸ್ವಾಭಿಮಾನ ಒಕ್ಕೂಟದಿಂದ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಯಾದಗಿರಿಯ ಲುಂಬಿನಿವನದ ಮಧ್ಯ ಭಾಗದಲ್ಲಿ 101 ಅಡಿ ಎತ್ತರದ ಭಗವಾನ್ ಬುದ್ಧರ ಮೂರ್ತಿ ಪ್ರತಿಷ್ಠಾಪನೆ ಮಾಡಬೇಕೆಂದು ಹಾಗೂ ಅಭಿವೃದ್ಧಿಗಾಗಿ ಹೆಚ್ಚಿನ ಅನುದಾನ ನೀಡಲು ದಲಿತ ಸಂಘಟನೆಗಳ ಸ್ವಾಭಿಮಾನಿ ಒಕ್ಕೂಟ ಯಾದಗಿರಿ ವತಿಯಿಂದ ಮನವಿ ಮಾಡಲಾಯಿತು.

ಈ ಸಂದರ್ಭದಲ್ಲಿ ಗೌರವಧ್ಯಕ್ಷ

ಚಂದಪ್ಪ ಮುನಿಯಪ್ಪನೋರ್, ಸಮಿತಿ ಸಲಹೆಗಾರ ಶರಣು ಎಸ್ ನಾಟೇಕರ್, ಕಾಶಿನಾಥ ನಾಟೇಕರ್ ಅಧ್ಯಕ್ಷ ಜಗದೀಶ.ಎನ್.ದಾಸನಕೇರಿ ಪ್ರಧಾನ ಕಾರ್ಯದರ್ಶಿ,ಅಂಜು ಯಾದಗಿರಿ, ಆನಂದ ಮ್ಯಾಗೇರಿ, ರಾಹುಲ್ ಕೊಲ್ಲೂರಕರ್, ಚಂದ್ರಕಾಂತ ಚಲುವಾದಿ, ತಾಯಪ್ಪ ಭಂಡಾರಿ, ಗಿರೀಶ್ ಚ–ಟ್ಟೇರಕರ್, ಪರಶುರಾಮ್ ಚಲುವಾದಿ ಇನ್ನಿತರರು ಇದ್ದರು.

# 6ಗಂಟೆಯಲ್ಲಿ ಚಿನ್ನಾಭರಣ ಕಳವು ಮಾಡಿದ್ದ ಆರೋಪಿ ಬಂಧನ

ಮಲ್ಲಮ್ಮ ನುಡಿ ವಾರ್ತೆ

ಬೀದರ :



ಬೀದರ ಜಿಲ್ಲಾ ಪೊಲೀಸರು ಕಾರ್ಯಾಚರಣೆ ನಡೆಸಿ ಚಿನ್ನಾಭರಣ ಕಳವು ಮಾಡಿದ್ದ ಆರೋಪಿಯನ್ನು ಕೇವಲ ಆರು ಗಂಟೆಯೊಳಗೆ ಬಂಧಿಸುವಲ್ಲಿ ಯಶಸ್ವಿಯಾಗಿರುವ ಭಾಲ್ಕಿ ತಾಲ್ಲೂಕಿನ ಖಟಕಚಿಂಚೋಳಿ ಠಾಣೆ ಪೊಲೀಸರು, ಚಿನ್ನಾಭರಣಗಳನ್ನು ಮೂಲ ಮಾಲೀಕರಿಗೆ ಒಪ್ಪಿಸಿದ್ದಾರೆ.

ಭಾಲ್ಕಿ ತಾಲ್ಲೂಕಿನ ಕುರುಬಖೇಳಗಿ ಗ್ರಾಮದ ಆನಂದ್ ಬಂಧಿತ ವ್ಯಕ್ತಿಯಾಗಿದ್ದಾನೆ,

ಸಿಂದಗಿ ತಾಲ್ಲೂಕಿನ ಬಂಟನೂರಿನ ಈರಪ್ಪ ಬಡಿಗೇರ ಅವರಿಗೆ ಸೇರಿದ –3.15 ಲಕ್ಷ ಮೌಲ್ಯದ ಚಿನ್ನಾಭರಣಗಳನ್ನು ಜಪ್ತಿ ಮಾಡಲಾಗಿದೆ.6 ಗ್ರಾಂ ಹಾಗೂ 5 ಗ್ರಾಂ ಎರಡು ಚಿನ್ನದ ಉಂಗುರ, ಒಂದು ತೊಲ ಚಿನ್ನದ ಲಾಕೆಟ್ ಅನ್ನು ಈರಪ್ಪ ಅವರಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ಅವರು ಅವರ ಕಚೇರಿಗೆ ಕರೆದು ಹಸ್ತಾಂತರಿಸಿದರು.

ಈರಪ್ಪ ಬಡಿಗೇರ ಅವರು ಜನವರಿ 27ರಂದು ಹುಮನಾಬಾದ್ ವೀರಭದ್ರೇಶ್ವರ ಜಾತ್ರೆಯ ದೇವಸ್ಥಾನಕ್ಕೆ ಹೋಗಿ ದರ್ಶನ ಮುಗಿಸಿಕೊಂಡು ಹುಮನಾಬಾದ್‌ನಿಂದ ಭಾಲ್ಕಿಗೆ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಪ್ರಯಾಣ ಮಾಡುತ್ತಿದ್ದರು. ಖಟಕಚಿಂಚೋಳಿ ಠಾಣೆ ವ್ಯಾಪ್ತಿಯ ಕಪಲಾಪೂರ ಕ್ರಾಸ್ ಬಳಿ ಅವರ ಚಿನ್ನಾಭರಣ ಕಳವು ಮಾಡಲಾಗಿತ್ತು. ಈ ಬಗ್ಗೆ ಖಟಕಚಿಂಚೋಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಭಾಲ್ಕಿ ಡಿವೈಎಸ್ಪಿ ಶಿವಾನಂದ ಪವಾಡಶೆಟ್ಟಿ, ಖಟಕಚಿಂಚೋಳಿ ಠಾಣೆಯ ಪಿಎಸ್‌ಐ ಪ್ರಭಾಕರ ಪಾಟೀಲ್, ಅಪರಾಧ ವಿಭಾಗದ ಸಿಬ್ಬಂದಿ ಬುಡ್ಡಪ್ಪ, ಶ್ರೀಕಾಂತ ಅವರು ಕಾರ್ಯಾಚರಣೆ ನಡೆಸಿ, ಆರು ಗಂಟೆಯೊಳಗೆ ಆರೋಪಿಯನ್ನು ಬಂಧಿಸಿ ಉತ್ತಮ ಕೆಲಸ ಮಾಡಿದ್ದಾರೆ ಎಂದು ಎಸ್ಪಿ ಪ್ರದೀಪ್ ಗುಂಟಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

# ಅಮಾನತ್ ಆದ ಅಧಿಕಾರಿಗಳಿಗೆ ಮತ್ತೇ ಪೋಸ್ಟಿಂಗ್ ಯಾಕೆ: ಅಶೋಕ ಐಕೂರು

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.

ಅವ್ಯವಹಾರದ ಆರೋಪದ ಮೇಲೆ ಅಮಾನತ್ ಗೊಂಡಿದ್ದ ಕೆಆರ್ ಐಡಿಎಲ್ ಅಧಿಕಾರಿಗಳಾದ ಧನಂಜಯ ಮತ್ತು ಶಿವರಾಜ್ ಅವರನ್ನು ಈಗ ಅದೇ ಇಲಾಖೆಗೆ ಮರಳಿ ರೀ ಆರ್ಡರ್ ಮಾಡಿದ್ದು ಎಷ್ಟರ ಮಟ್ಟಿಗೆ ಸರಿ. ಈ ಸರ್ಕಾರ ಭ್ರಷ್ಟ ಅಧಿಕಾರಿಗಳ ಬೆನ್ನಿಗೆ ನಿಂತಂತೆಯೇ ಎಂದು ಪ್ರಶ್ನಿಸಿರುವ ವರ್ತೂರ ಪ್ರಕಾಶ ಯುವ ಘರ್ಜನೆ ಜಿಲ್ಲಾಧ್ಯಕ್ಷ ಐಕೂರು ಅಶೋಕ



ಜಿಲ್ಲೆಯ ವಡಗೇರಾ, ಯಾದಗಿರಿ ತಾಲೂಕು ಹಾಗೂ ನಗರದ ರಸ್ತೆಗಳ ನಡುವೆ ನಡೆದಿರುವ ಡಿವೈಡರ್ ಕಾಮಗಾರಿ ಕಳಪೆ ಮಟ್ಟದಲ್ಲಿ ಆಗಿದ್ದು, ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳನ್ನು ಅಮಾನತ್ ಗೊಳಿಸಬೇಕೆಂದು ಆಗ್ರಹಿಸಿದ್ದಾರೆ.

ಈ ಕುರಿತು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿರುವ ಅವರು, ಕೆಕೆಆರ್ ಡಿಬಿ ಅಕ್ಷರ ಅವಿಷ್ಕಾರ ಮೈಕ್ರೋ ಯೋಜನೆಯಡಿ ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ( ಕೆಆರ್ ಐಡಿಎಲ್) ಕಾರ್ಯಪಾಲಕ ಅಭಿಯಂತರ ಧನಂಜಯ, ಸಹಾಯಕ ಕಾರ್ಯಪಾಲಕ ಅಭಿಯಂತರ ಶಿವರಾಜ್ ಹುಡೆದ್, ಜೆಇಗಳಾದ ಹೊನ್ನಪ್ಪ, ಚಂದ್ರು ಅವರುಗಳು ಬೇಕಾಬೇಟ್ಟಿಯಾಗಿ ಕೆಲಸ ಮಾಡುವ ಮೂಲಕ ಅನುದಾನ ಸಂಪೂರ್ಣ ದುರ್ಬಳಕೆ ಮಾಡಿದ್ದಾರೆಂದು ಅವರು ವಿವರಿಸಿದ್ದಾರೆ.ಕಾರಣ ಕೂಡಲೇ ಈ ಬಗ್ಗೆ ತನಿಖೆ ನಡೆಸಿ, ಸಂಬಂಧಿಸಿದ ಅಧಿಕಾರಿಗಳ ಮೇಲೆ ಕಠಿಣ ಕ್ರಮ ಜರುಗಿಸಬೇಕೆಂದು ಐಕೂರು ಅಶೋಕ ಆಗ್ರಹಿಸಿದ್ದಾರೆ.

# ಇಂದು ವಿರಾಟ್ ಹಿಂದೂ ಸಮ್ಮೇಳನ



ಮಲ್ಲಮ್ಮ ನುಡಿ ವಾರ್ತೆ, ಯಾದಗಿರಿ.

ಹಿಂದೂ ಸಮ್ಮೇಳನ ಆಯೋಜನಾ ಸಮಿತಿ ವತಿಯಿಂದ ವಿರಾಟ್ ಹಿಂದೂ ಸಮ್ಮೇಳನ ನಗರದ ಮೈಲಾಪೂರ ಭೇಸ್ , ಹನುಮಾನ ದೇವಸ್ಥಾನ ದಿಂದ ಪ್ರಾರಂಭವಾಗಿ ಸಾಯಂಕಾಲ 5.00 .ಕ್ಕೆ ವನಕೇರಿ ಲೇಔಟ್ ಬಾಲಾಜಿ ದೇವಸ್ಥಾನ ಹತ್ತಿರ ತಲುಪುತ್ತದೆ ಎಂದು ವಿರಾಟ ಹಿಂದೂ ಸಮ್ಮೇಳನದ ಅಧ್ಯಕ್ಷರಾದ ರಾಜಶೇಖರ್ ಬಾಪೂರೆ ಹೇಳಿದ್ದರು. ನಗರದ ಪತ್ರಿಕ ಭವನದಲ್ಲಿ ನಡೆದ ಪತ್ರಿಕಗೋಷ್ಠಿಯಲ್ಲಿ ಮಾತನ್ನಾಡಿ ಹೇಳಿದ್ದರು.

ಭವ್ಯ ಶೋಭಾಯಾತ್ರೆ ಮಧ್ಯಾಹ್ನ 2.30 ಕ್ಕೆ ಗೋ ಪೂಜೆ ಮೂಲಕ ಚಾಲನೆ, ದಿವ್ಯ ಸಾನಿಧ್ಯ ಪರಮ ಪೂಜ್ಯ ರವೀಂದ್ರ ಮಹಾಸ್ವಾಮಿಗಳು ವಿಶ್ವಕರ್ಮ ಏಕದಂಡಗಿ ಮಠ ಯಾದಗಿರಿ, ಷ.ಬ್ರ.ಶ್ರೀ ಶಾಂತಮಲ್ಲಿಕಾರ್ಜುನ ಮಹಾಸ್ವಾಮಿಗಳು, ಶಾಂತ ಶಿವಯೋಗೇಶ್ವರ ಸಂಸ್ಥಾನ ಮಠ ಹೆಡಗಿಮದ್ರಾ, ಪರಮ ಪೂಜ್ಯ ಶ್ರೀ ಚನ್ನವೀರ ಮಹಾಸ್ವಾಮಿಗಳು ಸೊಪ್ಪಿ ಬಸವೇಶ್ವರ ಮಠ ಯಾದಗಿರಿ ಹಾಗೂ ದಿಕ್ಸೂಚಿ ಭಾಷಣ ಮನೋಹರ ಮಠದ ದೇವಾಲಯ ಸಂವರ್ಧನಾ ಸಮಿತಿ ಕರ್ನಾಟಕ ರಾಜ್ಯ ಸಂಯೋಜಕರ ಕೇಂದ್ರ ಬೆಂಗಳೂರು ಭಾಗವಹಿಸವರು.

ಈ ಭವ್ಯ ಶೋಭಾಯಾತ್ರೆಯಲ್ಲಿ ಭಾರತ ಮಾತೆ ಭಾವಚಿತ್ರ & ಎಲ್ಲಾ ಸಮಾಜದ ಎಲ್ಲಾ ಶರಣರ ಭಾವಚಿತ್ರದೊಂದಿಗೆ ಮೈಲಾಪೂರ ಭೇಸ್, ಶಿವಾಜಿ ವೃತ್ತ, ಗಾಂಧಿ ಚೌಕ್, ವೀರಶೈವ ಕಲ್ಯಾಣ ಮಂಟಪ, ಬಾಬು ಜಗಜೀವನರಾಮ್ ವೃತ್ತ, ಕನಕ ವೃತ್ತ ಮಾರ್ಗವಾಗಿ ಬಾಲಾಜಿ ದೇವಸ್ಥಾನರಸ್ತೆ ಮೂಲಕ ವನಕೇರಿ ಲೇಔಟ್ ತಲುಪುವುದು. ನಂತರ ವೇದಿಕೆ ಕಾರ್ಯಕ್ರಮ ಪರಮ ಪೂಜ್ಯ ಸ್ವಾಮಿಗಳಿಂದ 5.30 ಗಂ–ಟೆಗೆ. ದೀಪ ಪ್ರಜ್ವಲನ, ಹಾಗೂ ಭಾರತ ಮಾತೆಗೆ ಪುಷ್ಪಾರ್ಚನೆ ಮುಖಾಂತರ ಪ್ರಾರಂಭಗೊಳ್ಳಲಿದೆ ಎಂದರು. ಈ ಸದರ್ಭದಲ್ಲಿ ಸಮ್ಮೇಳನದ ಸಂಚಾಲಕರಾದ ಬಸವಕುಮಾರ ಯಾದವ್, ಸಮ್ಮೇಳನ ಉಪಾಧ್ಯಕ್ಷರಾದ ವೆಂಕಯ್ಯ ಶೆಟ್ಟಿ, ಸಮ್ಮೇಳನ ಕಾರ್ಯದರ್ಶಿ ಆಕಾಶ್ ಬೀರನೂರ, ಸಮ್ಮೇಳದ ಕೋರ್ ಕಮಿಟಿ ಸದಸ್ಯರಾದ ಸಾಬು ಚಂಡ್ರಿಕಿ, ಮಲ್ಲು ಕೋಲಿವಾಡ, ಸುರೇಶ ಅಂಬಿಗೇರ, ತುಳಸಿದಾಸ ಪತಂಗೆ, ಅಮರೇಶ್ ಅನಸೂಗೂರು, ಶ್ರೀವು ಸುಖಲೂರು, ಅಶ್ವಿನ್ ಪಾಚಾರ್ಯ, ಜಿತೇಂದ್ರ ನವಗಿರಿ, ರಮೇಶ್ ಪೂಜಾರಿ, ಮಹೇಶ ಕುಮಾರ, ಶಿವು ಪಾಟೀಲ್, ಇದ್ದರು.

# ವಿದ್ಯಾರ್ಥಿಗಳು ಸಾಹಿತ್ಯ ಅಭಿರುಚಿ ಬೆಳೆಸಿಕೊಳ್ಳಬೇಕು: ಡಾ : ಸಿದ್ಧರಾಮ ಹೊನಕಲ್.

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.

ಇಂದಿನ ವಿದ್ಯಾರ್ಥಿಗಳು ವಿದ್ಯಾರ್ಥಿದೆಸೆಯಿಂದಲೇ ಸಾಹಿತ್ಯದ ಅಭಿರುಚಿ ಬೆಳೆಸಿಕೊಳ್ಳುವುದರ ಜೊತೆಗೆ ಬದುಕಿನಲ್ಲಿ ನೈತಿಕ ಮೌಲ್ಯಗಳು ಅಳವಡಿಸಿಕೊಳ್ಳಬೇಕೆಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರಾದ ಡಾ.ಸಿದ್ದರಾಮ ಹೊನಕಲ್ ಸಲಹೆ ನೀಡಿದರು. ಶಹಾಪುರ ಪಟ್ಟಣದ ಸರಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು ವತಿಯಿಂದ ಆಯೋಜಿಸಿದ ಚಕೋರ ಹಾಗೂ ಸಾಹಿತ್ಯ ವಿಚಾರ ವೇದಿಕೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ವಿದ್ಯಾರ್ಥಿಗಳು ಇಂಟರ್ನೆಟ್, ಮೊಬೈಲ್ ಗಳಿಂದ ದೂರವಿದ್ದು ಕಷ್ಟಪಟ್ಟು ಓದುವುದಕ್ಕಿಂತ ಇಷ್ಟಪಟ್ಟು ಓದಬೇಕು, ಅಲ್ಲದೆ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಉಳಿವಿಗಾಗಿ ಇಂದಿನ ಯುವ ಪೀಳಿಗೆ ಶ್ರಮಿಸಬೇಕಾಗಿದೆ ಎಂದು ನುಡಿದರು. ರಾಜ್ಯಶಾಸ್ತ್ರದ ಉಪನ್ಯಾಸಕ ಡಾ: ಬಿ.ಆರ್.ಅಂಚೆಸೂಗೂರು ಮಾತನಾಡಿ ಪ್ರಜಾಪ್ರಭುತ್ವವು ಕೇವಲ ಮತದಾನವಲ್ಲ ಅದು ನಾಗರಿಕರ ಸಕ್ರಿಯ ಭಾಗವಹಿಸುವಿಕೆ ಮತ್ತು ಸಾಂವಿಧಾನಿಕ ಮೌಲ್ಯಗಳ ಆಚರಣೆಯಾಗಿದೆ. ಜೊತೆಗೆ ಭಾರತೀಯ ಪ್ರಜೆಗಳಾದ ನಾವು ಉತ್ತಮ ಬದುಕನ್ನು ಕಟ್ಟಿಕೊಳ್ಳಬೇಕಾದರೆ ಸಂವಿಧಾನ ಓದಿ ಅರ್ಥೈಸಿಕೊಳ್ಳಬೇಕು ಎಂದು ಸವಿಸ್ತಾರವಾಗಿ ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ವಾಯ್.ಎಚ್.ವಜ್ಜಲ್ ವಹಿಸಿಕೊಂಡಿದ್ದರು,ಈ ಸಮಾರಂಭದ ವೇದಿಕೆಯ ಮೇಲೆ ಉಪನ್ಯಾಸಕ ಸುರೇಶ್ ಬಾಬು ಅರುಣಿ ಆಂಗ್ಲ ಭಾಷಾ ಉಪನ್ಯಾಸಕಿ ಶೋಭಾ, ಕನ್ನಡ ಜಾಗೃತಿ ಸಮಿತಿ ಸದಸ್ಯ ಬಸವರಾಜ ಶಿಣ್ಣೂರ,ಉಪನ್ಯಾಸಕರಾದ ಹನುಮಂತರಾಯಗೌಡ,ಮೌನೇಶ್ ಜೊತೆಗೆ ಇನ್ನಿತರರು ಉಪಸ್ಥಿತರಿದ್ದರು,ಕುಮಾರಿ ಶ್ರೀದೇವಿ ಕಾರ್ಯಕ್ರಮದಲ್ಲಿ ಪ್ರಾರ್ಥಿಸಿದರು.




# ಬೇಸಿಗೆಯಲ್ಲಿ ನಗರಕ್ಕೆ ಸಮರ್ಪಕ ನೀರು ಸರಬರಾಜಿಗೆ ಪಾಲಿಕೆ ಸಿದ್ಧತೆ



• ಮಲ್ಲಮ್ಮ ನುಡಿ ವಾರ್ತೆ,

ಬಳ್ಳಾರಿ;

ನಗರದ ನಾರಾಯಣರಾವ್ ಪಾರ್ಕಿನಲ್ಲಿ ಇಂದು ಮೇಯರ್ ಪಿ. ಗಾದೆಪ್ಪ ಹಾಗೂ ಪಾಲಿಕೆಯ ಆಯುಕ್ತ ಪಿ.ಎಸ್.ಮಂಜುನಾಥ ಅವರು ನಗರದ ವಾರ್ಡ್ ಗಳಲ್ಲಿ ನೀರು ಬಿಡುವ ಎಲ್ಲಾ ವಾಲ್ವ್ ಮೆನ್ ಹಾಗೂ ಸಂಬಂಧ ಪಟ್ಟ ಇಂಜಿನಿಯರ್ಗಳ ಸಭೆ ನಡೆಸಿ. ಮುಂಬರುವ ಬೇಸಿಗೆಯ ದಿನದಲ್ಲಿ ನೀರಿನ ಸಮಸ್ಯೆ ಬರದಂತೆ, ನೀರು ಪೋಲ್ ಆಗದಂತೆ ನೀರು ಸೋರಿಕೆ ಸಮಸ್ಯೆ ಇದ್ದರೆ ಕೂಡಲೇ ಸಂಬಂಧಪಟ್ಟ ಇಂಜಿನಿಯರ್ ಗೆ ಮಾಹಿತಿ ಕೊಟ್ಟು ದುರಸ್ತಿ ಕೆಲಸ ಮಾಡಿಸಿಕೊಳ್ಳಲು ಸೂಚಿಸಿದರು.

ಜೊತೆಗೆ ಸ್ಥಾಯಿ ಸಮಿತಿ ಅಧ್ಯಕ್ಷರುಗಳ ಉಪಸ್ಥಿತಿಯಲ್ಲಿ ನಿನ್ನೆ ದಿನ ಪಾಲಿಕೆಯ ಎಲ್ಲಾ ಅಭಿಯಂತರರೊಂದಿಗೆ ಸಭೆ ನಡೆಸಿ ಬಳ್ಳಾರಿ ನಗರಕ್ಕೆ ಬೇಸಿಗೆಯಲ್ಲಿ ಕುಡಿಯುವ ನೀರು ಸರಬರಾಜು ಮಾಡುವುದಕ್ಕೆ ಸಂಬಂಧಿಸಿದಂತೆ ಚರ್ಚೆ ನಡೆಸಿದರು.

ಟಿ.ಬಿಡ್ಯಾಮ್‌ನಲ್ಲಿ ಗೇಟ್ ಅಳವಡಿಸುವ ಕಾರ್ಯ ನಡೆಯುತ್ತಿರುವುದರಿಂದ ನೀರಿನ್ನು ಮಿತವಾಗಿ ಬಳಸಲು ಸಾರ್ವಜನಿಕರಿಗೆ ಕೋರಲು ಹಾಗೂ ಬೇಸಿಗೆ ಕಾಲದಲ್ಲಿ ನಾಗರೀಕರಿಗೆ ತೊಂದರೆಯಾಗದ ರೀತಿಯಲ್ಲಿ ಸಮರ್ಪಕವಾಗಿ ನೀರು ಸರಬರಾಜು ನಿರ್ವಹಣೆ ಮಾಡಲು ಕೆ.ಯು. ಡಬ್ಲ್ಯು.ಎಸ್ ಮತ್ತು ಡಿ.ಬಿ.ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಹಾಗೂ ಪಾಲಿಕೆಯ ಅಭಿಯಂತರರಿಗೆ ಸೂಚಿಸಿದರು. ಹಾಗೂ ನೀರು ಎಲ್ಲಿ ಪೋಲಾಗದಂತೆ ಮುನ್ನೆಚ್ಚರಿಕೆ ಕ್ರಮ ವಹಿಸಬೇಕು. ಯಾವುದೇ ವಾರ್ಡಿನಲ್ಲಿ ನೀರಿನ ಪೈಪುಗಳು ಲೀಕಗಳು ಕಂಡ ಬಂದರೆ ಆ ವಾರ್ಡಿನ ವಾಲ್ ಮ್ಯಾನೇ ಹಾಗೂ ಇಂಜಿನಿಯರ್ ಜವಾಬ್ದಾರನಾಗುತ್ತಾನೆ. ಕೂಡಲೇ ದುರಸ್ತಿ ಮಾಡಿಸಿಕೊಳ್ಳಬೇಕು ಇಲ್ಲವಾದಲ್ಲಿ ಅವರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಮೇಯರ್ ಎಚ್ಚರಿಕೆ ನೀಡಿದ್ದಾರೆ

# ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಗಾಂಧೀಜಿಯ ಪಾತ್ರ ಅವಿಸ್ಮರಣೀಯ

• **ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ :**




ಭಾರತದ ಸ್ವತಂತ್ರ ಚಳುವಳಿಯಲ್ಲಿ ಮಹಾತ್ಮ ಗಾಂಧೀಜಿ ಅವರ ಪಾತ್ರ ಅವಿಸ್ಮರಣೀಯ ಎಂದು ಎನ್. ಎಸ್. ಎಸ್. ಅಧಿಕಾರಿ ಡಾ. ಬಿ. ಸೂರ್ಯಕಾಂತ್ ಅಭಿಪ್ರಾಯಪಟ್ಟರು. ಭೀಮಣ್ಣ ಖಂಡ್ರೆ ತಾಂತ್ರಿಕ ಮಹಾವಿದ್ಯಾಲಯದಲ್ಲಿ ರಾಷ್ಟ್ರಪಿತ ಮಹಾತ್ಮಾ ಗಾಂಧಿಜಿಯವರ ಪುಣ್ಯಸ್ಮರಣೆಯ ಪ್ರಯುಕ್ತ ಹುತಾತ್ಮ ದಿನಾಚರಣೆಯನ್ನು ಆಚರಿಸಿ ಮಾತನಾಡಿ, ದೇಶಕ್ಕೆ ಶಾಂತಿ, ಅಹಿಂಸೆ, ಸತ್ಯಾಗ್ರಹದ ಮೂಲಕ ದೇಶಕ್ಕೆ ಸ್ವತಂತ್ರ ಕೊಟ್ಟ ಮಹಾನುಭಾವರು ಎಂದು ಹೇಳಿದರು. ಗಾಂಧಿಜಿಯವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಮಾಲಾರ್ಪಣೆ ಮಾಡಿ ಕಾರ್ಯಕ್ರಮವನ್ನು ನಡೆಸಲಾಯಿತು. ಕಾರ್ಯಕ್ರಮದಲ್ಲಿ ಎನ್. ಎಸ್. ಎಸ್. ಘಟಕದ ಪದಾಧಿಕಾರಿಗಳಾದ ಪ್ರೊ .ಸುನೀಲ ಸಂಗಮೆ, ಪ್ರೊ. ಕಾವೇರಿ, ರಷ್ಮಿ, ಡಾ. ಮಲ್ಲಿಕಾರ್ಜುನ ಮುಗ್ಗಿ, ವಿಭಾಗ ಮುಖ್ಯಸ್ಥರಾದ ಡಾ. ಪ್ರಶಾಂತ ಸಂಗುಳಗಿ, ಪ್ರೊ.ಬಿ.ಎಮ್.ಪಾಟೀಲ, ಡಾ.ಅಶೋಕ ಕೋಟಿ, ಪ್ರೊ. ಯೋಗೇಶ ಗಂದಗೆ, ಡಾ. ವಿಜಯಕುಮಾರ ದುರ್ಗ, ಶ್ರೀ ಶಾಂತಕುಮಾರ ಶೆಟಕಾರ ಮುಂತಾದವರು ಭಾಗವಹಿಸಿದ್ದರು.

# ಭಾಲ್ಕಿ ಬಿಜೆಪಿ ಮಂಡಲ ಪದಾಧಿಕಾರಿಗಳ ನೇಮಕ



• **ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:**

ತಾಲೂಕಿನ ಬಿಜೆಪಿ ಮಂಡಲಕ್ಕೆ ಜಿಲ್ಲಾಧ್ಯಕ್ಷರ ಆದೇಶದ ಮೇರೆಗೆ ವಿವಿಧ ಪದಾಧಿಕಾರಿಗಳನ್ನು ನೇಮಿಸಿ ಜವಾಬ್ದಾರಿ ಹಂಚಿಕೆ ಮಾಡಲಾಗಿದೆ ಎಂದು ತಾಲೂಕು ಅಧ್ಯಕ್ಷ ವೀರಣ್ಣ ಕಾರಬಾರಿ ತಿಳಿಸಿದ್ದಾರೆ.

ಎಂಟು ಜನರನ್ನು ಉಪಾಧ್ಯಕ್ಷರಾಗಿ, ಇಬ್ಬರು ಪ್ರಧಾನ ಕಾರ್ಯದರ್ಶಿ, ಎಂಟು ಜನ ಕಾರ್ಯದರ್ಶಿ ಮತ್ತು ಒಬ್ಬರನ್ನು ಖಜಾಂಚಿಯನ್ನಾಗಿ ನೇಮಿಸಲಾಗಿದೆ.

**ಪದಾಧಿಕಾರಿಗಳ ವಿವರ :**

ಸಂಗಮೇಶ ಕಾರಾಮುಂಗೆ, ಪಾಂಡುರಂಗ ಕನಸೆ, ಗಂಗಾಧರ ಹೊಸಳ್ಳಿ, ಉದ್ಧವ ಕೊಟಮಾಳೆ, ಸಿದ್ದು ಕಾಡಾದಿ, ಅನರಾಜ ಕುಂದೆ, ರಾಜಶೇಖರ ಬಿರಾದಾರ್ ಮತ್ತು ಪಂಡರಿ ಮೇತ್ರೆ ಅವರನ್ನು ಉಪಾಧ್ಯಕ್ಷರನ್ನಾಗಿ ನೇಮಿಸಲಾಗಿದೆ. ರೇವಣಿಸಿದ್ದ ಜಾಡರ, ಡಾ.ಮಹೇಶ ಭಾಲ್ಕೆ ಅವರನ್ನು ಪ್ರಧಾನ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ. ಶಂಕರರಾವ ಬಿರಾದಾರ್, ದೇವಾನಂದ ಬಗದೂರೆ, ಚಂದ್ರಕಾಂತ ಬಿಗೆ, ಶೀತಲ ಕಾಂಬಳೆ, ವೈಶಾಲಿ ಬಿರಾದಾರ್, ರೇಷ್ಮಾ ತಮಾಸಿಂಗೆ, ಮಹೇಶ ಸ್ವಾಮಿ, ಗೋವಿಂದ ಪಾಟೀಲ್ ಅವರನ್ನು ಕಾರ್ಯದರ್ಶಿಯಾಗಿ ಮತ್ತು ಕರಸಬಪ್ಪ ಅವರನ್ನು ಖಜಾಂಚಿಯನ್ನಾಗಿ ನೇಮಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಫೆ.3 ರಂದು ನೇರ ಸಂದರ್ಶನ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ಕಲಬುರಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ 2026ರ ಫೆಬ್ರವರಿ 3 ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಕಲಬುರಗಿ ಸರ್ಕಾರಿ ಐ.ಟಿ.ಐ ಕಾಲೇಜು ಹಿಂದುಗಡೆಯಿರುವ ಜಿಲ್ಲಾ ಉದ್ಯೋಗ ವಿನಿಮಯ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ನೇರ ಸಂದರ್ಶನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕಲಬುರಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ. ಐ.ಸಿ.ಐ.ಸಿ.ಐ.ಸಿ. ಬ್ಯಾಂಕ್‌ನಲ್ಲಿ ಸೇಲ್ಸ್ ಮತ್ತು ರಿಲೇಷನಶಿಪ್ ಮ್ಯಾನೇಜರ್ ಹುದ್ದೆಗೆ ಯಾವುದೇ ಪದವಿ ವಿದ್ಯಾರ್ಹತೆ ಹೊಂದಿರಬೇಕು. ವಯೋಮಿತಿ 18 ರಿಂದ 25 ವರ್ಷದೊಳಗಿರಬೇಕು. ಆಸಕ್ತಿಯುಳ್ಳ ಅಭ್ಯರ್ಥಿಗಳು ಮೇಲ್ಕಂಡ ದಿನದಂದು ನಡೆಯುವ ನೇರ ಸಂದರ್ಶನಕ್ಕೆ ತಮ್ಮ ಎಲ್ಲಾ ಅಂಕಪಟ್ಟಿಗಳ ಝೆರಾಕ್ಸ್ ಮತ್ತು ರೆಸ್ಯೂಮ (ಬಯೋಡೆಟಾ), ಪಾಸ್‌ಪೋರ್ಟ್ ಸೈಜ್ ಭಾವಚಿತ್ರ ಹಾಗೂ ಆಧಾರ್‌ಕಾರ್ಡ್‌ದೊಂದಿಗೆ ಹಾಜರಾಗಬೇಕು.

# ಜಿಲ್ಲೆಯಲ್ಲಿ ಅಕ್ರಮ ಮರಳು ದಂಧೆ ಕಡಿವಾಣಕ್ಕೆ ಖಡಕ್ ಸೂಚನೆ

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ದೇವದುರ್ಗ, ಸಿರವಾರ, ಮಾನವಿ, ಸಿಂಧನೂರ ಮತ್ತು ಲಿಂಗಸೂರ ತಾಲೂಕು ಸೇರಿದಂತೆ ಜಿಲ್ಲೆಯ ಯಾವುದೇ ಕಡೆಗಳಲ್ಲಿ ಅನಧೀಕೃತವಾಗಿ ಮರಳು ಸಾಗಣೆ ಕೂಡಲೇ ನಿಲ್ಲಬೇಕು. ಯಾವುದೇ ಕಡೆಗಳಲ್ಲಿ ರಾಜಾರೋಷವಾಗಿ ಮರಳು ಎತ್ತುವುದು ಕಂಡು ಬಂದಲ್ಲಿ ಅದನ್ನು ಸಹಿಸಲಾಗುವುದಿಲ್ಲ. ಅವರು ಎಷ್ಟೇ ಪ್ರಭಾವಿಗಳಾಗಿರಲಿ, ಯಾರೇ ಇರಲಿ ಅಂತವರ ಮೇಲೆ ಮುಲಾಜಿಲ್ಲದೇ ಕ್ರಮ ಜರುಗಿಸಲು ಹಿಂದೆ ಮುಂದೆ ನೋಡುವುದಿಲ್ಲ ಎಂದು ಜಿಲ್ಲಾ ಟಾಸ್ಕ್‌ಫೋರ್ಸ ಸಮಿತಿ, ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಹಾಗೂ ಜಿಲ್ಲಾ ಕಲ್ಲು ಪುಡಿ ಮಾಡುವ ಘಟಕಗಳ ಲೈಸೆನ್ಸ್ ನೀಡಿಕೆ ಮತ್ತು ನಿಯಂತ್ರಣ ಪ್ರಾಧಿಕಾರದ ಸಮಿತಿಯ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಕಡಕ್ ಎಚ್ಚರಿಕೆ ನೀಡಿದರು.

ನೂತನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜನವರಿ 30ರಂದು ನಡೆದ ಜಿಲ್ಲಾ ಟಾಸ್ಕ್‌ಫೋರ್ಸ ಸಮಿತಿ, ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಹಾಗೂ ಜಿಲ್ಲಾ ಕಲ್ಲು ಪುಡಿ ಮಾಡುವ ಘಟಕಗಳ ಲೈಸೆನ್ಸ್ ನೀಡಿಕೆ ಮತ್ತು ನಿಯಂತ್ರಣ ಪ್ರಾಧಿಕಾರದ ಸಮಿತಿಯ ಸಭೆಯಲ್ಲಿ ಮಾತನಾಡಿದ ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆಯ ದೇವದುರ್ಗ, ಮಾನವಿ ಸೇರಿದಂತೆ ಇನ್ನಿತರ ಕಡೆ ಅನಧೀಕೃತ ಮರಳು ಸಾಗಣೆ ಅವ್ಯಾಹತ ನಡೆ–ಯುತ್ತಿದ್ದು, ಇದಕ್ಕೆ ಬ್ರೇಕ್ ಹಾಕಲು ಅಧಿಕಾರಿಗಳು ಕ್ರಮ ವಹಿಸಬೇಕು ಎನ್ನುವ ವಿಷಯವು ಕೆಡಿಪಿ ಸಭೆ ಮತ್ತು ಇನ್ನಿತರ ಸಭೆಗಳಲ್ಲಿ ಮತ್ತೆ ಮತ್ತೆ ಚರ್ಚೆಗೆ ಬರುತ್ತಿದೆ. ಈ ವಿಷಯವನ್ನು ಜಿಲ್ಲಾಡಳಿತವು ಗಂಭೀರವಾಗಿ ಪರಿಗಣಿಸಿದೆ. ಈ ಲ್ಯಾಂಡ್ ಮಾಫಿಯಾದಲ್ಲಿ ಯಾವುದೇ ಅಧಿಕಾರಿಗಳು ಮತ್ತು ಸಿಬ್ಬಂದಿ ಭಾಗಿಯಾಗಕೂಡದು. ಈ ಅಕ್ರಮ ಮರಳು ದಂಧೆಯಲ್ಲಿ ಭಾಗಿಯಾಗಿ, ಅಧಿಕಾರಿಗಳು ಮತ್ತು ಸಿಬ್ಬಂದಿಯು ನೋಡಿಯೂ ನೋಡದಂತೆ ಇದ್ದರೆ, ಅಕ್ರಮ ಮರಳು ದಂಧೆಗೆ ಕುಮ್ಮಕ್ಕು ನೀಡಿದರೆ ಸಹಾಯಕ ಆಯುಕ್ತರು, ಪೊಲೀಸ್ ಉಪಾಧೀಕ್ಷಕರು, ತಹಸೀಲ್ದಾರರು, ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು, ಪಿಡಿಓ ಯಾರೇ ಇರಲಿ ಅಂತಹ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಅಮಾನತುಗೊಳಿಸಲು ಕೂಡಲೇ ಶಿಫಾರಸ್ಸು ಮಾಡಲಾಗುವುದು. ಪ್ರಕರಣವು ಗಂಭೀರವಾಗಿದ್ದಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿ ಮೇಲೆಯೇ ಎಫ್‌ಐಆರ್ ದಾಖಲಿಸಿ ಶಾಶ್ವತವಾಗಿ ಮನೆಗೆ ಕಳುಹಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ವಿಶೇಷ ಕಾರ್ಯಾಚರಣೆಗೆ ಸೂಚನೆ: ಅಕ್ರಮ ಮರಳು ಸಾಗಣೆಗೆ ಬ್ರೇಕ್ ಹಾಕಬೇಕು ಎಂಬುದು ದೇವದುರ್ಗ ಸಿಟಿ ಜನರು ಹಾಗೂ ಆ ತಾಲೂಕಿನ 48 ಹಳ್ಳಿಗಳ ಒಕ್ಕೊರಲಿನ ಮನವಿ ಮತ್ತು ಒತ್ತಾಯವಾಗಿದೆ. ಈ ಹಿನ್ನಲೆಯಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿ ತಂಡವಾಗಿ ದೇವದುರ್ಗ ತಾಲೂಕಿನಲ್ಲಿ ವಾರಗಳ ಕಾಲ ವಿಶೇಷ ಕಾರ್ಯಾಚರಣೆಗಿಳಿಯಬೇಕು. ದೇವದುರ್ಗ ಮತ್ತು ಮಾನವಿಯಲ್ಲಿ ಆರ್‌ಟಿಓ ಅಧಿಕಾರಿಗಳು ವಿಶೇಷ ಡ್ರೈವ್ ನಡೆಸಬೇಕು ಎಂದು ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.



ಪೊಲೀಸ್ ರಕ್ಷಣೆಗೆ ಪಡೆದುಕೊಳ್ಳಿ: ನೇಮ್ ಪ್ಲೇಟ್ ಇಲ್ಲದೇ ಮಣ್ಣು ತುಂಬಿಕೊಂಡು ಓಡಾಡುವ ಟಿಪ್ಪರ್, ಟ್ರಾಕ್ಟರ್‌ಗಳ ಮೇಲೆ ಕಣ್ಣಿಟ್ಟು ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ದಾಳಿ ನಡೆಸಿ ಅಂತಹ ವಾಹನಗಳನ್ನು ಸೀಜ್ ಮಾಡಬೇಕು. ಹೇವಿ ಪೆನಾಲ್ಟಿ ಹಾಕಿ ಬಿಸಿ ಮುಟ್ಟಿಸಬೇಕು, ಸೀಜ್ ಮಾಡಿ ಸುಮ್ಮನೆ ಬಿಡಬಾರದು ಎಂದು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಚೆಕ್‌ಪೋಸ್ಟ್ ಸ್ಥಾಪನೆಗೆ ಸೂಚನೆ: ಜಾಲಹಳ್ಳಿ, ಗಬ್ಬೂರ ಸೇರಿದಂತೆ ದೇವದುರ್ಗ, ಸಿರವಾರ, ಲಿಂಗಸೂರು, ಮಾನವಿ, ಸಿಂಧನೂರ ತಾಲೂಕಿನ ವಿವಿಧೆಡೆ ಕೂಡಲೇ ಚೆಕ್‌ಪೋಸ್ಟ್ ಸ್ಥಾಪನೆಗೆ ಕ್ರಮವಹಿಸಿ ಅಕ್ರಮ ಮರಳು ಸಾಗಣೆ ತಡೆಯಬೇಕು. ಬೇರೆ ಬೇರೆ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ, ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಹಾಗೂ ಗೃಹರಕ್ಷಕ ದಳದ ಸಿಬ್ಬಂದಿ ಸೇರಿ ಒಟ್ಟು ಮೂರು ತಂಡಗಳಾಗಿ ಚೆಕ್‌ಪೋಸ್ಟನಲ್ಲಿ ನಿಗಾ ಇಡಬೇಕು. ಅಧಿಕಾರಿಗಳು ಮತ್ತು ಸಿಬ್ಬಂದಿಯಿಂದಲೇ ಯಾವುದೇ ಮೇಸೇಜ್ ಪಾಸಾಗದಂತೆ ಜಾಗರೂಕರೆವಹಿಸಿ ಬೇರೆ ಬೇರೆ ಭಾಗದ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಚೆಕ್‌ಪೋಸ್ಟಗಳಿಗೆ ನಿಯೋಜನೆ ಮಾಡಬೇಕು. ಬೇರೆ ಬೇರೆ ಇಲಾಖೆಗಳಲ್ಲಿನ ಎಫ್‌ಡಿಎ, ಎಸ್‌ಡಿಎ ಸೇರಿದಂತೆ ಇನ್ನೀತರ ಸಿಬ್ಬಂದಿಯನ್ನು ಕಾರ್ಯಾಚರಣೆ ನಡೆಸುವ ಸಮಿತಿಗೆ ಸೇರಿಸಿಕೊಂಡು ಅವರಿಗೆ ಜವಾಬ್ದಾರಿ ಹಂಚಿಕೆ ಮಾಡಬೇಕು ಎಂದು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಸಿಸಿ ಟಿವಿ ಅಳವಡಿಕೆಗೆ ಸೂಚನೆ: ಬೇರೆ ಬೇರೆ ಕಡೆಗಳಲ್ಲಿ ಸಿಸಿ ಟಿವಿ ಅಳವಡಿಸಿ ಅವರು ಕಾರ್ಯ ನಿರ್ವಹಿಸುವಂತೆ ನೋಡಿ ನಿಗಾ ವಹಿಸಬೇಕು. ಸಿಟಿ ಟಿವಿ ರೆಕಾರ್ಡ್ ಇಟ್ಟುಕೊಳ್ಳಬೇಕು. ಸಿಸಿಟಿವಿ ಅಳವಡಿಸಿಲ್ಲ ಎಂದು ಯಾವುದೇ ಕಾರಣ–ಕ್ಕೂ ಸಬೂಬು ಹೇಳುವಂತಿಲ್ಲ ಎಂದು ಜಿಲ್ಲಾಧಿಕಾರಿಗಳು, ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಸೀಜ್ ಮಾಡಿದ ಸ್ಯಾಂಡ್ ವಿಲೆಗೆ ಸೂಚನೆ: ಜಿಲ್ಲೆಯಲ್ಲಿ ಕೆಕೆಆರ್‌ಡಿಬಿಯಿಂದ ವಿವಿಧ ಕಾಮಗಾರಿಗಳು ನಡೆಯುತ್ತಿವೆ. ಜಲಧಾರೆಯ ದೊಡ್ಡ ಪ್ರೊಜೆಕ್ಟ್ ಅನುಷ್ಠಾನವಾಗುತ್ತಿದೆ. ನಿರ್ಮಿತಿ ಕೇಂದ್ರದಿಂದಲೂ ಕೆಲವು ಕಾಮಗಾರಿಗಳು ಚಾಲ್ತಿಯಲ್ಲಿವೆ. ಇಂತಹ ಕಾಮಗಾರಿಗಳಿಗೆ ಮಣ್ಣು ಬೇಕಾಗುತ್ತದೆ. ಇದುವರೆಗೆ ಜಪ್ತಿ ಮಾಡಿದ ಮಣ್ಣಿಗೆ ನಿಯಮಾನುಸಾರ ಇ ಹರಾಜು ಪ್ರಕ್ರಿಯೆ ನಡೆಸಬೇಕು ಎಂದು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಆಯುಕ್ತರು, ತಹಸೀಲ್ದಾರಗೆ ಸೂಚನೆ: ಸಹಾಯಕ ಆಯುಕ್ತರು ಮತ್ತು ತಹಸೀಲ್ದಾರರು ಅಕ್ರಮ ಮರಳು ಸಾಗಣೆ ಪ್ರಕರಣಗಳ ಬಗ್ಗೆ ವಿಶೇಷ ನಿಗಾವಹಿಸಬೇಕು. ತಮ್ಮ ಹಂತದಲ್ಲಿ ತಂಡಗಳನ್ನು ರಚಿಸಿಕೊಂಡು ಆಯಾ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಯಾವ ಕಡೆಗೆ ಎಷ್ಟು ದಾಳಿ ಮಾಡಿದ್ದೀರಿ ಎಂಬುದರ ಬಗ್ಗೆ ಟಾರ್ಗೆಟ್ ನೀಡಬೇಕು. ತಮ್ಮ ಹಂತದಲ್ಲಿ ದಾಳಿ ನಡೆಸಿ ಜೆಸಿಬಿ, ಟಿಪ್ಪರ್, ಟ್ರಾಕ್ಟರ್ ಸೀಜ್ ಮಾಡಿ ಬಿಸಿಮುಟ್ಟಿಸಬೇಕು ಎಂದು ಸೂಚನೆ ನೀಡಿದರು.

**ಆರ್‌ಟಿಓ ಅಧಿಕಾರಿಗಳಿಗೆ ಸೂಚನೆ:**

ತಂಡವಾಗಿ ಕೆಲಸ ಮಾಡಿ: ಪೊಲೀಸ್ ಸೇರಿದಂತೆ ಬೇರೆ ಬೇರೆ ಇಲಾಖೆಗಳ ಅಧಿಕಾರಿಗಳು ತಂಡವಾಗಿ ಕೆಲಸ ಮಾಡಬೇಕು. ರಾತ್ರಿ 9 ಗಂಟೆಯಿಂದ ಬೆಳಗಿನ 7 ಗಂಟೆವರೆಗಿನ ಅವಧಿಯಲ್ಲಿ ವಿಶೇಷ ನಿಗಾವಹಿಸಬೇಕು. ಒಂದೇ ವಾಹನಕ್ಕೆ ಅನುಮತಿ ಪಡೆದು ಒಂದೇ ನೇಮ್ ಪ್ಲೇಟ್ ಮೇಲೆ ನಾಲ್ಕಾರು ಗಾಡಿ ಓಡಿಸುವ ಜಾಲದ ಬಗ್ಗೆ ಗಮನ ಹರಿಸಬೇಕು ಎಂದು ಇದೆ ವೇಳೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಷು ಗಿರಿ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ದೂರುಗಳ ದಾಖಲಿಸಿ: ಜಿಲ್ಲಾ ಪಂಚಾಯತ್ ಸಿಇಓ ಈಶ್ವರ್ ಕಾಂದೂ ಅವರು ಮಾತನಾಡಿ, ಉಪಖನಿಜ ಸಾಗಣೆ ವಾಹನಗಳಿಗೆ ಜಿಪಿಎಸ್ ಅಳವಡಿಸುವುದು ಕಡ್ಡಾಯವಾಗಿರುತ್ತದೆ. ಜಿಲ್ಲೆಯಲ್ಲಿ ಹಲವಾರು ವಾಹನಗಳಿಗೆ ಪರವಾನಿಗೆ ಇಲ್ಲದೇ, ನಂಬರ್ ಪ್ಲೇಟ್ ಇಲ್ಲದೇ ಹಾಗೂ ಜಿಪಿಎಸ್ ನೋಂದಣಿ ಇಲ್ಲದೇ ಅನಧೀಕೃತವಾಗಿ ಉಪ ಖನಿಜ ಸಾಗಣೆ ಮಾಡುವ ಬಗ್ಗೆ ದೂರುಗಳನ್ನು ದಾಖಲಿಸಬೇಕು ಎಂದು ಸೂಚನೆ ನೀಡಿದರು.

# ಸರಕಾರ ಯೋಜನೆಗಳ ಸದುಪಯೋಗ ಪಡೆದುಕೊಳ್ಳಿ



• **ಮಲ್ಲಮ್ಮ ನುಡಿ ವಾರ್ತೆ ಮುದಗಲ್ :**

ಸರಕಾರ ವಿಕಲಚೇತನರು ಸ್ವಾವಲಂಬಿಯಾಗಿ ಬದುಕಲು ಸಾಕಷ್ಟು ಯೋಜನೆಗಳಿವೆ ಅವುಗಳನ್ನು ಸದುಪಯೋಗ ಪಡೆದುಕೊಂಡು , ಆರ್ಥಿಕವಾಗಿ ಸದೃಢರಾಗಬೇಕು ಎಂದು ಪುರಸಭೆ ಮುಖ್ಯಾಧಿಕಾರಿ ಪ್ರವೀಣಕುಮಾರ ಬೋಗಾರ ಹೇಳಿದರು.ವಿಶ್ವ ವಿಶೇಷ ಚೇತನರ ದಿನಾಚರಣೆಯ ಪ್ರಯುಕ್ತ ಪುರಸಭೆ ಕಾರ್ಯಲಯದಲ್ಲಿ ವಿಕಲಚೇತನರ ಸಮನ್ವಯ ಗ ಸಭೆಯ ಉದ್ಘಾಟನೆ ಮಾಡಿ ನಂತರ ಮಾತನಾಡಿದರು.

ನಂತರ ರಾಜ್ಯಾಧ್ಯಕ್ಷ ಸುರೇಶ್ ಬಂಡಾರಿ ಮಾತನಾಡಿ ಅಂಗವಿಕಲರನ್ನು ಸಮಾನ ದೃಷ್ಟಿಯಿಂದ ನೋಡಬೇಕು. ಕನಿಕರದಿಂದ ನೋಡುವ ಬದಲು ಗೌರವ ಮತ್ತು ಸಮಾನತೆ ಅವರ ಆತ್ಮ ವಿಶ್ವಾಸವನ್ನು ಹೆಚ್ಚಿಸುತ್ತದೆ. ಜನಪ್ರತಿನಿಧಿಗಳು ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನ ವಿಕಲಚೇತನರಿಗೆ ಸುಲಭವಾಗಿ ಎಟುಕುವಂತೆ ಕೆಲಸ ಮಾಡಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಮುದಗಲ್ ಪುರಸಭೆ ಸಂಘಟನಾಧಿಕಾರಿ ಚೆನ್ನಮ್ಮ ದಳವಾಯಿ,ತಾಲೂಕು ಅಧ್ಯಕ್ಷ ಅಜ್ಮಲ್ ಜಮೀದಾರ, ಲಿಂಗಸುಗೂರು ಸಂಸ್ಥೆಯ ಅಧ್ಯಕ್ಷ ಹುಸೇನಬಾಷಾ, ಅಸ್ಕಿಹಾಳ ನಾಗರಾಜ್,,ವೀರುಪಾಕ್ಷಯ್ಯ ಹೊಸಮಠ,ಕಾರ್ಯಕರ್ತೆ ರೋಸ್ ಮೇರಿ. ಮಹಾದೇವಿ ಕನ್ನಾಪೂರ ಹಟ್ಟಿ., ಹಸ್ಕಿಯಾಳ ನಾಗರಾಜ್, ವಿಕಲಚೇತನರು ಹಾಗೂ ಪೋಷಕರು ಇದ್ದರು.

# ನಗರಭೆ ವಿರುದ್ಧ ರೊಚ್ಚಿಗೆದ್ದ ತಾಲ್ಲೂಕು ನಾಗರೀಕ ಹಿತ ರಕ್ಷಣ ಸಮಿತಿ

• **ಮಲ್ಲಮ್ಮ ನುಡಿ ವಾರ್ತೆ ಹುಣಸೂರು:**

ನಿವೇಶನ ರಹಿತ ಫಲಾನುಭವಿಗಳನ್ನು ಗುರುತಿಸಿ25 ವರ್ಷಗಳ ಹಿಂದೆ ಹಕ್ಕು ಪತ್ರ ನೀಡಿದ್ದು, ಇದುವರೆಗು ಫಲಾನುಭವಿಗಳಿಗೆ ಸ್ಥಳ ಗುರುತಿಸಿ ನಿವೇಶನ ನೀಡದಿರುವ ನಗರಭೆ ಆಡಳಿತದ ವಿರುದ್ಧ ರೊಚ್ಚಿಗೆದ್ದ ಫಲಾನುಭವಿಗಳು ನಗರಸಭೆ ಮುಂದೆ ತಾಲ್ಲೂಕು ನಾಗರೀಕ ಹಿತ ರಕ್ಷಣ ಸಮಿತಿ ಮುಂದಾಳತ್ವದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.



ಈಸಂದರ್ಭದಲ್ಲಿ ಪ್ರತಿಭಟನಾಕರರನ್ನು ಉದ್ದೇಶಿಸಿ ನಾಗರೀಕ ಹಿತ ರಕ್ಷಣ ಸಮಿತಿಯ ತಾಲೂಕು ಅಧ್ಯಕ್ಷ ಸ್ವಾಮಿಗೌಡ ಮಾತನಾಡಿ, ನಗರ ನಿವೇಶನ ರಹಿತ ಬಡ ಜನರು ದಲಿತರು ಹಿಂದುಳಿದ ಹಾಗೂ ದುರ್ಬಲ ವರ್ಗದವರಿಗೆ ಆಶ್ರಯ ಸಮಿತಿವತಿಯಿಂದ 1991–92 ನೇ ಸಾಲಿನಲ್ಲಿ ನಗರ ಮಂಜುನಾಥ ಬಡಾವಣೆ,ವಿ.ಪಿ.ಬೋರೆಯಲ್ಲಿ ಖಾಲಿ ನಿವೇಶನವನ್ನು ಅಂಚಿಕೆ ಮಾಡಲಾಗಿತ್ತು, ಇದಾದ ನಂತರ 2002–03 ನೇ ಸಾಲಿನಲ್ಲಿ ಅಂದಿನ ಶಾಸಕರಾದ ದಿವಂಗತ ವಿ.ಪಾಪಣ್ಣರವರು ನಿವೇಶನ ರಹಿತ ಹಿಂದುಳಿದ ಮತ್ತು ದುರ್ಬಲ ವರ್ಗದವರಿಗೆ ಆಶ್ರಯ ಸಮಿತಿ ವತಿಯಿಂದ ಅರ್ಹ 870 ಫಲಾನುಭವಿಗಳನ್ನು ಗುರುತಿಸಿ ಆಯ್ಕೆ ಮಾಡಿ ಜಿಲ್ಲಾಧಿಕಾರಿಗಳಿಂದ ಅನುಮೋಧನೆ ಪಡೆದು ತಹಶೀಲ್ದಾರ್ ಮುಖಾಂತರ 2004–05 ನೇ ಸಾಲಿನಲ್ಲಿ ಹಕ್ಕುಪತ್ರಗಳನ್ನು ವಿತರಣೆ ಮಾಡಲಾಗಿತ್ತು.

ನಂತರದ ದಿನಗಳಲ್ಲಿ 2004–05 ನೇ ಸಾಲಿನಿಂದ 2025–26 ನೇ ಸಾಲಿನ ತನಕ 22 ವರ್ಷಗಳು ಕಳೆದರೂ ಹಿಂದಿನ ಪುರಸಭೆಯಾಗಲೀ ಪ್ರಸ್ತುತ ನಗರಸಭೆಯಾಗಲೀ ಹಕ್ಕುಪತ್ರ ಪಡೆದಿರುವ ಫಲಾನುಭವಿಗಳಿಗೆ ಖಾತೆ ಮಾಡಿ ಸ್ಥಳ ಗುರುತಿಸಿ ನಿವೇಶನಗಳನ್ನು ನೀಡುವಲ್ಲಿ ಅಧಿಕಾರಿಗಳು ಮುಂದಾಗದೇ ಬೇಜವಾಬ್ದಾರಿತನದಿಂದ ನಡೆದು–ಕೊಂಡಿದ್ದಾರೆ. ಇದರಿಂದ ನಿವೇಶನ ರಹಿತ ಅಸಹಾಯಕ ದುರ್ಬಲ ವರ್ಗದವರಿಗೆ ಘೋರ ಅನ್ಯಾಯವಾಗಿದೆ. ಈ ಅನ್ಯಾಯವನ್ನು ಖಂಡಿಸಿ ನಾವು ಪ್ರಭಟನೆ ಮಾಡುವ ಮೂಲಕ ಫಲಾನುಭವಿಗಳಿಗೆ ನಿವೇಶನ ಗುರುತಿಸಿಕೊಡಲು ತಾಲ್ಲೂಕು ಆಡಳಿತವನ್ನು ಒತ್ತಾಯಿಸುತ್ತಿದ್ದೇವೆ ಎಂದರು.

ಉಪಾಧ್ಯಕ್ಷರಾದ ಇಂಟೆಕ್ ರಾಜು ಮಾತನಾಡಿ, ಹಕ್ಕುಪತ್ರ ಪಡೆದಿರುವ ಫಲಾನುಭವಿಗಳು ಕಳೆದ 25 ವರ್ಷಗಳಿಂದ ನಗರಸಭೆಗೆ ನಿವೇಶನಕ್ಕಾಗಿ ಜನರು ಅಲೆಯುತ್ತಿದ್ದರೂ ಯಾವುದೇ ಜನಪ್ರತಿನಿಧಿಗಳಾಗಲೀ ಬಡವರ, ಬಗೆ ದೀನ ದಲಿತರ, ದುರ್ಬಲ ವರ್ಗದವರ ಬಗ್ಗೆ ಕಿಂ–ಚಿತ್ತು ಕರುಣೆ ಕಾಳಜಿ ತೋರದೆ ಇಂತಹ ನಗರ ಮುಗ್ಧ ಜನರನ್ನು ಕೇವಲ ಮತಕ್ಕಾಗಿ ಬಳಸಿಕೊಂಡ ರಾಜಕರಣಿಗಳು ತಮ್ಮ ರಾಜಕೀಯ ಬೇಳೆ ಬೇಯಿಸಿಕೊಂಡು ತೆವಲನ್ನು ತೀರಿಸಿಕೊಂಡಿದ್ದಾರೆ. ಶಾಸಕರಾದ ದಿವಂಗತ ಪಾಪಣ್ಣ ರವರ ಆಯ್ಕೆಯಾಗಿ ಬಂದರೂ, ಬಡವರ, ದೀನ–ದಲಿತರಿಗೆ ಶಾಸ್ವತ ಸೂರಿನ ವ್ಯವಸ್ಥೆ ಮಾಡದೆ ಅವರ ಕಷ್ಟಗಳಿಗೆ ಸ್ಪಂದಿಸದೆ ತಮ್ಮ ನಗರದ ಜನತೆಗೆ ಸ್ವಾರ್ಥಕ್ಕೆ ರಾಜಕೀಯ ಬೇಳೆಯನ್ನು ಬೇಯಿಸಿಕೊಂಡು ಕಾಲ ವ್ಯಯ ಮಾಡಿದರೇ ಚುನಾಯಿತಿ ಪ್ರತಿನಿಧಿಗಳ ವಿನಹ ಬಡವರಿಗೆ ಸಾಶ್ವತ ಸೂರು ಕಲ್ಪಿಸುವಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ ತಮ್ಮ ಅವಧಿಯನ್ನು ಕಳೆದರು23 ವರ್ಷಗಳಿಂದ ಕಳೆದರೂ ಕೂಡ ಪುರಸಭೆ ನಗರಸಭೆಗೆ ಇಲ್ಲಿತನಕ ಫಲಾನುಭವಿಗಳು ಪಡೆದಿರುವ ಹಕ್ಕು ಪತ್ರ ಹಕ್ಕುದಾರರಿಗೆ ಹಕ್ಕನ್ನು ಸಿಗದೇ ಇರುವ ದೊಡ್ಡ ದುರಂತ ಎಂದು ತಿಳಿಸಿದರು. ಪ್ರತಿಭಟನಾಸ್ಥಳಕ್ಕೆ ನಗರಸಭಾ ಆಯುಕ್ತೆ ಮಾನಸರವರು ಬಂದು, ಪ್ರತಿಭಟನಾಕರರ ಮನವಿಯನ್ನು ಸ್ವೀಕರಿಸಿ ಈ ಬಗ್ಗೆ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ ಮುಂದಿನ ಕ್ರಮ ವಹಿಸುತ್ತೇನೆ ಎಂದು ಭರವಸೆ ನೀಡಿದರು. ನಂತರ ಮಾತನಾಡಿ ನನಗೆ ನೀಡಿರುವ ಮನವಿಯನ್ನು ಜಿಲ್ಲಾಧಿಕಾರಿಗಳಿಗೆ ಕಳಿಸುತ್ತೇನೆ ಹಾಗೂ ನನ್ನ ಊರಿನ ಮಗಳಾಗಿದ್ದು ನನಗೂ ಕೂಡ ಇದರ ಬಗ್ಗೆ ಬಹಳಷ್ಟು ನೋವಿದೆ ಆದಷ್ಟು ಕೂಡ ನಾನು ನಿಮಗೆ ನಿವೇಶನದಲ್ಲಿ ದೊರಕಿಸಿಕೊಡಲು ನಗರಸಭೆಯಿಂದ ಎಲ್ಲಾ ರೀತಿಯ ಸಹಕಾರ ಸಂಪೂರ್ಣ ಬೆಂಬಲವಾಗಿ ನೀಡುತ್ತೇನೆ ಎಂದು ಫಲಾನುಭವಿಗಳಿಗೆ ಪ್ರತಿಭಟನೆಯಲ್ಲಿ ಭರವಸೆ ನೀಡಿದರು.

# ಗಾಂಧಿ ಹತ್ಯೆ ಮಾಡಿದ ಗೋಡ್ಸೆಯ ವೈಭವೀಕರಣ ಅಪಾಯಕಾರಿ : ನಾಯಕ




• **ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ :**

ಬ್ರಿಟಿಷ ಆಳ್ವಿಕೆಯ ಕಾಲದಲ್ಲಿಯೂ ಬದುಕಿದ್ದ ಗಾಂಧೀಜಿ ಅವರು ಸ್ವಾತಂತ್ರ್ಯ ಬಂದು 1 ವರ್ಷದಲ್ಲಿಯೇ ಗುಂಡು ಹಾರಿಸಿ ಸಾಯಿಸುತ್ತಾರೆ ಎಂದರೆ ನಮ್ಮ ಜನ ಹೇಗಿರಬಹುದು ಎಂದು ವಿದೇಶಿ ಚಿಂತಕರು ತಮ್ಮ ಅಭಿಪ್ರಾಯ ಅಂದು ವ್ಯಕ್ತಪಡಿಸಿದ್ದರು. ಇಂದು ಗಾಂಧಿ ಹತ್ಯೆ ಮಾಡಿದ ಗೋಡ್ಸೆಗೆ ದೇವಸ್ಥಾನ ಕಟ್ಟಿ ಪೂಜಿಸುವ ಮಟ್ಟಕ್ಕೆ ಬಂದಿದೆ ಎಂದರೆ ನಿಜಕ್ಕೂ ನಮ್ಮ ದೇಶ ಹೇಗೆ ಅಧಪತನದತ್ತ ಸಾಗುತ್ತಿದೆ ಎಂಬ ಚಿಂತೆ ನಮ್ಮನ್ನು ಕಾಡುವಂತಾಗಿದೆ ಎಂದು ಹಿರಿಯ ಸಾಹಿತಿ ಶಾಂತಾರಾಮ ನಾಯಕ ಹಿಚಕಡ ಹೇಳಿದರು.

ಪಟ್ಟಣದ ಸತ್ಯಾಗ್ರಹ ಸ್ಮಾರಕ ಸಭಾಭವನದಲ್ಲಿ ಮಹಾತ್ಮ ಗಾಂಧಿ ನಿಧನದ ದಿನವನ್ನು ಸೌಹಾರ್ದ ಸಂಕಲ್ಪ ದಿನದ ನಿಮಿತ್ತ ಮಹಾತ್ಮ ಗಾಂಧಿ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಅವರು ಮಾತನಾಡಿದರು. ಕೇಂದ್ರ ಸರಕಾರ ನರೇಗಾ ಹೆಸರನ್ನು ಬದಲಿಸುತ್ತಿದೆ. ಮಹಾತ್ಮಾ ಗಾಂಧಿಯ ಅವಮಾನ ಮಾಡುವ ರೀತಿಯಲ್ಲಿ ಕೆಲವರು ತೊಡಗಿಸಿಕೊಂಡಿದ್ದಾರೆ. ಮುಂದಿನ ದಿನಗಳಲ್ಲಿ ಜಾಗೃತಿ ಮುಡಿಸುವ ಕಾರ್ಯ ಮಾಡಲಾಗುವುದು ಎಂದರು. ಸಾಹಿತಿ ಮೋಹನ ಹಬ್ಬು ಮಾತನಾಡಿ, ಗಾಂಧೀಜಿ ಅವರ ಹೆಸರನ್ನು ಕೆಡಿಸುವ ಹುನ್ನಾರ ನಡೆಯುತ್ತಿದೆ. ಗಾಂಧೀಜಿ ಅವರ ತತ್ವ ವಿಚಾರಗಳನ್ನು ಅರಿಯದೇ ಯಾರು ಹೇಳಿದ ಮಾತ್ರಕ್ಕೆ ಯುವ ಜನತೆ ಕೂಡ ಬಲಿಯಾಗುತ್ತಿರುವುದು ನಿಜಕ್ಕೂ ಆಘಾತಕಾ–ರಿಯಾಗಿದೆ ಎಂದರು. ಕವಿ ಕೃಷ್ಣಾ ನಾಯಕ ಮಾತನಾಡಿ, ಸಾಮಾಜಿಕ ಜಾಲತಾಣಗಳಲ್ಲಿ ಗಾಂಧಿ ಬೇಕೆ ಅಥವಾ ಗೋಡ್ಸೆ ಬೇಕೆ ಎನ್ನುವ ಮಾಹಿತಿಯನ್ನು ಹರಿಬಿಡುತ್ತಿದ್ದಾರೆ. ಮೊದಲಿಗೆ ಬೇಕು ಬೇಡ ಎನ್ನುವುದು ದೊಡ್ಡ ತಪ್ಪು. ಹಾಗೇ ನೋಡಿದರೆ ಗೋಡ್ಸೆ ಬೇಕು ಎನ್ನುವವರ ಸಂಖ್ಯೆಯೇ ಸಾಮಾಜಿಕ ಜಾಲತಾಣದಲ್ಲಿ ಅತಿಹೆಚ್ಚು ಮೆಚ್ಚಿಗೆ ಸೂಚಿಸಿದ್ದಾರೆ. ಇಂದು ಎಲ್ಲ ಕ್ಷೇತ್ರಗಳಲ್ಲಿಯೂ ಗಾಂಧಿಯ ಅವಮಾನಿಸುವ ಕಾರ್ಯ ನಡೆ–ಯುತ್ತಿದೆ ಎಂದರು.

ಕಸಾಪ ಅಧ್ಯಕ್ಷ ಗೋಪಾಲಕೃಷ್ಣ ನಾಯಕ ಮಾತನಾಡಿ, ಪ್ರಸ್ತುತ ದಿನಮಾನದಲ್ಲಿ ಇಂತಹ ವಿಷಯಗಳ ಕುರಿತು ಮಾತನಾಡುವುದೇ ಅಪಾಯಕಾರಿ ಎನ್ನುವಂತಾಗಿದೆ ಎಂದರು. ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಶಾಂತಾರಾಮ ನಾಯಕ ಮಾತನಾಡಿ, ಹಳ್ಳಿಮಟ್ಟದಲ್ಲಿಯೂ ಕೋಮುವಾದಕ್ಕೆ ಪ್ರಚೋದನೆ ನೀಡುತ್ತಿದ್ದಾರೆ. ಜನರು ಉದ್ಯೋಗ ಬೇಕು ಎನ್ನುವುದಕ್ಕಿಂತ ಮತಾಂದರ ದಾಸರಾಗುತ್ತಿದ್ದಾರೆ. ಇದು ಮುಂದಿನ ಭವಿಷ್ಯದ ದೃಷ್ಟಿಯಿಂದಲು ಅಪಾಯವಿದೆ ಎಂದರು. ಹೋರಾಟಗಾರ್ತಿ ಯಮುನಾ ಗಾಂವಕರ ಮಾತನಾಡಿ, ಗಾಂಧೀಜಿ–ಅಂಬೇಡ್ಕರ ಅವರ ನಡುವಿನ ಅವತ್ತಿನ ಚರ್ಚೆಯನ್ನು ಇಂದು ದ್ವೇಷದ ಚರ್ಚೆಯನ್ನಾಗಿ ಬಳಸಿಕೊಳ್ಳುತ್ತಿದ್ದಾರೆ. ಅವತ್ತಿನ ಕಾಲಕ್ಕೆ ಅವರ ನಡುವೆ ಕೆಲವು ವಿಚಾರಗಳಲ್ಲಿ ಭಿನ್ನಾಭಿಪ್ರಾಯ ಇರಬಹುದು. ಆದರೆ ಅದನ್ನೇ ಇಂದು ವೈಭವೀಕರಿಸುವ ಕಾರ್ಯ ನಡೆಯುತ್ತಿದೆ. ಒಟ್ಟಿನಲ್ಲಿ ಗಾಂಧಿಯನ್ನು ತುಳಿಯುವ ಕಾರ್ಯ ನಡೆದರೆ ಇನ್ನೊಂದು ಕಡೆ ನಾವು ವಿವಿಧ ರೀತಿಯಲ್ಲಿ ಜಾಗೃತಿ ಮೂಡಿಸುವ ಕಾರ್ಯ ಮಾಡುತ್ತೇವೆ ಎಂದರು.

ಈ ಸಂದರ್ಭದಲ್ಲಿ ಸಾಹಿತಿ ಡಾ. ಆರ್.ಜಿ.ಗುಂದಿ, ಜೆ.ಪ್ರೇಮಾನಂದ, ಗೌರೀಶ ನಾಯಕ, ಜಗದೀಶ ಜಿ. ನಾಯಕ ಹೊಸ್ಕೇರಿ, ಸಂತೋಷ ನಾಯ್ಕ, ಉದಯ ನಾಯ್ಕ ಹೊಸಗದ್ದೆ, ಗೀತಾ ಗೌಡ ಶಿರೂರ, ಪೂರ್ಣಿಮಾ ನಾಯ್ಕ, ಹಟ್ಟಿಕೇರಿ, ವಿನೋದ ನಾಯ್ಕ ಹಾರವಾಡ, ಎಚ್.ಬಿ.ನಾಯಕ, ರಾಜಗೋಪಾಲ್ ಶೇಟ್ ಇತರರಿದ್ದರು.

# ಕಿಸಾನ್ ಧನ್ ನೇರ ಮಾರಾಟ ಕೇಂದ್ರ ಉದ್ಘಾಟನೆ



• **ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ:**

ಭಾರತ ಸರ್ಕಾರದ ಉಪಕ್ರಮ ನ್ಯಾಷನಲ್ ಫರ್ಟಿಲೈಸರ್ಸ್ ಲಿಮಿಟೆಡ್ (ಎನ್‌ಎಫ್‌ಎಲ್) ನೇರ ಮಾರಾಟ ಮಳಿಗೆಗಳನ್ನು "ಕಿಸಾನ್–ಧನ್" ಎಂಬ ಹೆಸರಿನ ಅಡಿಯಲ್ಲಿ ಆರಂಭಿಸಿದ್ದು, ಕರ್ನಾಟಕ ರಾಜ್ಯದಲ್ಲಿ ಮೊದಲ "ಕಿಸಾನ–ಧನ" ನೇರ ಮಾರಾಟ ಕೇಂದವನ್ನು ಬೀದರ್ ಜಿಲೆಯ ಚಿಟಗುಪ್ಪ ಪಟ್ಟಣದಲ್ಲಿ ಎನ್‌ಎಫ್‌ಎಲ್ ಸಂಸ್ಥೆಯ ವಲಯ ವ್ಯವಸ್ಥಾಪಕ ವಿನೋದಕುಮಾರ ಅವರು ಫೆಬ್ರವರಿ 27ರಂದು ವಿನೋದಕುಮಾರ, ಉದ್ಘಾಟಿಸಿ ಮಾತನಾಡಿದ ಅವರು, ಕಿಸಾನ್ ಧನ್ – ನೇರವಾಗಿ ರೈತರಿಗೆ ಎಂಬ ಧ್ಯೆಯವಾಕ್ಯದಡಿ ಆರಂಭಿಸಲಾದ ಎನ್‌ಎಫ್‌ಎಲ್ ಕೇಂದ್ರವು ರೈತರಿಗೆ ನಿಗದಿತ ಬೆಲೆಯಲ್ಲಿ ಗುಣಮಟ್ಟದ ಜೈವಿಕ ಗೊಬ್ಬರ ಮತ್ತು ಸಾವಯವ ಗೊಬ್ಬರವನ್ನು ತಲುಪಿಸುವ ಜೊತೆಗೆ ತಜ್ಞರ ಮಾರ್ಗದರ್ಶನ ಒದಗಿಸುವ ಉದ್ದೇಶ ಹೊಂದಿದೆ. ರೈತರಿಗೆ ಯೂರಿಯಾ ಗೊಬ್ಬರವನ್ನು ಎಂ.ಅರ್.ಪಿ.ಬೆಲೆಯಲ್ಲಿ ಮಾರಾಟ ಮಾಡುವ ಮೂಲಕ ಕೇಂದ್ರ–ಕ್ಕೆ ಸಾಂಕೇತಿಕವಾಗಿ ಚಾಲನೆ ನೀಡಲಾಗಿದೆ. ಎನ್‌ಎಫ್‌ಎಲ್ ರಾಜ್ಯ ವ್ಯವಸ್ಥಾಪಕ ರೇವಣಸಿದ್ದಪ್ಪ ಮತ್ತು ಅವರ ಸಹದ್ಯೋಗಿಗಳ ಶ್ರಮದಿಂದ ಸ್ಥಾಪಿತವಾದ ಈ ಕೇಂದ್ರವು ಚಿಟಗುಪ್ಪ ಹಾಗೂ ಸುತ್ತಮುತ್ತಲಿನ ಗ್ರಾಮಗಳ ರೈತರಿಗೆ ಗೊಬ್ಬರವನ್ನು ಒದಗಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಲಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಬೀದರ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ. ಉಮೇಶ ಬಾರಿಕರ್, ಮಣ್ಣು ವಿಜ್ಞಾನಿ ಡಾ. ಚಂದ್ರಕಾಂತ, ಚಿಟಗುಪ್ಪ ಕೃಷಿ ಅಧಿಕಾರಿ ಕೃಷ್ಣರೆಡ್ಡಿ, ಹುಮನಾಬಾದ ಕೃಷಿಕ ಸಮಾಜದ ಅಧ್ಯಕ್ಷ ವಿಶ್ವನಾಥ ಪಾಟೀಲ್, ಪ್ರಗತಿಪರ ರೈತ ಬಾಬುರಾವ ಗಡಾಮಿ, ಮಲ್ಲಿಕಾರ್ಜುನ ಪಾಟೀಲ್, ಮಹಮ್ಮದ್ ಇಸ್ಮಾಯಿಲ್ ರಾಥೋಡಿ, ರವಿಚಂದ್ರ ಶಿವಪೂಜಿ, ಬಾಬುರಾವ ಗುತ್ತೇದಾರ, ಚನ್ನಬಸಪ್ಪ ಪಾಟೀಲ ಹೊಸಳ್ಳಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ವಿಬಿ ಜಿ ರಾಮ್ ಜಿ ಜಾರಿ: ಎ ಐ ಕೆ ಕೆ ಎಂ ಎಸ್ ಖಂಡನೆ




• **ಮಲ್ಲಮ್ಮ ನುಡಿ ವಾರ್ತೆ ಕೂಡ್ಲಿಗಿ.( ಬಳ್ಳಾರಿ ):**

ವಿಕಸಿತ ಭಾರತ ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ (ಗ್ರಾಮೀಣ) ಮಸೂದೆ– 2025 (ವಿಬಿಜಿ ಆರ್ ಎ ಎಮ್ ಜಿ) ಕೂಡಲೇ ಹಿಂತೆಗೆದುಕೊಳ್ಳಬೇಕು ಎಂದು ಎ ಐ ಕೆ ಕೆ ಎಂ ಎಸ್ ರೈತ ಸಂಘಟನೆ ಸದಸ್ಯರು ಇಂದು ತಹಶೀಲ್ದಾರ್ ಮೂಲಕ ಪ್ರಧಾನಿಯವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಂಘದ ಜಿಲ್ಲಾ ಕಾರ್ಯದರ್ಶಿ ಗುರಳ್ಳಿ ರಾಜ ಅವರು ಮಾತನಾಡುತ್ತಾ ಗ್ರಾಮೀಣ ಜನತೆಗೆ ಉದ್ಯೋಗ ಖಾತ್ರಿಪಡಿಸುವ ಉದ್ದೇಶದಿಂದ ತಂದಿದ್ದ ಎಂಜಿ ನರೇಗಾ ಕಾಯ್ದೆಯ ಬದಲಿಗೆ 'ವಿಕಸಿತ ಭಾರತ ಉದ್ಯೋಗ ಖಾತರಿ ಮತ್ತು ಆಜೀವಿಕಾ ಮಿಷನ್ (ಗ್ರಾಮೀಣ) ಮಸೂದೆ– 2025 ಅನ್ನು ಜಾರಿಗೊಳಿಸಲು ಪ್ರಯತ್ನಿಸುತ್ತಿರುವ ಕೇಂದ್ರ ಬಿಜೆಪಿ ಸರ್ಕಾರದ ಹೀನ ಪ್ರಯತ್ನವನ್ನು ನಾವು ಉಗ್ರವಾಗಿ ಖಂಡಿಸುತ್ತೇವೆ.

ಈ ಮಸೂದೆಯು ಎಂಜಿ ನರೇಗಾ ಕಾಯ್ದೆಯನ್ನು ಮತ್ತು ಅದರಲ್ಲಿದ್ದ ಉದ್ಯೋಗದ ಶಾಸನಬದ್ಧ ಖಾತ್ರಿಯನ್ನು ತೆಗೆದುಹಾಕುವ ಪ್ರಯತ್ನವಾಗಿದೆ. ಯೋಜನೆಯ ಕುರಿತು ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ರಾಜ್ಯ ಸರ್ಕಾರಗಳ ಯಾವುದೇ ಪಾತ್ರವನ್ನು ನಿರಾಕರಿಸುತ್ತಾ, ಕೇಂದ್ರ ಸರ್ಕಾರಕ್ಕೆ ಸಂಪೂರ್ಣ ಅಧಿಕಾರ ನೀಡಿ, ಒಕ್ಕೂಟ ವ್ಯವಸ್ಥೆ ಅಡಿಪಾಯವನ್ನು ನಾಶಗೊಳಿಸುವ ಪ್ರಯತ್ನವಾಗಿದೆ. ಹಾಗೆಯೇ, ಕೇಂದ್ರ ಬಿಜೆಪಿ ಸರ್ಕಾರವು ತನ್ನ ಹಣಕಾಸಿನ ಜವಾಬ್ದಾರಿಯನ್ನು ಶೇ.60 ಕ್ಕೆ (ಹಿಂದೆ ಶೇ.100) ಇಳಿಸುವುದು ಮತ್ತು ಅದರ ಶೇ.40 ರಷ್ಟು ಹೊರೆಯನ್ನು ರಾಜ್ಯ ಸರ್ಕಾರಗಳಿಗೆ ವರ್ಗಾಯಿಸುವುದಾಗಿದೆ, ಹಾಗಾಗಿ ಇದನ್ನು ನಾವು ವಿರೋಧಿಸುತ್ತೇವೆ, ಜೊತೆಗೆ

ಜಾಬ್ ಕಾರ್ಡ್ಗಳನ್ನು ಸುಧಾರಣೆ ಮಾಡುವ ಘೋಷಣೆಯ ಮೂಲಕ ಗ್ರಾಮೀಣ ಜನರನ್ನು ಉದ್ಯೋಗದ ಹಕ್ಕಿನಿಂದ ವಂಚಿತರನ್ನಾಗಿ ಮಾಡುವುದು ಈ ಯೋಜನೆಯ ಭಾಗವಾಗಿದೆ.

ಈಗ ಗ್ರಾಮೀಣ ಬಡ ಜನತೆಗೆ ಹೆಚ್ಚು ಹೆಚ್ಚು ಉದ್ಯೋಗಗಳನ್ನು ಒದಗಿಸುವುದು ಈ ಘಳಿಗೆಯ ಅವಶ್ಯಕತೆ ಮತ್ತು ಈ ಕಾರ್ಯ ಕೇಂದ್ರ ಸರ್ಕಾರದ ಜವಾಬ್ದಾರಿ ಆಗಿರುವಾಗ, ಈ ಕೇಂದ್ರ ಬಿಜೆಪಿ ಸರ್ಕಾರ ಅದಕ್ಕೆ ಸಂಪೂರ್ಣವಾಗಿ ವಿರುದ್ಧ ಗತಿಯಲ್ಲಿ ನಡೆದಿದೆ.

ಈ ಪ್ರಸ್ತಾಪಿತ ಮಸೂದೆಯು ಗ್ರಾಮೀಣ ಬಡ ಜನತೆಯ ಬದುಕುವ ಹಕ್ಕಿನ ಮೇಲಿನ ದಾಳಿ ಆಗಿರುವುದರಿಂದ ಅದನ್ನು ತೀವ್ರವಾಗಿ ಖಂಡಿಸುತ್ತೇವೆ. ಹಾಗೆಯೇ ಪ್ರತಿ ಕುಟುಂಬಕ್ಕೆ 200 ದಿನ ಕೆಲಸ, 600 ರೂ ಕೂಲಿ ವಿತರಿಸಬೇಕು ಎಂದರು ಮತ್ತು ಕೇಂದ್ರ ಬಿಜೆಪಿ ಸರ್ಕಾರದ ಈ ಜನ ವಿರೋಧಿ, ಕಾರ್ಮಿಕ ವರ್ಗ ವಿರೋಧಿ ಪ್ರಯತ್ನವನ್ನು ಸೋಲಿಸಲು ಕೊನೆಯವರೆಗೂ ಹೋರಾಡಲು ಮುಂದೆ ಬರಬೇಕೆಂದು ದುಡಿಯುವ ಜನರಿಗೆ ಎ ಐ ಕೆ ಕೆ ಎಂ ಎಸ್ ನಾಯಕರು ಕರೆ ನೀಡಿದರು.

ಈ ಸಂದರ್ಭದಲ್ಲಿ ಸಂಘದ ಸದಸ್ಯರಾದ ಅನಿಲ್, ಗಣೇಶ್, ರಾಮಂಜಿನಿ, ರೈತರಾದ ಯಲ್ಲಮ್ಮ, ಹುಲಿಗೆಮ್ಮ, ಸುಬ್ಬಮ್ಮ, ಮಲ್ಲಯ್ಯ, ವಿರೇಶಪ್ಪ, ವಡ್ರ ಹುಲಿಗೆಮ್ಮ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಬೆಂಕಿಯ ಕೆನ್ನಾಲಿಗೆಗೆ ಬಣವೆ ಭಸ್ಮ ರೈತ ಕಂಬನಿ



• **ಮಲ್ಲಮ್ಮ ನುಡಿ ವಾರ್ತೆ ಕೂಡ್ಲಿಗಿ.( ಬಳ್ಳಾರಿ ):**

ಜಾನುವಾರುಗಳಿಗೆ ಸಂಗ್ರಹಿಸಲಿಟ್ಟ ಮೆಕ್ಕೆಜೋಳ ಬಣವೆಗೆ ಆಕಸ್ಮಿಕ ಬೆಂಕಿ ತಗುಲಿ ಸಂಪೂರ್ಣ ಸುಟ್ಟು ಭಸ್ಮವಾಗಿರುವ ಘಟನೆ ತಾಲೂಕಿನ ರಂಗನಾಥನಹಳ್ಳಿ ಗ್ರಾಮದಲ್ಲಿ ಇಂದು ನಸುಕಿನ ಜಾವ ಜರುಗಿದೆ. ತಾಲೂಕಿನ ಹೊಸಹಳ್ಳಿ ಹೋಬಳಿಯ ರಂಗನಾಥನಹಳ್ಳಿಯ ಚಿನ್ನಾಪುರದಪ್ಪರ ರಾಜಪ್ಪ ಹಾಗೂ ಭರತ್ ಎಂಬುವವರಿಗೆ ಸೇರಿದ ಮೆಕ್ಕೆಜೋಳ ಬಣವೆ ಎಂದು ತಿಳಿದಿದ್ದು ಸುಮಾರು 6 ಲೋಡಿನಷ್ಟು ಮೆಕ್ಕೆಜೋಳ ಸೊಪ್ಪೆಯನ್ನು ಜಾನುವಾರುಗಳಿಗೆ ಸಂಗ್ರಹಿಸಿಡಲಾಗಿತ್ತು ಇಂದು ನಸುಕಿನ ಜಾವ ಆಕಸ್ಮಿಕ ಬೆಂಕಿ ತಗುಲಿದ ಪರಿಣಾಮ ಬೆಂಕಿಯ ಕೆನ್ನಾಲಿಗೆಗೆ ಬಣವೆ ಸಂಪೂರ್ಣ ಸುಟ್ಟು ಭಸ್ಮವಾಗಿದ್ದು ಸುಮಾರು 50 ಸಾವಿರ ರೂ ನಷ್ಟು ನಷ್ಟವಾಗಿದೆ ಎಂದು ತಿಳಿದಿದೆ.

ಸುದ್ದಿ ತಿಳಿದ ಕೂಡ್ಲಿಗಿ ಅಗ್ನಿಶಾಮಕದಳ ಘಟನಾ ಸ್ಥಳಕ್ಕೆ ಧಾವಿಸಿದ್ದರಿಂದ ಅಲ್ಲೇ ಅಕ್ಕ ಪಕ್ಕದಲ್ಲಿದ್ದ ಮನೆಗಳು ಬೆಂಕಿ ಅನಾಹುತದಿಂದ ತಪ್ಪಿಸಿದಂತಾಗಿದೆ ಎಂದು ಸ್ಥಳೀಯರು ತಿಳಿಸಿದ್ದು ಅಗ್ನಿಶಾಮಕದಳದ ಠಾಣಾಧಿಕಾರಿ ಶರಣಬಸವರೆಡ್ಡಿ, ಚಾಲಕ ಹರಿಕೃಷ್ಣ ಹಾಗೂ ಅಗ್ನಿಶಾಮಕರಾದ ರವಿಕುಮಾರ್, ಶಿವಶಂಕರ ಮತ್ತು ರಮೇಶ ನಾವಿ ಇವರುಗಳು ಬೆಂಕಿ ಆರಿಸಿ ಹೆಚ್ಚಿನ ಅನಾಹುತ ತಪ್ಪಿಸುವಲ್ಲಿ ಸ್ಥಳೀಯರೊಂದಿಗೆ ಯಶಸ್ವಿಯಾಗಿದ್ದಾರೆ.

# ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಮಂಜೂರಾತಿ ಪತ್ರ



**ಮಲ್ಲಮ್ಮ ನುಡಿ ವಾರ್ತೆ ಕಮಲನಗರ:**

ತಾಲೂಕಿನ ಮದನೂರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮದನೂರ ಹಾಗೂ ಖತಗಾಂವ ಗ್ರಾಮಗಳ ಅರ್ಹ ಫಲಾನುಭವಿಗಳಿಗೆ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಆಯ್ಕೆ ಮಾಡಲಾದ ಫಲಾನುಭವಿಗಳಿಗೆ ಮಂಜೂರಾತಿ ಪತ್ರ ವಿತರಣೆ ಕಾರ್ಯಕ್ರಮವನ್ನು ಇಂದು ಶನಿವಾರ ಗ್ರಾಮ ಪಂಚಾಯಿತಿ ಕಟ್ಟಡದಲ್ಲಿ ಆಯೋಜಿಸಲಾಗಿದೆ ಎಂದು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರಂಗಾಚಾರಿ ನರೋಜ ತಿಳಿಸಿದ್ದಾರೆ.

2024–25 ಸಾಲಿನಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ, ನಮ್ಮ ಗ್ರಾಮ ಪಂಚಾಯತನ ಒಟ್ಟು 239 ಅರ್ಹ ಫಲಾನುಭವಿಗಳಿಗೆ ಇದರ ಲಾಭ ಸಿಗವಂತೆ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ.

ಈ ಸಂಬಂಧ 187 ಫಲಾನುಭವಿಗಳಿಗೆ ಶನಿವಾರ ಮಂಜೂರಾತಿ ಪತ್ರ ನೀಡವು ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಗಲಿದೆ. ಉಳಿದ ಮನೆಗಳು ಅರ್ಹ ಫಲಾನುಭವಿಗಳಿಗೆ ನೀಡಲಾಗುವುದು ಎಂದು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಪೂಜಾ ಗುಂಡಪ್ಪಾ ಬೇಲ್ಲೆ ಹೇಳಿದರು.

ಕಾರ್ಯಕ್ರಮವು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಪೂಜಾ ಗುಂಡಪ್ಪಾ ಬೇಲ್ಲೆ ಹಾಗೂ ಎಲ್ಲಾ ಸದಸ್ಯರ ನೇತೃತ್ವದಲ್ಲಿ ನಡೆಯಲಿದ್ದು, ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳಿಗೆ ಅಧಿಕೃತವಾಗಿ ಮಂಜೂರಾತಿ ಪತ್ರಗಳನ್ನು ಹಸ್ತಾಂತರಿಸಲಾಗುವುದು.

ಪ್ರಧಾನ ಮಂತ್ರಿ ಆವಾಸ್ ಯೋಜನೆಯು ಬಡ ಹಾಗೂ ವಸತಿ ರಹಿತ ಕುಟುಂಬಗಳಿಗೆ ಸ್ವಂತ ಮನೆ ಹೊಂದುವ ಕನಸನ್ನು ನನಸು ಮಾಡುವ ಉದ್ದೇಶ ಹೊಂದಿದ್ದು,

ಈ ಯೋಜನೆಯ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳುವಂತೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಅವರು ಫಲಾನುಭವಿಗಳಿಗೆ ಮನವಿ ಮಾಡಿದ್ದಾರೆ.

# ರಾಜ್ಯದಲ್ಲಿಯೇ ಕಸಾಪಗೆ ಹೆಚ್ಚು ದತ್ತಿ ನಿಧಿಯ ಖ್ಯಾತಿ ಜಿಲ್ಲೆಯದು: ಚೋರನೂರು ಕೊಟ್ರಪ್ಪ

• **ಮಲ್ಲಮ್ಮ ನುಡಿ ವಾರ್ತೆ ಕೂಡ್ಲಿಗಿ.( ಬಳ್ಳಾರಿ ):**




ಕನ್ನಡ ಭಾಷೆಯ ಸಂರಕ್ಷಣೆ, ಅಭಿವೃದ್ಧಿ, ಸಾಹಿತ್ಯ, ವಿಮರ್ಶೆ ಮೊದಲಾದ ಆಧ್ಯತೆಗಳೊಂದಿಗೆ ಸ್ಥಾಪನೆಗೊಂಡ ಕನ್ನಡ ಸಾಹಿತ್ಯ ಪರಿಷತ್ ನಿಂದ ನಡೆಯುವ ಉಪನ್ಯಾಸಗಳಿಗೆ ಅತಿಹೆಚ್ಚುದತ್ತಿ ನೀಡಿರುವ ಕೊಡುಗೆ ಬಳ್ಳಾರಿಯದು ಎಂದು ವೀರಶೈವ ವಿದ್ಯಾವರ್ಧಕ ಸಂಘದ ಮಾಜಿ ಕಾರ್ಯದರ್ಶಿ ಚೋರನೂರು ಟಿ.ಕೊಟ್ರಪ್ಪ ಹೇಳಿದರು.

ನಗರದ ಹೀರದ ಸೂಗಮ್ಮ ಶಾಲೆಯಲ್ಲಿ ಇಂದು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕ ಹಮ್ಮಿಕೊಂಡಿದ್ದ ಚೋರನೂರು ಡಾ.ಟಿ.ಕೆ.ಬಸವರಾಜಪ್ಪ, ಸಿರಿಗೇರಿ ಬಸವರಾಜ್, ಪಟೇಲ್ ಬಸವರಾಜ್, ಸ್ಮಾರಕ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು.

ಬೇರೆ ಭಾಷೆ ಕಲಿಯುವ ಅಗತ್ಯತೆ ಇದೆ. ಜೊತೆಗೆ ಕನ್ನಡದ ಬಗ್ಗೆ ಅಭಿಮಾನ ಇಟ್ಟು ಕೊಳ್ಳಬೇಕು. ಎಂದಿಗೂ ಕನ್ನಡವನ್ನು ಮರೆಯಬಾರದು. ನಮ್ಮ ನೋವು ನಲಿವು, ಕನಸು ಸಹ ಕನ್ನಡಲ್ಲಿದ್ದಾಗ ಅದು ನಿತ್ಯವಾಗಿರುತ್ತದೆಂದರು.

ಕಾರ್ಯಕ್ರಮ ಉದ್ಘಾಟನೆ ಮಾಡಿದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಅಧ್ಯಕ್ಷ ಎನ್.ವೀರಭದ್ರಗೌಡ ಅವರು "ನಾನೊಬ್ಬ ನಿದ್ರೆ ಮಾಡಿದರೆ ಅದು ನನ್ನಬ್ಬೊನ ಹಿತಕ್ಕೆ. ನಾನೊಬ್ಬ ಎಚ್ಚೆತ್ತು ದುಡಿದರೆ ಅದು ದೇಶಕ್ಕೆ ಹಿತ" ಎಂಬ ಮಾತಿನಂತೆ ಶಾಲಾ ಮಕ್ಕಳು ತಮ್ಮ ಜೀವನ ರೂಪಿಸಿಕೊಳ್ಳಬೇಕು.

ಅದಕ್ಕೆ ಮಕ್ಕಳು ರೀಲ್ಸ್ ನೋಡುವುದನ್ನು ಬಿಟ್ಟು, ನ್ಯೂಸ್ ನೋಡಿ. ಅದರಲ್ಲಿನ ಪ್ರಮುಖ ಘಟನಾವಳಿಗಳನ್ನು ನೋಟ್ ಮಾಡಿ ಮನನ ಮಾಡುತ್ತಿದ್ದರೆ ಅದು ಸ್ಪರ್ಧಾ ಪರೀಕ್ಷೆಗಳಿಗೆ ಸಹಕಾರಿಯಾಗುತ್ತೆ ಎಂದರು.

ನೈತಿಕಶಿಕ್ಷಣದಲ್ಲಿ ಮಾತೃಭಾಷೆಯ ಮಹತ್ವಕುರಿತು ಉಪನ್ಯಾಸ ನೀಡಿದ. ನಿವೃತ್ತ ಮುಖ್ಯೋಪಾಧ್ಯಾಯ ಮೆಹತಾಬ್ ಅವರು, ನಮ್ಮದು ತ್ರಿಭಾಷಾ ಸೂತ್ರದ ದೇಶವಾದರೂ, ಆಂಗ್ಲ ಭಾಷೆಯಲ್ಲಿ ಭಾವನಗೆ ಹೆಚ್ಚು ಅವಕಾಶ ಇಲ್ಲ. ಆದರೆ ಮಾತೃಭಾಷೆ ಕನ್ನಡದಲ್ಲಿ ಭಾವನೆಗಳ ಶಬ್ದಗಳ ಬಂಡಾರವೇ ಇದೆ. ಮಾತೃಭಾಷೆ ಮನಕ್ಕೆ ಹತ್ತಿರವಾಗಿ ಗ್ರಹಿಕೆಗೆ ಸಹಕಾರಿಯಾಗಲಿದೆ. ಹಾಗಾಗಿ ನೈತಿಕತೆಯನ್ನು ನಮ್ಮಲ್ಲಿ ಅಳವಡಿಸಿಕೊಳ್ಳಲು ನಮ್ಮ ಭಾಷೆಯಲ್ಲಿ ಹೇಳಿದರೆ ಅದು ನಮಗೆ ಹೆಚ್ಚು ಹೆಚ್ಚು ಆಸಕ್ತಿದಾಯಕವಾಗಿರುತ್ತದೆ. ಮುಖ್ಯವಾಗಿ ನೈತಿಕ ಶಿಕ್ಷಣ ಮನೆಯಿಂದಲೇ ಪ್ರಾರಂಭವಾಗಬೇಕು ಎಂದರು.

ಕಸಾಪದ ಜಿಲ್ಲಾ ಅಧ್ಯಕ್ಷ ಡಾ.ನಿಷ್ಠಿ ರುದ್ರಪ್ಪ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ದತ್ತಿ ಉಪನ್ಯಾಸದ ಕುರಿತು ವಿವರಿಸಿದರು.

ಶಾಲೆಯ ಆಡಳಿತ ಮಂಡಳಿಯ ಅಧ್ಯಕ್ಷ ಯಾಳ್ಪಿಮೇಟಿ ಪಂಪನಗೌಡ ಅಧ್ಯಕ್ಷತೆವಹಿಸಿದ್ದರು. ಆಡಳಿತ ಮಂಡಳಿಯ ಸದಸ್ಯ ಟೆಂಗಿನಕಾಯಿ ಮಂಜುನಾಥ. ಡಾ.ಬಸವರಾಜ್ ಗದಗಿನ, ಕಣೇಕಲ್ ಎರ್ರಿಸ್ವಾಮಿ, ಕಾಶಿನಾಥ, ಕಸಾಪ ನಗರ ಅಧ್ಯಕ್ಷ ಎರ್ರಿಸ್ವಾಮಿ, ಶಾಲೆಯ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಮುಖ್ಯ ಗುರು ಎಸ್.ಎಂ.ಶಿವಶರಣಯ್ಯ, ಶರಣ ಸಕ್ಕರೆ ಕರಡೀಶ ಶಾಲೆಯ ಮುಖ್ಯ ಗುರು ಖಾದರ್ ಬೀ ಶಾಲೆಯ ಮುಖ್ಯೋಪಾದ್ಯಾಯ ಅಕ್ಕಿ ಮರಿಸ್ವಾಮಿ ಸ್ವಾಗತ, ಶಿಕ್ಷಕಿ ಎಲ್.ಜಯಂತಿ ಕಾರ್ಯಕ್ರಮ ನಿರೂಪಿಸಿದರು.

# ನಾಡಿದ್ದು ತೇರು ಎಸ್ಪಿ ಪರಿಶೀಲನೆ



• **ಮಲ್ಲಮ್ಮ ನುಡಿ ವಾರ್ತೆ ಕೂಡ್ಲಿಗಿ.( ಬಳ್ಳಾರಿ ):**

ನಗರದ ಆರಾಧ್ಯ ದೈವ ಕೋಟೆ ಮಲ್ಲೇಶ್ವರ ಸ್ವಾಮಿಯ ರಥೋತ್ಸವ ನಾಡಿದ್ದು ಫೆ. 1 ರಂದು ನಡೆಯಲಿದ್ದು. ತೇರು ಬೀದಿಯಲ್ಲಿರುವ ರಥ ನಿರ್ಮಾಣವಾಗಿರುವುದನ್ನು ನಿನ್ನೆ ಸಂಜೆ ಎಸ್ಪಿ ಡಾ.ಸುಮನ್ ಡಿ.ಪೆನ್ನೇಕರ್ ಪರಿಶೀಲನೆ ನಡೆಸಿದರು.

ತೇರು ನಿಂತಿರುವ ಸ್ಥಳದಿಂದ ಎಲ್ಲಿಯವರೆಗೆ ಎಳೆಯುತ್ತದೆ. ತೇ–ೕರು ತೆರಳುವ ರಸ್ತೆ ದುರಸ್ಥಿ ಮಾಡಲಾಗಿದೆಯಾ, ಎಷ್ಟು ಜನ ಸೇರುತ್ತಾರೆ. ಜನರ ನಿಯಂತ್ರಣಕ್ಕೆ ಬಂದೋಬಸ್ತು ಹೇಗೆ ಮಾಡುತ್ತಿದೆ ಎಂಬುದನ್ನು ನಗರ ಡಿವೈಎಸ್ಪಿ ಚಂದ್ರಕಾಂತ್ ನಂದಾರೆಡ್ಡಿ ಮತ್ತವರ ಸಿಬ್ಬಂದಿಯೊಂದಿಗೆ ಚರ್ಚಿಸಿ ಮಾಹಿತಿ ಪಡೆದರು.

ಈ ವೇಳೆ ರತೋತ್ಸವದಲ್ಲಿ ಪ್ರತಿ ವರ್ಷ ತೊಡಗಿಕೊಳ್ಳುವ ಕರ್ನಾಟಕ ಯುವಕ ಸಂಘದ ಅಧ್ಯಕ್ಷ ಜಿ.ಬಸವರಾಜ್ ಮೊದಲಾದವರು ಈ ಹಿಂದಿನ ವ್ಯವಸ್ಥೆ ಕುರಿತು ಮಾಹಿತಿ ನೀಡಿ. ಬೆಳಿಗ್ಗೆ 11.15 ಕ್ಕೆ ಮಡಿತೇರು, ಬ್ರಹ್ಮರತೋತ್ಸವ ಸಂಜೆ 4 ಗಂಟೆಗೆ ನಡೆಯಲಿದೆಂದು ತಿಳಿಸಿದರು.

# ಕುಷ್ಠ ರೋಗ ಮುಕ್ತ ಜಿಲ್ಲೆಯನ್ನಾಗಿಸಲು ಎಲ್ಲರೂ ಕೈಜೋಡಿಸಿ-ರಾಜಶೇಖರ ಪಾಟೀಲ



• **ಮಲ್ಲಮ್ಮ ನುಡಿ ವಾರ್ತೆ ಬೀದರ:**

ಕುಷ್ಠರೋಗವು ಒಂದು ಸಾಂಕ್ರಾಮಿಕ ರೋಗ, ಇದು ಯಾವುದೇ ಶಾಪ ಪಾಪ ದಿಂದ ಬರುವುದಿಲ್ಲ ಆದ್ದರಿಂದ ಸಾರ್ವಜನಿಕರು ಆರೋಗ್ಯ ಇಲಾಖೆಯೊಂದಿಗೆ ಕೈಜೋಡಿಸಿದಾಗ ಮಾತ್ರ ಬೀದರ ಜಿಲ್ಲೆಯು ಕುಷ್ಠರೋಗ ಮುಕ್ತ ಜಿಲ್ಲೆ ಮಾಡಬಹುದು ಎಂದು ಬೀದರನ ಡಿವಿಬಿಡಿಸಿಓ ಅಧಿಕಾರಿ ಡಾ.ರಾಜಶೇಖರ ಪಾಟೀಲ ಹೇಳಿದರು.

ಅವರು ಶುಕ್ರವಾರ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 'ಹುತಾತ್ಮದಿನ' ನಿಮಿತ್ಯ ಸ್ಪರ್ಶ್ ಕುಷ್ಠರೋಗ ಅರಿವು ಆಂದೋಲನ–2026ರ "ತಾರತಮ್ಯವನ್ನು ಕೊನೆಗೊಳಿಸುವುದು, ಘನತೆಯನ್ನು ಖಚಿತ ಪಡಿಸುವುದು" ಎಂಬ ಘೋಷಣೆಯೊಂದಿಗೆ "ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯದಿಂದ ಹಮ್ಮಿಕೊಂಡಿದ್ದ ಅರಿವು ಅಭಿಯಾನದ ರ್‍ಯಾಲಿಗೆ ಚಾಲನೆ ನೀಡಿ ಮಾತನಾಡಿದರು.

ಕುಷ್ಠರೋಗವು ಒಂದು ಸಾಂಕ್ರಮಿಕ ರೋಗವಾಗಿದ್ದು ಇದು ಮುಖ್ಯವಾಗಿ ಚರ್ಮ ಹಾಗೂ ನರಕ್ಕೆ ಸಂಭಂಧಪಟ್ಟಿದ್ದು ದೇಹದ ಮೇಲೆ ಯಾವುದೇ ತರಹದ ಮಚ್ಚೆಗಳು ಇದಲ್ಲಿ ತಮ್ಮ ಸಮೀಪದ ಪ್ರಾಥಮೀಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ರೋಗ ಕಂಡು ಬಂದಲ್ಲಿ ಇದನ್ನು ಬಹುಔಷದಿ ಚಿಕಿತ್ಸೆಯಿಂದ ಗುಣಪಡಿಸಬಹುದು ಇದಕ್ಕೆ ಯಾವುದೇ ರೀತಿಯ ಹೆದರುವಂತಹ ಅಗತ್ಯವಿಲ್ಲಾ ಎಂದರು.

ಡಾ.ಶಂಕ್ರೆಪ್ಪಾ ಬೊಮಾ ಮಾತನಾಡಿ, ಇಂದು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 'ಹುತಾತ್ಮದಿನ' ಈ ದಿನ ರಾಷ್ಟೀಯ ಕುಷ್ಠರೋಗ ದಿನವೆಂದು ಆಚರಿಸುತ್ತಿರುವುದು, ಜಿಲ್ಲೆಯಲ್ಲಿ ಕುಷ್ಟರೋಗದ ಚಿಕಿತ್ಸೆ ಪಡೆಯುತ್ತಿರುವರ ಸಂಖ್ಯೆ 64 ಯಾಗಿದ್ದು ಈ ವರ್ಷ 51 ಹೊಸ ಪ್ರಕರಣಗಳು ಪತ್ತೆ ಹಚ್ಚಿ ಚಿಕಿತ್ಸೆ ನಿಡಲಾಗುತ್ತಿದೆ. ಸ್ಪರ್ಶ್ ಕುಷ್ಠರೋಗ ಜಾಗೃತಿ ಪಾಕ್ಷಿಕ ಅಭಿಯಾನವನ್ನು ಜ.30 ರಿಂದ ಫೆ.13 ರವರೆಗೆ ಜಿಲ್ಲೆಯಾಧ್ಯಂತ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕಾಗಿ ಬನ್ನಿರಿ ಎಲ್ಲರು ಭಾರತವನ್ನು ಕುಷ್ಠರೋಗ ಮುಕ್ತ ಮಾಡಲು ಪ್ರತಿಜ್ಞಾ ಮಾಡೋಣ ಎಂದು ಕರೆಕೊಟ್ಟರು.

ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಸಂಗಪ್ಪ ಕಾಂಬ್ಳೆ ಅವರು ಎಲ್ಲಾ ನರ್ಸಿಂಗ ವಿದ್ಯಾರ್ಥಿಗಳಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ಪ್ರತಿಜ್ಞೆ ಮಾಡಿದರು.

ಈ ಸಂದರ್ಭದಲ್ಲಿ ತಾಲೂಕಾ ಅರೋಗ್ಯ ಅಧಿಕಾರಿ ಡಾ.ಸಂಗಾರಡ್ಡಿ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ವೀರಶೆಟ್ಟಿ ಚನ್ನಶೆಟ್ಟಿ, ಮೇಲ್ವಿಚಾರಕರಾದ ಆರೋಗ್ಯ ಶಿಕ್ಷಣಾಧಿಕಾರಿ ಓಂಕಾರ ಮಲ್ಲಿಗೆ ಸೇರಿದಂತೆ ಸಿಬ್ಬಂದಿಗಳು, ನರ್ಸಿಂಗ್ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಸಿಮಪ್ಪಾ ಆಪ್ತ ಸಮಾಲೋಚಕರು, ಮಾನಸಿಕ ವಿಭಾಗ ಇವರು ನಡೆಸಿಕೊಟ್ಟರು.

# ಹಳೆ ಮುದ್ದಾಪುರ ಗ್ರಾಮದಲ್ಲಿ ಕೆಪಿಎಸ್ ಮ್ಯಾಗ್ನೆಟ್ ಯೋಜನೆ ವಿರುದ್ಧ ಪ್ರತಿಭಟನೆ




• **ಮಲ್ಲಮ್ಮ ನುಡಿ ವಾರ್ತೆ ಕೂಡ್ಲಿಗಿ.( ಬಳ್ಳಾರಿ ):**

ಎಐಡಿಎ ನೇತೃತ್ವದಲ್ಲಿ ಸಂಡೂರು ತಾಲೂಕಿನ ಹಳೆ ಮಾದಾಪುರ ಸರ್ಕಾರಿ ಉರ್ದು ಪ್ರಾಥಮಿಕ ಶಾಲೆಯಲ್ಲಿ ಗ್ರಾಮಸ್ಥರು, ಪಾಲಕರು ಹಾಗೂ ವಿದ್ಯಾರ್ಥಿಗಳು ಸೇರಿ ಇದೇ ನಮ್ಮ ಗ್ರಾಮದಲ್ಲಿ ಎಂಟನೇ ತರಗತಿವರೆಗೂ ಶಾಲೆ ಪ್ರಾರಂಭವಾಗಬೇಕು ಎಂದು ಬೇಡಿಕೆಯನ್ನು ಇಟ್ಟುಕೊಂಡು ಜೊತೆಗೆ ರಾಜ್ಯ ಸರ್ಕಾರದ ಕೆ ಪಿ ಎಸ್ ಮ್ಯಾಗ್ನೆಟ್ ಯೋಜನೆಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಎಐಡಿಎ ಜಿಲ್ಲಾ ಕಾರ್ಯದರ್ಶಿ ಕಂಬಳಿ ಮಂಜುನಾಥ ಮಾತನಾಡಿ, ರಾಜ್ಯ ಸರ್ಕಾರವು ಬಿಡುಗಡೆ ಮಾಡಿರುವ ಆದೇಶ ಗಳ ಪ್ರಕಾರ ರಾಜ್ಯಾದಂತ 5900 ಗ್ರಾಮ ಪಂಚಾಯಿತಿಗಳ ಸರ್ಕಾರಿ ಶಾಲೆಗಳನ್ನು ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳಾಗಿ ಪರಿವ ರ್ತಿಸಲು ಸರ್ಕಾರವು ನಿರ್ಧರಿಸಿದೆ. ಈ ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳ ಐದು ಕಿಲೋಮೀಟರ್‌ವ್ಯಾಪ್ತಿಯಲ್ಲಿ ಉಳಿದ ಸರ್ಕಾರಿ ಶಾಲೆಗಳನ್ನು ಕೊಲ್ಲುವ ಹುನ್ನಾರ ಇದಾಗಿದೆ ಎಂದರು.

ಈ ಕೂಡಲೇ ರಾಜ್ಯ ಸರ್ಕಾರ ಎಚ್ಚೆತ್ತು ಕೊಂಡು ಕೆಪಿಎಸ್ ಮ್ಯಾಗ್ನೆಟ್ ಯೋಜನೆ ಅಡಿಯಲ್ಲಿ ಸರ್ಕಾರಿ ಶಾಲೆಗಳ ಮುಚ್ಚು ವುದು ಕೈಬಿಡಬೇಕೆಂದು ಅವರು ಆಗ್ರಹಿಸಿ ದರು. ಪ್ರತಿಭಟನೆಯಲ್ಲಿ ಎಐಡಿಎ ಜಿಲ್ಲಾ ಅಧ್ಯಕ್ಷರಾದ ಕೆ ಈರಣ್ಣ, ಜಿಲ್ಲಾ ಉಪಾಧ್ಯಕ್ಷರಾದ ಶಾಂತಿ, ಹಳ್ಳಿಯ ಗ್ರಾಮಸ್ಥರಾದ ಕೆ ಎಸ್ ವೆಂಕಟೇಶ್, ಸುನಿಲ್, ವೆಂಕಟೇಶ್, ಸೆಕ್ಷಾ ವಲಿ, ವೀರೇಶ್, ಪಾಲ್ಗೊಂಡಿದ್ದರು.

# ಶೋಭಾ ಬಾಟಿ ರವರಿಗೆ ರಾಷ್ಟೀಯ ಜ್ಞಾನಸಿರಿ ಪ್ರಶಸ್ತಿ

• **ಮಲ್ಲಮ್ಮ ನುಡಿ ವಾರ್ತೆ ಕೊಲ್ಹಾರ:**




ವಿಜಯಪುರ ನಗರದಲ್ಲಿ ಬುಧವಾರ ಶ್ರೀ ಸಿದ್ದೇಶ್ವರ ಕೋಚಿಂಗ್ ಕ್ಲಾಸಸ್ ವಿಜಯಪುರ ಹಾಗೂ ಕರ್ನಾಟಕ ನಾಡ ರಕ್ಷಣಾ ವೇದಿಕೆ ವಿಜಯಪುರ ನೀಡುವ ರಾಷ್ಟೀಯ ಜ್ಞಾನಸಿರಿ ಪ್ರಶಸ್ತಿಯನ್ನು ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಗುರುತಿಸಿ ಶಿಕ್ಷಕಿ ಶೋಭಾ ಮ ಬಾಟಿ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಅಭಿನವ ಸಂಗನಬಸವ ಶ್ರೀಗಳು, ಸುರೇಶ ಜತ್ತಿ ಲಕ್ಷ್ಮಣ ಹಗೆದಾಳ, ಮಹೇಶ ಗಿಡ್ಡಪ್ಪಗೋಳ, ಶಿವಾನಂದ ಭಜಂತ್ರಿ, ಗೀತಾ ಕುಲಕರ್ಣಿ, ಬಿ ಸಿ ಹೀರೆಮಠ, ರುದ್ರಮ್ಮ ಗಿಡ್ಡಪ್ಪಗೋಳ ಭಾಗವಹಿಸಿದ್ದರು.

# ಮಡಿವಾಳ ಮಾಚಿದೇವ ಜಯಂತಿ ಆಚರಣೆ

ಕಲಬುರಗಿ: ಕಲಬುರಗಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರಪಾಲಿಕೆ ಹಾಗೂ ಜಿಲ್ಲಾ ಪಂಚಾಯತ್ ಇವುಗಳ ಸಂಯುಕ್ತಾಶ್ರಯದಲ್ಲಿ ಶ್ರೀ ಮಡಿವಾಳ ಮಾಚಿದೇವ ಜಯಂತಿ ಆಚರಣೆ ಕಾರ್ಯಕ್ರಮವನ್ನು ಫೆಬ್ರವರಿ 1 ರಂದು ಭಾನುವಾರ ಮಧ್ಯಾಹ್ನ 1 ಗಂಟೆಗೆ ಕಲಬುರಗಿಯ ಡಾ. ಎಸ್. ಎಂ. ಪಂಡಿತ ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

### ಶ್ರೀಜಿತ್ ಶಾಲೆಯ ವಾರ್ಷಿಕೋತ್ಸವ: ಪ್ರತಿಭಾ ಪುರಸ್ಕಾರ

# ದೊಡ್ಡವರಾಗಲು ದೊಡ್ಡತನ ಇರಬೇಕು: ಡಿಸಿ ಸಂಗಪ್ಪ




• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಯಾವುದೇ ವ್ಯಕ್ತಿ ಸಮಾಜದಲ್ಲಿ ದೊಡ್ಡವನಾಗಿ ಬೆಳೆಯಲು ಅಥವಾ ಸಾಧನೆ ಮಾಡಲು ಅವನಲ್ಲಿ ದೊಡ್ಡತನದ ಮನಸ್ಸು ಇರಬೇಕು. ಜತೆಗೆ ಕಠಿಣ ಪರಿಶ್ರಮಪಡಬೇಕು ಎಂದು ಜಿಲ್ಲಾಧಿಕಾರಿ ಸಂಗಪ್ಪ ಹೇಳಿದರು.

ನವನಗರದ ಯೂನಿಟ್–2ರಲ್ಲಿರುವ ಹೊಳೆಹುಚ್ಚೇಶ್ವರ ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಶ್ರೀಜಿತ್ ಇಂಟರ್ನ್ಯಾಶನಲ್ ಸ್ಕೂಲ್ ಕಲಾಂಜಲಿ ವಾರ್ಷಿಕೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಶ್ರಮವಿಲ್ಲದೇ ಸಾಧನೆ ಸಾಧ್ಯವಿಲ್ಲ. ಪಾಲಕರು, ಮಕ್ಕಳೊಂದಿಗೆ ಸ್ನೇಹಮಯಿಯಾಗಿರಬೇಕು. ಆಗ ಅವರ ಕಷ್ಟ–ನೋವುಗಳನ್ನು ಪಾಲಕರೊಂದಿಗೆ ಹಂಚಿಕೊಳ್ಳುತ್ತಾರೆ. ಅವರೊಂದಿಗೆ ಶಿಸ್ತಿನೊಂದು ಸ್ನೇಹಪರವಾಗಿದ್ದರೆ ಮಕ್ಕಳ ಮನಸ್ಸು ಅರಿಯಲೂ ಸಹಕಾರಿಯಾಗುತ್ತದೆ ಎಂದರು.

ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆ ಉತ್ತಮ ಮೌಲ್ಯ ಕಲಿಸಬೇಕು. ಕಲೆ, ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಉತ್ತೇಜನ ನೀಡಬೇಕು. ಸರ್ಕಾರಿ ಶಾಲೆಗಳಲ್ಲಿ ನಲಿ–ಕಲಿ ಎಂಬ ಕಾರ್ಯಕ್ರಮವಿದ್ದು, ಇದನ್ನು ಖಾಸಗಿ ಶಾಲೆಗಳೂ ಅಳವಡಿಸಿಕೊಳ್ಳಬೇಕು ಎಂದು ಹೇಳಿದ ಜಿಲ್ಲಾಧಿಕಾರಿ ಸಂಗಪ್ಪ, ಮಕ್ಕಳು ತಮಗೆ ಯಾವುದೇ ಕಷ್ಟ ಬಂದರೂ ಎದೆಗುಂದದೆ ಎದುರಿಸಬೇಕು, ಮೊಬೈಲ್ ನಿಂದ ದೂರ ಇರಬೇಕು ಎಂದು ಹೇಳಿದರು.

ಯುವ ಮುಖಂಡ ಹೊಳಬಸು ಶೆಟ್ಟರ ಚಿಕ್ಕ ವಯಸ್ಸಿನಲ್ಲಿಯೇ ಅದ್ಭುತ ಸಾಧನೆ ಮಾಡಿದ್ದಾರೆ. ಅದರಲ್ಲೂ ಶಿಕ್ಷಣ ಕ್ಷೇತ್ರದಲ್ಲಿ ಸಂಸ್ಥೆ ಕಟ್ಟಿ ಬೆಳೆಸುತ್ತಿರುವುದು ಶ್ಲಾಘನೀಯ ಕಾರ್ಯ. ಸಂಸ್ಥೆ ಸ್ಥಾಪನೆ ಸುಲಭ, ಅದನ್ನು ಅತ್ಯಂತ ಶಿಸ್ತುಬದ್ಧ ಹಾಗೂ ಕಾರ್ಯಯೋಚಿತವಾಗಿ ಬೆಳೆಸುವುದು ಕಷ್ಟಕರ. ಅದನ್ನು ಹೊಳಬಸು ಅವರು ಸುಂದರವಾಗಿ ಮಾಡಿದ್ದಾರೆ ಎಂದು ಶ್ಲಾಘಿಸಿದರು.

ಖ್ಯಾತ ವೈದ್ಯ ಡಾ.ಸುಭಾಸ ಪಾಟೀಲ ಮಾತನಾಡಿ, ಮಕ್ಕಳಿಗೆ ಶಾಲಾ ಹಂತ ಅತ್ಯಂತ ಪ್ರಮುಖ ಘಟ್ಟ, ಅಂಕ ಮುಖ್ಯವಲ್ಲ. ಜೀವನದಲ್ಲಿ ಅಂತಿಮ ಗುರಿ ಮುಖ್ಯ. ಶಿಸ್ತು, ಗೌರವದೊಂದಿಗೆ ಯಶಸ್ಸಿನ ಸೂತ್ರಧಾರಿಗಳಾಗಬೇಕು. ದೊಡ್ಡ ಕನಸು ಕಂಡು ಅದರ ಸಾಕಾರಕ್ಕೆ ಪ್ರಯತ್ನಿಸಬೇಕು. ಸೋಲಿಗೆ ಭಯಪಡಬಾರದು. ಸೋಲು, ಜೀವನದಲ್ಲಿ ಬರುವ ಒಂದು ಪಾಠ ಎಂದು ಪರಿಗಣಿಸಬೇಕು ಎಂದು ಹೇಳಿದರು.

ಗಾಯತ್ರಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ರವೀಂದ್ರ ಕಲಬುರ್ಗಿ ಮಾತನಾಡಿ, ಸಂಸ್ಥೆಯ ಸಂಸ್ಥಾಪಕ ಹೊಳಬಸು ಶೆಟ್ಟರ ಶ್ರಮವಹಿಸಿ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ನಿಷ್ಠೆಯಿಂದ ಬೆಳೆಸಿದ್ದಾರೆ. ಅವರ ಶಿಕ್ಷಣ ಸಂಸ್ಥೆಗಳು ಇನ್ನಷ್ಟು ಬೆಳೆಯಲಿ ಎಂದು ಹಾರೈಸಿದರು.

ಹೊಳೆಹುಚ್ಚೇಶ್ವರ ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಹೊಳಬಸು ಶೆಟ್ಟರ ಅಧ್ಯಕ್ಷತೆ ವಹಿಸಿದ್ದರು. ಕಾಂಗ್ರೆಸ್ ಮುಖಂಡ ಮಲ್ಲಿಕಾರ್ಜುನ ಮೇಟಿ, ಬಿಟಿಡಿಎ ಮುಖ್ಯ ಎಂಜಿನೀಯರ್ ಚಂದ್ರಹಾಸ ಬಂಡಿ, ಸಂಸ್ಥೆಯ ಉಪಾಧ್ಯಕ್ಷ ಎಂ.ಆರ್.ಸರಗಣಾಚಾರಿ, ವೀರೇಶ ಚಿಂದಿ, ಶಾಲೆಯ ಪ್ರಾಚಾರ್ಯರು, ಶಿಕ್ಷಕರು ಭಾಗವಹಿಸಿದ್ದರು. ಬಳಿಕ ನಡೆದ ಶಾಲಾ ಮಕ್ಕಳ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಗಮನ ಸೆಳೆದವು.

# ಪ್ರತಿಯೊಬ್ಬರಿಗೂ ಕಾನೂನಿನ ತಿಳುವಳಿಕೆ ಅಗತ್ಯ: ಮಾಳೇದ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ವಿದ್ಯಾರ್ಥಿಗಳು ಸೇರಿ ಪ್ರತಿಯೊಬ್ಬ ವ್ಯಕ್ತಿಗೆ ಕಾನೂನಿನ ಅರಿವು, ತಿಳುವಳಿಕೆ ಇರಬೇಕಾದ ಅವಶ್ಯಕತೆ ಇದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಮುಖ್ಯ ಕಾನೂನು ನೆರವು ಅಭಿರಕ್ಷಕ ಪಿ.ಎಚ್. ಮಾಳೇದ ಹೇಳಿದರು.

ತಾಲೂಕಿನ ಬೆನಕಟ್ಟಿ ಗ್ರಾಮದಲ್ಲಿ ನಡೆದಿರುವ ಬಾಗಲಕೋಟೆ ಅಕ್ಕಮಹಾದೇವಿ ಮಹಿಳಾ ಕಾಲೇಜಿನ ಎನ್.ಎಸ್.ಎಸ್. ವಾರ್ಷಿಕ ವಿಶೇಷ ಶಿಬಿರದಲ್ಲಿ ಗುರುವಾರ ' ಕಾನೂನು ಅರಿವು, ನೆರವು ' ಕುರಿತು ಅವರು ಉಪನ್ಯಾಸ ನೀಡಿ, ಇತ್ತೀಚಿನ ದಿನಗಳಲ್ಲಿ ಬಾಲ್ಯ ವಿವಾಹ, ಮಹಿಳೆಯರ ಮೇಲೆ ದೌರ್ಜನ್ಯ ಪ್ರಕರಣಗಳು, ಬಾಲಾಪರಾಧ ಹೀಗೆ ಅನೇಕ ಘಟನಾವಳಿಗಳು ನಡೆಯುತ್ತಿವೆ. ಇದಕ್ಕೆಲ್ಲ ಕಾನೂನುಗಳ ಅರಿವು ಇಲ್ಲದಿರುವುದೇ ಪ್ರಮುಖವಾಗಿದೆ ಎಂದರು.

ಎಲ್ಲ ಕಾನೂನುಗಳನ್ನು ಅರಿಯದಿದ್ದರೂ ಅಗತ್ಯ ಹಾಗೂ ಅವಶ್ಯಕ ಕಾನೂನುಗಳನ್ನು ತಿಳಿದುಕೊಳ್ಳುವುದು ಇಂದು ಬಹಳಷ್ಟು ಅಗತ್ಯವಾಗಿದೆ ಎಂದ ಮಾಳೇದ, ಜನರಲ್ಲಿ ಕಾನೂನಿನ ಅರಿವು ಮೂಡಿಸಲು ಕಾನೂನು ಸೇವೆಗಳ ಪ್ರಾಧಿಕಾರ ನೆರವಾಗುತ್ತಿದ್ದು ಇದರ ಪ್ರಯೋಜನ ಪಡೆಯಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಪ್ರೊ. ಎಂ.ಎಚ್.ಜನ್ನಪ್ಪಗೋಳ, ಎನ್.ಎಸ್.ಎಸ್. ವಿದ್ಯಾರ್ಥಿಗಳು ಕಾನೂನು ತಿಳುವಳಿಕೆ ಹೊಂದಿ ಗ್ರಾಮೀಣ ಜನರಿಗೆ ಅವುಗಳ ಬಗ್ಗೆ ಅರಿವು ಮೂಡಿಸುವ ಕೆಲಸ ಮಾಡಬೇಕು ಎಂದರು. ಲಕ್ಷ್ಮಪ್ಪ ಬಾಳಕ್ಕನವರ, ಬಿ.ಆರ್.ಯಡಹಳ್ಳಿ, ಸಿದ್ದಪ್ಪ ಮೆಳ್ಳಿಗೇರಿ, ಪ್ರೊ. ಎ.ವಿ.ಪುರಾಣಿಕ, ಪ್ರೊ.ವಂದನಾ ಕಡಪಟ್ಟಿ, ಪೂಜಾ ಅರ್ಕಸಾಲಿ, ವನಜಾಕ್ಷಿ ಒಗ್ಯಾನವರ, ಶ್ರೀದೇವಿ ತಾಂಬೆ ಅತಿಥಿಗಳಾಗಿದ್ದರು.

ಕಿತ್ತೂರು ರಾಣಿ ಚನ್ನಮ್ಮ ತಂಡದ ಶಿಬಿರಾರ್ಥಿಗಳು ಎನ್.ಎಸ್.ಎಸ್. ಗೀತೆ ಹಾಡಿದರು. ರೇಣುಕಾ ರಾಠೋಡ ಸ್ವಾಗತಿಸಿದರು. ಪ್ರೇಮಾ ನಾಯಕ ಪರಿಚಯಿಸಿದರು. ತೇಜಸ್ವಿನಿ ಕಟ್ಟಿಮನಿ ವರದಿ ವಾಚಿಸಿದರು. ಕೀರ್ತಿ ಪಾಟೀಲ ಹಾಗೂ ಹನುಮಂತಿ ಮನ್ನಿಕೇರಿ ನಿರೂಪಿಸಿದರು.

# ಬಹುಔಷಧಿ ಚಿಕಿತ್ಸೆಯಿಂದ ಕುಷ್ಠರೋಗ ಗುಣಪಡಿಸಬಹುದು




• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಕುಷ್ಠರೋಗವನ್ನು ಬಹು ಔಷಧಿ ಚಿಕಿತ್ಸಾ ಪದ್ದತಿಯ ಮೂಲಕ ಬಹುಬೇಗನೆ ಗುಣಪಡಿಸಬಹುದಲ್ಲದೇ ಭವಿಷ್ಯದಲ್ಲಿ ಉಂಟಾಗುವ ಅಂಗವೈಕಲ್ಯ ತಡೆಯಬಹುದಾಗಿದೆ. ಮಚ್ಚೆಗಳು ಇದ್ದರೆ ಮನದಲ್ಲಿ ಮುಚ್ಚಿಡಬೇಡಿ ಎಂದು ಶಿರೂರ ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯ ನಿರೀಕ್ಷಣಾಧಿಕಾರಿ ಕೆ.ಎಫ್. ಮಾಯಾಚಾರಿ ಹೇಳಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿಗಳು ಬಾಗಲಕೋಟೆ, ಪ್ರಾಥಮಿಕ ಆರೋಗ್ಯ ಕೇಂದ್ರ ಶಿರೂರ ಹಾಗೂ ಗ್ರಾಮ ಪಂಚಾಯತ್ ನೀಲಾನಗರ ಇವರ ಆಶ್ರಯದಲ್ಲಿ ರಾಷ್ಟ್ರಪಿತ ಮಹಾತ್ಮಗಾಂಧೀಜಿ ಪುಣ್ಯಾರಾಧನೆ ಹಾಗೂ ಕುಷ್ಠರೋಗ ನಿರ್ಮೂಲನಾ ದಿನದ ಅಂಗವಾಗಿ ನೀಲಾನಗರದ ಸರ್ಕಾರಿ ಪ್ರೌಢಶಾಲೆ ಹಾಗೂ ಗ್ರಾಮ ಪಂಚಾಯತನಲ್ಲಿ ಸ್ಪರ್ಶ ಕುಷ್ಠರೋಗ ಅರಿವು ಆದೋಲನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕುಷ್ಠರೋಗ ಲೆಪ್ರೆರೋಗಾಣುವಿನಿಂದ ಉಂಟಾಗುವ ಸಾಂಕ್ರಾಮಿಕ ರೋಗವಾಗಿದೆ. ಇದು ನರಗಳು ಹಾಗೂ ಚರ್ಮದ ಮೇಲೆ ಪರಿಣಾಮ ಬೀರುತ್ತದೆ. ಹೀಗಾಗಿ ದೇಹದ ಯಾವುದೇ ಭಾಗದಲ್ಲೂ ಮಚ್ಚೆಗಳಿದ್ದಲ್ಲಿ ಸಮೀಪದ ಆರೋಗ್ಯ ಕೇಂದ್ರಗಳಿಗೆ ತೆರಳಿ ತಪಾಸಣೆ ಮಾಡಿಕೊಳ್ಳಬೇಕು ಎಂದ ಮಾಯಾಚಾರಿ, ಕುಷ್ಠರೋಗವನ್ನು ಈಗ ಬಹು ಔಷಧಿ ಪದ್ಧತಿಯಿಂದ ಗುಣಪಡಿಸಬಹುದಾಗಿದೆ ಎಂದು ಹೇಳಿದರು.

ಪ್ರೌಢಶಾಲೆಯ ಪ್ರಭಾರ ಮುಖ್ಯಗುರು ವಿ.ಎಸ್.ಹಿರೇಮಠ, ಸಿ.ವಿ.ಪಟ್ಟಣಶೆಟ್ಟಿ, ಕೆ.ಎನ್.ಚಿನ್ನದಾಸರ, ರಾಜು ಕುರಿಗಾರ, ರಾಜು ದೊಡಮನಿ, ನಿಂಗಪ್ಪ ಪಡಸಾಲಿಮನಿ, ಏಶು ಪಡಸಾಲಿಮನಿ, ವಿಠ್ಠಲ ಲಮಾಣಿ, ಆಶಾ ಕಾಯ9ಕರ್ತರಾದ ಸುಮಿತ್ರಾ ಲಮಾಣಿ, ಅನುಷಾ ಖಂಡೊಬಾ ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ರಾಜ್ಯದಲ್ಲಿ ಹಸ್ತಪ್ರತಿ ಅಧ್ಯಯನ ಕೇಂದ್ರ ಸ್ಥಾಪನೆಯಾಗಲಿ : ವೆಂಕಟೇಶ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಹಸ್ತಪ್ರತಿಗಳು ನಮ್ಮ ನಾಡಿನ ಆಸ್ತಿಯಾಗಿದ್ದು, ಸರಕಾರ ರಾಜ್ಯದ ಕಂದಾಯ ವಿಭಾಗಕ್ಕೊಂದು ಕರ್ನಾಟಕ ಹಸ್ತಪ್ರತಿ ಸಂಗ್ರಹಾಲಯಗಳನ್ನು ಪ್ರಾರಂಭಿಸುವ ಜೊತೆಗೆ ರಾಜ್ಯ ಹಸ್ತಪ್ರತಿ ಅಧ್ಯಯನ ಕೇಂದ್ರ ಸ್ಥಾಪನೆ ಮಾಡಬೇಕು ಎಂದು ಅಖಿಲ ಕರ್ನಾಟಕ 22ನೇಯ ಹಸ್ತಪ್ರತಿ ಸಮ್ಮೇಳನಾಧ್ಯಕ್ಷ ಬೆಂಗಳೂರಿನ ಹಿರಿಯ ವಿದ್ವಾಂಸ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಹೇಳಿದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗ ಹಾಗೂ ಬಾಗಲಕೋಟೆಯ ನವನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇವರ ಸಹಯೋಗದಲ್ಲಿ ಶುಕ್ರವಾರ ಕಾಲೇಜಿನ ವಿಶ್ವಮಾನವ ಸಭಾಭವನದಲ್ಲಿ ಅಖಿಲ ಕರ್ನಾಟಕ 22ನೆಯ ಹಸ್ತಪ್ರತಿ ಸಮ್ಮೇಳನಾಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕರ್ನಾಟಕ ಸರ್ಕಾರ ಹಸ್ತಪ್ರತಿಯ ಸರ್ವೇಕ್ಷಣೆ, ಸಂಗ್ರಹಣೆ ಮತ್ತು ಸಂರಕ್ಷಣೆಗೆ ಮುಂದಾಗಬೇಕು. ಅನುದಾನರಹಿತ ಹಸ್ತಪ್ರತಿ ಭಂಡಾರಗಳಿಗೆ ಪ್ರತಿವರ್ಷ ಸಂಗ್ರಹ, ಸಂರಕ್ಷಣೆ, ಪೋಷಣೆ ಮತ್ತು ಪ್ರಕಟಣೆಗಳಿಗೆ ಉದಾರವಾಗಿ ಪ್ರತಿವರ್ಷ ಅನುದಾನವನ್ನು ನೀಡಬೇಕು. ಇದು ಸರ್ಕಾರದ ವಾರ್ಷಿಕ ಆಯ–ವ್ಯಯದಲ್ಲಿ ಅಡಕವಾಗಬೇಕು ಎಂದರು.

ಸರಕಾರ ರಾಜ್ಯದ ಐದು ಕಂದಾಯ ವಿಭಾಗಗಳಲ್ಲಿ ಕರ್ನಾಟಕ ಹಸ್ತಪ್ರತಿ ಸಂಗ್ರಹಾಲಯವನ್ನು ಸ್ಥಾಪಿಸಬೇಕು. ಇದಕ್ಕೆ ಸ್ಥಳೀಯ ವಿಧಾನಸಭಾ,

ಲೋಕಸಭಾ ಸದಸ್ಯರೂ ವಿದ್ಯಾಭಿಮಾನಿಗಳು ಜೊತೆ–ಗೂಡಿ ಕಿತ್ತೂರ ಕರ್ನಾಟಕ, ಕಲ್ಯಾಣ ಕರ್ನಾಟಕ, ಕರಾವಳಿ ಕರ್ನಾಟಕ, ಮಧ್ಯ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದ ವಿಶಿಷ್ಟ ತಾಣಗಳಲ್ಲಿ ಕರ್ನಾಟಕ ಹಸ್ತಪ್ರತಿ ಸಂಗ್ರಹಾಲಯವನ್ನು ಸ್ಥಾಪಿಸುವುದು ಅವಶ್ಯವಿದೆ ಎಂದ ಮಲ್ಲೇಪುರಂ ಜಿ.ವೆಂಕಟೇಶ, ಇದರ ಸಂಪೂರ್ಣ ಜವಾಬ್ದಾರಿಯನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ವಹಿಸಬೇಕು. ಆಧುನಿಕ ಕಾಲದ ಶ್ರೇಷ್ಠ ಕವಿಗಳ, ವಿದ್ವಾಂಸರ ಪ್ರಾತಿನಿಧಿಕ ಬರಹಗಳನ್ನು ಈ ಸಂಗ್ರಹಾಲಯವು ಒಳಗೊಂಡಿರಬೇಕು ಎಂದರು.

ಆಯಾಯ ಜಿಲ್ಲೆಗಳ ಸಾಹಿತ್ಯಕ, ಸಾಂಸ್ಕೃತಿಕ ನೆಲೆ–ಬೆಲೆಗಳನ್ನು ತಿಳಿಯಲು ಇದ–ರಿಂದ ಸಾಧ್ಯವಾಗುತ್ತದೆ. ಇಂಥ ಮಹತ್ವದ ಪ್ರಕಲ್ಪವು ಜಾರಿಗೆ ಬರಬೇಕು. ಜೊತೆಗೆ ರಾಜ್ಯದಲ್ಲಿ ಹಸ್ತಪ್ರತಿ ಅಧ್ಯಯನ ಕೇಂದ್ರ ಸ್ಥಾಪನೆಯಾಗಲಿ, ಬಾಗಲಕೋಟೆ ಸಾಂಸ್ಕೃತಿಕ ಜಿಲ್ಲೆಯಾಗಿದ್ದು ಜಮಖಂಡಿ, ಕೆರೂರ, ಬೀಳಗಿ, ಬದಾಮಿ, ಗುಳೆದಗುಡ್ಡ, ಮುಧೋಳ, ಹಳ್ಳೂರು, ಹುನಗುಂದ, ಕೆಲೂರು,

ಅಮೀನಗಡ, ಕಮತಗಿ, ಸಂಗಮ ಇನ್ನು ಮುಂತಾದ ಸ್ಥಳಗಳು ಹಸ್ತಪ್ರತಿ ರಚನೆ, ಪಾಲನೆ, ಪೋಷಣೆಗಳ ನೆಲೆಗಳಾಗಿದ್ದವು. 30ಕ್ಕೂ ಹೆಚ್ಚು ಲಿಪಿಕಾರ, ಹಲವು ಜನ ಪೋಷಕರ ಬಗೆಗೆ ದಾಖಲೆಗಳಿರುವುದು ಬಾಗಲಕೋಟೆ ಜಿಲ್ಲೆಯ ಅರ್ಥವಂತಿಕೆಯನ್ನು ಹೆಚ್ಚಿಸಿದೆ ಎಂದು ಅವರು ಹೇಳಿದರು.

# ಮಹಾತ್ಮಗಾಂಧೀಜಿ ಬದುಕು ಮನುಕುಲಕ್ಕೆ ದಾರಿದೀಪ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಮಹಾತ್ಮ ಗಾಂಧೀಜಿ ಸಹಿತ ಸಾವಿರಾರು ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ–ಬಲಿದಾನದ ಫಲವಾಗಿ ದೇಶಕ್ಕೆ ಸ್ವಾತಂತ್ರ್ಯ ಲಭಿಸಿದೆ. ದೇಶಕ್ಕೆ ಅವರು ನೀಡಿದ ಕೊಡುಗೆಯನ್ನು ಯುವಜನತೆ ಅರಿತು, ಧನ್ಯತಾಭಾವದಿಂದ ಸ್ಮರಣೆ ಮಾಡಬೇಕು ಎಂದು ಪ್ರಾಚಾರ್ಯ ಶ್ರೀನಿವಾಸ ನರಗುಂದ ಹೇಳಿದರು.

ನಗರದ ವಿದ್ಯಾ ಪ್ರಸಾರಕ ಮಂಡಳದ ಎಸ್.ಆರ್.ನರಸಾಪೂರ ಕಲಾ ಹಾಗೂ ಎಂ.ಬಿ.ಶಿರೂರ ವಾಣಿಜ್ಯ ಮಹಾವಿದ್ಯಾಲಯದ ಎನ್‌ಎಸ್‌ಎಸ್ ಘಟಕ–1 ಮತ್ತು 2ರ ಅಡಿಯಲ್ಲಿ ಮಹಾತ್ಮ ಗಾಂಧೀಜಿ ಪುಣ್ಯತಿಥಿ ಅಂಗವಾಗಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.




ಸತ್ಯ ಮತ್ತು ಅಹಿಂಸೆ ಎಂಬ ಅಸ್ತ್ರಗಳಿಂದ ದೇಶಕ್ಕೆ ಸ್ವಾತಂತ್ರ್ಯ ತರುವಲ್ಲಿ ಅವರು ಶ್ರಮಿಸಿದರು. ಸಧ್ಯದ ಸಂದರ್ಭದಲ್ಲಿ ಅವರ ತತ್ವ ಸಿದ್ಧಾಂತಗಳು ಪ್ರಸ್ತುತವಾಗಿವೆ. ದೇಶಕ್ಕೆ ಅವರು ನೀಡಿದ ಕೊಡುಗೆಯನ್ನು ಸ್ಮರಿಸುವುದು ಈ ದಿನದ ಉದ್ದೇಶವಾಗಿದೆ. ಗಾಂಧೀಜಿ ಅವರ ಬದುಕು ಮನುಕುಲಕ್ಕೆ ದಾರಿದೀಪವಾಗಿದೆ ಎಂದು ನರಗುಂದ ಹೇಳಿದರು.

ಅವರ ಜೀವನ ಮೌಲ್ಯ, ಆದರ್ಶಗಳಿಂದ ಯುವಕರು ಪ್ರೇರಣೆ ಪಡೆಯಬೇಕು. ದೇಶದ ಇತಿಹಾಸವನ್ನು ತಿಳಿದುಕೊಂಡು ಸ್ವಾತಂತ್ರ್ಯವನ್ನು ರಕ್ಷಿಸಿ ಏಕತೆ ಸಾಧಿಸುವ ಪ್ರಯತ್ನ ಮಾಡಬೇಕು. ವೀರ ಸೇನಾನಿಗಳ ವ್ಯಕ್ತಿತ್ವದಿಂದ ಸ್ಫೂರ್ತಿ ಪಡೆದು ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು ಎಂದರು.

ಸ್ನೇಹಾ ಅರಬಿ ಭಜನ್ ಸಾದರಪಡಿಸಿದರು. ಎನ್‌ಎಸ್‌ಎಸ್ ಅಧಿಕಾರಿ ಎಸ್.ವಾಯ್.ಬೊಮ್ಮಣ್ಣವರ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ದಿಲ್‌ಶಾದ ನದಾಫ್ ವಂದಿಸಿದರು. ಶಿಕ್ಷಕ–ಶಿಕ್ಷಕೇತರ ಸಿಬ್ಬಂದಿ ಪಾಲ್ಗೊಂಡಿದ್ದರು.

# ಪಟ್ಟಣದಲ್ಲಿ ತ್ರಿವಳಿ ಕೊಲೆ ಬೆಚ್ಚಿಬಿದ್ದ ಜನರು

• **ಮಲ್ಲಮ್ಮ ನುಡಿ ವಾರ್ತೆ ಕೊಟ್ಟೂರು:**



ಪಟ್ಟಣದ ಹರಪನಹಳ್ಳಿ ರಸ್ತೆಯ ಎಲ್.ಬಿ. ಬಡಾವಣೆಯ ಬಾಡಿಗೆ ಮನೆಯಲ್ಲಿ ಅಕ್ಷಯ್ ಎಂಬ ಮಗ ತನ್ನ ತಂದೆ ಭೀಮರಾಜ್, ತಾಯಿ ಜಯಲಕ್ಷ್ಮಿ, ತಂಗಿ ಅಮೃತ ಎಂಬುವ ಮೂರು ಜನರನ್ನು ಭೀಕರವಾಗಿ ಕೊಲೆ ಮಾಡಿದ್ದಾಗಿ ತಿಳಿದುಬಂದಿದೆ. ಸದರಿ ಪ್ರಕರಣ ದೂರು ದಾಖಲಾಗಿದೆ. ಕೊಲೆಗೆ ನಿಖರವಾದ ಕಾರಣ ತಿಳಿದು ಬಂದಿಲ್ಲ, ಪೊಲೀಸ್ ತನಿಖೆ ನಂತರ ತಿಳಿಯಬೇಕು. ಪೊಲೀಸ್ ವರಿಷ್ಠಾಧಿಕಾರಿ ಎಸ್. ಜಾಹ್ನವಿ, ಡಿವೈಎಸ್ಪಿ ಮಲ್ಲೇಶ ಮಲ್ಲಾಪುರ, ಸಿಪಿಐ ದುರುಗೇಶ, ಪಿಎ ಗೀತಾಂಜಲಿ ಶಿಂಧೆ ಹಾಗೂ ಪೊಲೀಸ್ ಸಿಬ್ಬಂದಿ ಸ್ಥಳದಲ್ಲಿದ್ದರು. ಈ ಭಾವ ಚಿತ್ರವು ಕೊಲೆ ಆರೋಪಿಯಾದ ಅಕ್ಷಯ್ ಕುಮಾರ್



**ಬಾಗಲಕೋಟೆ: ಬಾಗಲಕೋಟೆ ಸಂಸದ ಪಿ.ಸಿ.ಗದ್ದಿಗೌಡರ ನವದೆಹಲಿಯಲ್ಲಿ ಕೇಂದ್ರ ಕೈಗಾರಿಕೆ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರನ್ನು ಅವರ ಗೃಹ ಕಚೇರಿಯಲ್ಲಿ ಭೇಟಿಯಾಗಿ ರಾಜ್ಯ ಹಾಗೂ ಬಾಗಲಕೋಟೆ ಜಿಲ್ಲೆಯ ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳ ಕುರಿತು ಚರ್ಚಿಸಿದರು.**

# ಉಚಿತ ಆರೋಗ್ಯ ತಪಾಸಣೆ ಶಿಬಿರ




• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ತಾಲೂಕಿನ ಬೆನಕಟ್ಟಿ ಗ್ರಾಮದಲ್ಲಿ ಗುರುವಾರ ಬಾಗಲಕೋಟೆಯ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಹೋಮಿಯೋಪಥಿಕ್ ವೈದ್ಯಕೀಯ ಕಾಲೇಜಿನ ಸಮುದಾಯ ವೈದ್ಯಕೀಯ ವಿಭಾಗ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಂಡಿತ್ತು.

ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಅಕ್ಕಮಹಾದೇವಿ ಮಹಿಳಾ ಕಾಲೇಜಿನ ಎನ್.ಎಸ್.ಎಸ್.ಶಿಬಿರದಲ್ಲಿ ಹಮ್ಮಿಕೊಳ್ಳಲಾಗಿದ್ದ ಆರೋಗ್ಯ ಶಿಬಿರದಲ್ಲಿ 75 ಕ್ಕೂ ಹೆಚ್ಚು ಜನ ಸಾಮಾನ್ಯ ಆರೋಗ್ಯ ತಪಾಸಣೆ ಮಾಡಿಸಿಕೊಂಡು ವೈದ್ಯಕೀಯ ಸಲಹೆ ಪಡೆದರು.

ರಕ್ತದೊತ್ತಡ, ಸಕ್ಕರೆ ಕಾಯಿಲೆ ತಪಾಸಣೆ ಮಾಡಿಸಿಕೊಂಡ ರೋಗಿಗಳಿಗೆ ವೈದ್ಯರು ಅಗತ್ಯ ಮಾರ್ಗದರ್ಶನ ನೀಡಿದರು. ಮಧ್ಯಾಹ್ನ ಎನ್.ಎಸ್.ಎಸ್.ಮಹಿಳಾ ಶಿಬಿರಾರ್ಥಿಗಳಿಗೆ ಮಾಸಿಕ ಸ್ವಚ್ಛತೆ ಕುರಿತು ಜಾಗೃತಿ ಕಾರ್ಯಕ್ರಮ ಜರುಗಿತು.

ಡಾ.ಅಖಿಲಾ ಎಸ್. ಹುಲ್ಲೂರ, ಡಾ.ಸುನೀಲ ಬೋಸಲೆ ಹಾಗೂ ಡಾ.ಸಹನಾ ಹಿರೇಮಠ ಮಾಸಿಕ ಸ್ವಚ್ಛತೆಯ ಮಹತ್ವ, ಆರೋಗ್ಯಕರ ಅಭ್ಯಾಸಗಳ ಕುರಿತು ಮಾಹಿತಿ, ಸಲಹೆ ನೀಡಿದರು. ಎನ್.ಎಸ್.ಎಸ್. ಅಧಿಕಾರಿಗಳಾದ ಪ್ರೊ. ಮಲ್ಲಮ್ಮ ಬಾಜಪ್ಪನವರ ಹಾಗೂ ಪ್ರೊ.ಎ.ಆರ್.ಬಡಿಗೇರ ಹಾಗೂ ಹೋಮಿಯೋಪತಿಕ್ ಕಾಲೇಜಿನ ಇಂಟರನ್ಸ್ ಮತ್ತು ಅಂತಿಮ ವರ್ಷದ ವಿದ್ಯಾರ್ಥಿಗಳು, ಗ್ರಾಮದ ಆಶಾ ಕಾರ್ಯಕರ್ತರಾದ ಅವ್ವಕ್ಕ ಗೊರವರ ಹಾಗೂ ತಾಯವ್ವ ಮಾದರ ಇದ್ದರು.

# ವಿಶ್ವ ಕ್ಯಾನ್ಸರ್ ದಿನಾಚರಣೆ: ಗರ್ಭಕಂಠ ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ವಿಶ್ವ ಕ್ಯಾನ್ಸರ್ ದಿನದ ಅಂಗವಾಗಿ ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಷನ್ ಆಫ್ ಇಂಡಿ–ಯಾ (ಈಕಂಖ) ಬಳ್ಳಾರಿ ಶಾಖೆ ಹಾಗೂ ಬಳ್ಳಾರಿ ಶಾಖ ವಿದ್ಯುತ್ ಸ್ಥಾವರ (ಃಖಿಕಖ), ಕುಡತಿನಿ ಇವರ ಸಹಯೋಗದಲ್ಲಿ ಗರ್ಭಕಂಠ ಕ್ಯಾನ್ಸರ್ ಕುರಿತು ಜಾಗೃತಿ ಕಾರ್ಯಕ್ರಮವನ್ನು ಬಿಟಿಪಿಎಸ್ ಸಭಾಂಗಣದಲ್ಲಿ ಯಶಸ್ವಿಯಾಗಿ ಆಯೋಜಿಸಲಾಯಿತು.

ಕಾರ್ಯಕ್ರಮವನ್ನು ಬಿಟಿಪಿಎಸ್ ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಕೆ. ಗಂಗಾಧರ ನಾಯಕ್ ಅವರು ಉದ್ಘಾಟಿಸಿದರು. ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಮಹಿಳೆಯರಲ್ಲಿ ಗರ್ಭಕಂಠ ಕ್ಯಾನ್ಸರ್ ತಡೆಗಟ್ಟಲು ಸಮಯಕ್ಕೆ ಸರಿಯಾದ ತಪಾಸಣೆ, ಮುನ್ನೆಚ್ಚರಿಕೆ ಹಾಗೂ ಜಾಗೃತಿ ಅತ್ಯಂತ ಅಗತ್ಯವೆಂದು ತಿಳಿಸಿದರು.

ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾದ ಡಾ.ಪ್ರಣಿತಾ ಅಜಯ್ ಸ್ತ್ರೀ ರೋಗ ತಜ್ಞರು ಸದಸ್ಯರು ಈಕಂಖ , ಗರ್ಭಕಂಠ ಕ್ಯಾನ್ಸರ್‌ನ ಕಾರಣಗಳು, ಲಕ್ಷಣಗಳು, ತಡೆಗಟ್ಟುವ ವಿಧಾನಗಳು, ತಪಾಸಣೆಯ ಮಹತ್ವ ಹಾಗೂ ಲಸಿಕೆ ಕುರಿತು ಸಮಗ್ರ ಮಾಹಿತಿಯನ್ನು ನೀಡಿದರು.

ಕಾರ್ಯಕ್ರಮದ ಪ್ರಸ್ತಾವಿಕ ಭಾಷಣವನ್ನು ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ ಬಳ್ಳಾರಿ ಶಾಖೆಯ ಶಾಖಾ ವ್ಯವಸ್ಥಾಪಕರಾದ ಶ್ರೀಮತಿ ಎಸ್. ವಿಜಯಲಕ್ಷ್ಮಿ ಅವರು ಮಾಡಿದರು. ಹಾಗೂ ಅವರು ಮಹಿಳೆಯರ ಆರೋಗ್ಯ ರಕ್ಷಣೆ, ಲೈಂಗಿಕ ಹಾಗೂ ಪ್ರಜನನ ಆರೋಗ್ಯ ಸೇವೆಗಳ ಮಹತ್ವ ಮತ್ತು ಕ್ಯಾನ್ಸರ್ ತಡೆಗಟ್ಟುವಲ್ಲಿ ಈಕಂಖ ಸಂಸ್ಥೆಯ ಪಾತ್ರವನ್ನು ವಿವರಿಸಿದರು.

ಈ ಕಾರ್ಯಕ್ರಮದಲ್ಲಿ ಬಿಟಿಪಿಎಸ್‌ನ ಸಿಬ್ಬಂದಿ ಹಾಗೂ ಉದ್ಯೋಗಿಗಳು ಸಕ್ರಿಯವಾಗಿ ಪಾಲ್ಗೊಂಡಿದ್ದು, ಗರ್ಭಕಂಠ ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸಲಾಯಿತು. ಕಾರ್ಯಕ್ರಮವು ಮಹಿಳೆಯರ ಆರೋಗ್ಯ ರಕ್ಷಣೆಯ ಸಂದೇಶದೊಂದಿಗೆ ಸಮಾಪ್ತಿಯಾಯಿತು.

## ಗಡಿಯಲ್ಲಿ ಪಟ್ಟದ್ದೇವರಿಂದ ಶೈಕ್ಷಣಿಕ ಕ್ರಾಂತಿ



**ಭಾಲ್ಕಿ:** ಕಲ್ಯಾಣ ಕರ್ನಾಟಕ ಭಾಗದಲ್ಲಿ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಧರ್ಮ ಪ್ರಚಾರ, ಪ್ರಸಾರದ ಜತೆಗೆ ಶೈಕ್ಷಣಿಕ ಕ್ರಾಂತಿಯುತ್ತಿರುವುದು ಹೆಮ್ಮೆ ತರಿಸಿದೆ ಎಂದು ಸದ್ಗುರು ಶ್ರೀ ಮಧುಸೂದನ್ ಸಾಯಿ ಹೇಳಿದರು. ಕಲಬುರಗಿ ಜಿಲ್ಲೆಯ ಕಮಲಾಪುರ ತಾಲೂಕಿನ ನವನಿಹಾಳ ಗ್ರಾಮದ ಶ್ರೀ ಸತ್ಯ ಸಾಯಿ ಮಾನವ ಶ್ರೇಷ್ಠತೆಯ ವಿಶ್ವವಿದ್ಯಾಲಯ ಈಚೆಗೆ ಭೇಟಿ ನೀಡಿದ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಅವರನ್ನು ಸನ್ಮಾನಿಸಿ ಅವರು ಮಾತನಾಡಿದರು. ಗ್ರಾಮೀಣ ಭಾಗದಲ್ಲಿ ಕಳೆದ ನಾಲ್ಕೈದು ದಶಕಗಳ ಹಿಂದೆ ಪೂಜ್ಯರು ಕಟ್ಟಿದ ವಿದ್ಯಾ ದೇಗುಲ ಬಡ ಮಕ್ಕಳಿಗೆ ಪಾಲಿಗೆ ದೇವಸ್ಥಾನವಾಗಿ ಪರಿಣಮಿಸಿದೆ. ಈ ಸಂಸ್ಥೆಯಲ್ಲಿ ಕಲಿತ ವಿದ್ಯಾರ್ಥಿಗಳು ವೈದ್ಯರು, ಎಂಜನಿಯರು, ಉನ್ನತ ಅಧಿಕಾರಿಗಳಾಗಿ ದೇಶ ಕಟ್ಟುವ ಕಾಯಕದಲ್ಲಿ ನಿರತರಾಗಿದ್ದಾರೆ. ಗಡಿ ಭಾಗದಲ್ಲಿ ಪೂಜ್ಯರು ಮಾಡುತ್ತಿರುವ ಪೂಜ್ಯರ ಸೇವೆಯನ್ನು ಕಣ್ಣಾರೆ ಕಾಣಲು ಉತ್ಸುಕನಾಗಿದ್ದೇನೆ. ಶೀಘ್ರವೇ ಪೂಜ್ಯರ ಸೇವಾ ಕ್ಷೇತ್ರಕ್ಕೆ ಭೇಟಿ ನೀಡುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು, ಮಹಾಲಿಂಗ ಸ್ವಾಮೀಜಿ, ಬಸವಲಿಂಗ ಸ್ವಾಮೀಜಿ, ಶಿವಬಸವ ದೇವರು, ಆಡಳಿತಾಧಿಕಾರಿ ಮೋಹನ ರೆಡ್ಡಿ, ಸಾಹಿತಿ ರಾಜು ಜುಬರೆ, ಪ್ರಶಾಂತ ರೆಡ್ಡಿ ಸೇರಿದಂತೆ ಹಲವರು ಇದ್ದರು.

> ವಿಶ್ವಾದ್ಯಾಂತ ಸದ್ಗುರು ಶ್ರೀ ಮಧುಸೂದನ್ ಸಾಯಿ ಅವರು ಜಗತ್ತೇ ಒಂದು ಕುಟುಂಬ ಎಂಬ ತತ್ವದಡಿ ಆರೋಗ್ಯ, ಶಿಕ್ಷಣ ಕ್ಷೇತ್ರದಲ್ಲಿ ಅದ್ಭುತ ಕ್ರಾಂತಿಗೈದಿದ್ದಾರೆ. 30ಕ್ಕೂ ಹೆಚ್ಚು ದೇಶಗಳಲ್ಲಿ, 30ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳು, ಉಚಿತ ವೈದ್ಯಕೀಯ ಕಾಲೇಜು, ಮಕ್ಕಳ ಹೃದಯ ಶಸ್ತ್ರಚಿಕಿತ್ಸಾ ಆಸ್ಪತ್ರೆಗಳ ಮೂಲಕ ಲಕ್ಷಾಂತರ ಜನರಿಗೆ ಉಚಿತ ಸೇವೆ ನೀಡುತ್ತಿರುವುದು ಮಾದರಿ ಎನಸಿದೆ.
>
> –ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು
> ಹಿರೇಮಠ ಸಂಸ್ಥಾನ ಭಾಲ್ಕಿ

## ಜಾನಪದ ಸಂಗೀತದ ಮೂಲಕ ಗ್ಯಾರಂಟಿ ಪ್ರಚಾರ



**ಕೊಪ್ಪಳ:** ರಾಜ್ಯದಲ್ಲಿ ಪ್ರಸ್ತುತ ಸರಕಾರ ಬಂದನಂತರ ಬಡಜನರ ನಾಡಿಮಿಡಿತ ಅರಿತು ಸರ್ವರ ಅನುಕೂಲಕ್ಕಾಗಿ ಗ್ಯಾರಂಟಿ ಯೋಜನೆಗಳನ್ನು ರೂಪಿಸಿ ಜಾರಿಗೆ ತಂದು ಮಹತ್ವದ ಕಾರ್ಯ ಮಾಡಿದೆ. ವಿಶೇಷವಾಗಿ ದೇಶದಲ್ಲಿಯೇ ಈ ರೀತಿಯ ಬಡವರ ಯೋಜನೆ ಜಾರಿಗೆ ತಂದಿರುವುದು ಪ್ರಥಮ ಎನ್ನಬಹುದು ಎಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಮುಖ್ಯಕಾರ್ಯನಿರ್ವಾಹಕ ಚನ್ನಯ್ಯ ಹಿರೇಮಠ ಹೇಳಿದರು.

ಅವರು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯವರ ಸಹಯೋಗದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸಾಂಸ್ಕೃತಿಕ ಸಮಗ್ರ ಗ್ರಾಮೀಣಾಭಿವೃದ್ಧಿ ಸಂಸ್ಥೆ (ರಿ) ಕುಷ್ಟಗಿ ಕಲಾತಂಡದವರು ಗಂಗಾವತಿ ತಾಲೂಕಿನ ಸಂಗಾಪುರ ಗ್ರಾಮದಲ್ಲಿ ಏರ್ಪಡಿಸಿದ್ದ ಸರಕಾರದ ಗ್ಯಾರಂಟಿ ಯೋಜನೆಗಳ ಪ್ರಚಾರ ಸಾಂಸ್ಕೃತಿಕ ಕಾರ್ಯಕ್ರಮವನ್ನು ತಮಟೆ ನುಡಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಗ್ರಾಮದ ಗಣ್ಯರಾದ ಜಿಲಾನಿ ಸಾಹೇಬ್, ಮಂಜು ಹುಲಸಗೇರಿ ಭಾಗವಹಿಸಿದ್ದರು. ಮಹಿಳಾ ಮಂಡಳದ ಗಂಗಮ್ಮ ಹಿರೇಮನಿ, ಮೀನಾಕ್ಷಮ್ಮ, ಪಾರವ್ವ, ರತ್ನಮ್ಮ ಉಪಸ್ಥಿತರಿದ್ದರು. ನಂತರ ಕಲಾತಂಡದಿಂದ ಸರಕಾರದ ಪಂಚ ಯಾರಂಟಿ ಯೋಜನೆಗಳ ಮಹತ್ವ, ಆರೋಗ್ಯ, ಶಿಕ್ಷಣ ಕುರಿತು ವಿವಿಧ ಜಾನಪದ ಗೀತೆಗಳು ಹಾಗೂ ಸಂಭಾಷಣೆಯ ಮೂಲಕ ಪ್ರಸ್ತುತಪಡಿಸಿ ಜನ–ಮನ ರಂಜಿಸಿದರು.

ಕಲಾತಂಡದಲ್ಲಿ ನಿಂಗಪ್ಪ ಸೊಲ್ಲಾಪೂರ, ರಾಮಣ್ಣ ಮುರಡಿ, ಗೌರಮ್ಮ ಕುರಿ ಭಾಗವಹಿಸಿದ್ದರು. ಗಂಗಾವತಿ ತಾಲೂಕಿನ ವಿವಿಧ 20 ಗ್ರಾಮಗಳಲ್ಲಿ ಕಲಾತಂಡವು ಸರಕಾರದ ಪಂಚ ಗ್ಯಾರಂಟಿ ಯೋಜನೆಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡು ಜನರಿಗೆ ಸರಕಾರದ ಯೋಜನೆಗಳ ಕುರಿತು ಜಾನಪದ ಗೀತೆಗಳು ಮತ್ತು ಸಂಭಾಷಣೆಯ ಮೂಲಕ ಜಾಗೃತಿ ಮೂಡಿಸುತ್ತಿದೆ.

## ಜ್ಯೋತಿ ರಥಯಾತ್ರೆ ಸಿದ್ಧ



**ರಾಯಚೂರು:** ರಾಯಚೂರು ಜಿಲ್ಲೆಯಲ್ಲಿ 2026ರ ಫೆಬ್ರವರಿ 05, 06 ಮತ್ತು 07 ರಂದು ಮೂರು ದಿನಗಳ ಕಾಲ ಹಮ್ಮಿಕೊಂಡ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದ ಜ್ಯೋತಿ ರಥಯಾತ್ರೆಯು ಸಿದ್ಧವಾಗಿದೆ. ಈ ಜ್ಯೋತಿ ರಥಯಾತ್ರೆಯು ಮಾನವಿ, ಸಿಂಧನೂರ, ಮಸ್ಕಿ, ಲಿಂಗಸೂರು, ಕವಿತಾಳ, ದೇವದುರ್ಗ, ಗಬ್ಬೂರ, ಅರಕೇರಾ, ಸಿರವಾರ ಸೇರಿದಂತೆ ರಾಯಚೂರು ಜಿಲ್ಲೆಯಾದ್ಯಂತ ಸಂಚರಿಸಲಿದೆ. ರಾಯಚೂರು ಉತ್ಸವದ ಹಿನ್ನೆಲೆಯಲ್ಲಿ ಹಮ್ಮಿಕೊಂಡ ನಾನಾ ಕಾರ್ಯಕ್ರಮಗಳ ಮಾಹಿತಿಯನ್ನು ಜನತೆಗೆ ಒದಗಿಸುವ ದಿಶೆಯಲ್ಲಿ ಈ ಜ್ಯೋತಿ ರಥಯಾತ್ರೆ ಸಂಚರಿಸಲಿದೆ. ಜಿಲ್ಲಾಧಿಕಾರಿಗಳ ಮನವಿ: ಈ ಜ್ಯೋತಿ ರಥಯಾತ್ರೆಯು ಫೆ.01ರ ಬೆಳಿಗ್ಗೆ 10 ಗಂಟೆಗೆ ರಾಯಚೂರು ನಗರದ ಕರ್ನಾಟಕ ಸಂಘದಿಂದ ಪ್ರಾರಂಭವಾಗಲಿದ್ದು, ಈ ಕಾರ್ಯಕ್ರಮಕ್ಕೆ ಜಿಲ್ಲೆಯ ಎಲ್ಲಾ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ತಮ್ಮ ಇಲಾಖೆ ಸಿಬ್ಬಂದಿಯೊಂದಿಗೆ ತಪ್ಪದೇ ಹಾಜರಾಗಬೇಕು. ಶಾಲಾ–ಕಾಲೇಜಿನ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ರಥಯಾತ್ರೆಯನ್ನು ಯಶಸ್ವಿಗೊಳಿಸಬೇಕೆಂದು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಮನವಿ ಮಾಡಿದ್ದಾರೆ.

# ಕೊಪ್ಪಳದಲ್ಲಿ ಐದು ಗ್ಯಾರಂಟಿ ಯೋಜನೆಗಳ ಉತ್ಸವ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ



ರಾಜ್ಯ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳ ಉತ್ಸವವನ್ನು ಫೆಬ್ರವರಿ ಮಾಹೆಯಲ್ಲಿ ಕೊಪ್ಪಳದಲ್ಲಿ ಹಮ್ಮಿಕೊಳ್ಳಲಾಗುತ್ತಿದೆ ಎಂದು ಕೊಪ್ಪಳ ಜಿಲ್ಲಾ ಗ್ರಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ರೆಡ್ಡಿ ಶ್ರೀನಿವಾಸ ಹೇಳಿದರು.

ಅವರು ಗುರುವಾರ ಕೊಪ್ಪಳ ಜಿಲ್ಲಾ ಪಂಚಾಯತ್‌ನ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಂಬಂಧ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ಜಿಲ್ಲಾ ಮಟ್ಟದ ಪಂಚ ಗ್ಯಾರಂಟಿ ಯೋಜನೆಗಳ ಉತ್ಸವವನ್ನು ಕೊಪ್ಪಳ ನಗರದ ಹೊಸಪೇಟೆ ರಸ್ತೆಯ ಮಧುಶ್ರೀ ಗಾರ್ಡನ್‌ನಲ್ಲಿ ಆಯೋಜಿಸಲು ಉದ್ದೇಶಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಫಲಾನುಭವಿಗಳಿಗೆ ಸನ್ಮಾನಿಸಲಾಗುವುದು. ಗೃಹಲಕ್ಷ್ಮೀ, ಗೃಹಜೋತಿ, ಶಕ್ತಿ, ಅನ್ನಭಾಗ್ಯ ಮತ್ತು ಯುವನಿಧಿ ಯೋಜನೆಗಳಡಿ ಲಾಭ ಪಡೆದುಕೊಂಡ ಕೊಪ್ಪಳ ಜಿಲ್ಲೆಯ ಫಲಾನುಭವಿಗಳನ್ನು ಈ ಗ್ಯಾರಂಟಿ ಉತ್ಸವದಲ್ಲಿ ಕರೆ ತರಬೇಕು. ಈ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಹಮ್ಮಿಕೊಳ್ಳಲು ಐದು ಗ್ಯಾರಂಟಿ ಯೋಜನೆಗಳಿಗೆ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ವಿಶೇಷ ಕ್ರಮ ವಹಿಸಬೇಕು ಎಂದರು.

ಗ್ಯಾರಂಟಿ ಉತ್ಸವಕ್ಕಾಗಿ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಎಲ್ಲಾ ತಾಲ್ಲೂಕುಗಳ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರು ಹೆಚ್ಚಿನ ಜವಾಬ್ದಾರಿ ತೆಗೆದುಕೊಂಡು ಕಾರ್ಯಕ್ರಮವನ್ನು ಯಾಶಸ್ವಿಗೊಳಿಸಬೇಕು. ಪಂಚ ಗ್ಯಾರಂಟಿ ಯೋಜನೆಗಳು ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳ ಆರ್ಥಿಕ ಸ್ಥಿರತೆಯನ್ನು ಬಲಪಡಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ. ಹಾಗಾಗಿ ಪಂಚ ಗ್ಯಾರಂಟಿ ಯೋಜನೆಗಳ ಲಾಭ ಎಲ್ಲಾ ಫಲಾನುಭವಿಗಳಿಗೆ ಸಿಗಬೇಕು ಎನ್ನುವುದು ನಮ್ಮ ಸರ್ಕಾರದ ಮುಖ್ಯ ಉದ್ದೇಶವಾಗಿದ್ದು, ಈ ಐದು ಯೋಜನೆಗಳ ಲಾಭಗಳು, ಅರ್ಹತೆ, ಅರ್ಜಿ ಪ್ರಕ್ರಿಯೆ ಮತ್ತು ಅನುಷ್ಠಾನ ಸ್ಥಿತಿಯ ಕುರಿತು ಈ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಗೆ ವಿವರವಾದ ಮಾಹಿತಿ ನೀಡಲಾಗುತ್ತದೆ ಎಂದು ಹೇಳಿದರು.

ಜನಪರವಾದ ಪಂಚ ಗ್ಯಾರಂಟಿ ಯೋಜನೆಗಳನ್ನು ಜಿಲ್ಲೆಯಲ್ಲಿ ಸಮರ್ಪಕವಾಗಿ ಅನುಷ್ಠಾನಗೊಳಿಸಿ ಇವುಗಳ ಲಾಭವನ್ನು ಜಿಲ್ಲೆಯ ಪ್ರತಿಯೊಬ್ಬ ಅರ್ಹ ಫಲಾನುಭವಿಗಳಿಗೆ ಸಿಗಬೇಕು. ಯಾವುದೇ ಅರ್ಹ ಫಲಾನುಭವಿಗಳು ಈ ಯೋಜನೆಗಳಿಂದ ಹೊರಗುಳಿಯದಂತೆ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು. ಕೊಪ್ಪಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವರ್ಣಿತ್ ನೇಗಿ ಅವರು ಮಾತನಾಡಿ, ಯುವನಿಧಿ ಯೋಜನೆ ಫಲಾನುಭವಿಗಳಿಗೆ ಯುವನಿಧಿ ಪ್ಲಸ್ ಕಾರ್ಯಕ್ರಮದಡಿ ವಿವಿಧ ಕೌಶಲ್ಯ ತರಬೇತಿಗಳನ್ನು ನೀಡಬೇಕು. ಇದರಿಂದ ಅವರಿಗೆ ಮುಂದಿನ ದಿನಗಳಲ್ಲಿ ಉದ್ಯೋಗಕ್ಕಾಗಿ ಅನುಕೂಲವಾಗಲಿದೆ. ಯುವನಿಧಿ ಪ್ಲಸ್ ಕಾರ್ಯಕ್ರಮದಡಿ ತರಬೇತಿಯಲ್ಲಿ ಪಾಲ್ಗೊಳ್ಳುವ ಫಲಾನುಭವಿಗಳಿಗೆ ಯಾವುದೇ ರೀತಿಯ ಯುವನಿಧಿ ಯೋಜನೆಯ ನಿರುದ್ಯೋಗ ಭತ್ಯೆ ಕಡಿತವಾಗುವುದಿಲ್ಲ. ಈ ಬಗ್ಗೆ ಎಲ್ಲರಿಗೂ ಸೂಕ್ತ ಮಾಹಿತಿ ನೀಡಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕೊಪ್ಪಳ ಜಿಲ್ಲಾ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷ ಮಂಜುನಾಥ ಜಿ. ಗೊಂಡಬಾಳ ಮಾತನಾಡಿ, ಗ್ಯಾರಂಟಿ ಉತ್ಸವದಲ್ಲಿ ಹಾಕುವ ಐದು ಸ್ಟಾಲುಗಳಲ್ಲಿ ಫಲಾನುಭವಿಗಳಿಗೆ ಬೇಕಿರುವ ಅಗತ್ಯ ಮಾಹಿತಿ ಮತ್ತು ಸಮಸ್ಯೆಗಳಿಗೆ ಪರಿಹಾರ ನೀಡುವ ಉದ್ದೇಶದಿಂದ ಲ್ಯಾಪ್ಟಾಪ್ ಇಟ್ಟು ಹಾಗೂ ಕಂಪ್ಯೂಟರ್ ಆಪರೇಟರ್ ಮತ್ತು ಮಾಹಿತಿ ನೀಡುವವರು ಇರಬೇಕು ಹಾಗೂ ಜಿಲ್ಲೆಗೆ ಇದುವರೆಗೂ ಕೊಟ್ಟಿರುವ ಯೋಜನೆಯ ಮಾಹಿತಿಯನ್ನು ಫ್ಲೆಕ್ಸ್ ಮೂಲಕ ಅಳವಡಿಸಬೇಕು. ವಯಸ್ಸಾದ ಫಲಾನುಭವಿಗಳಿಗೆ ಅನ್ನಭಾಗ್ಯ ಯೋಜನೆಯ ಸುವಿಧ ಕುರಿತು ಹೆಚ್ಚಿನ ಪ್ರಚಾರ ಮತ್ತು ನಾಯಬೆಲೆ ಅಂಗಡಿ ಮಾಲೀಕರಿಗೆ ಸೂಚನೆ ಕೊಡುವಂತೆ ಆಹಾರ ಇಲಾಖೆಯ ಅಧಿಕಾರಿಗಳು ಅಗತ್ಯಕ್ರಮ ಕೈಗೊಳ್ಳಬೇಕು. ಯುವ ನಿಧಿ ಫಲಾನುಭವಿಗಳು ಕಡ್ಡಾಯವಾಗಿ ಯುವ ನಿಧಿ ಪ್ಲಸ್ ನಲ್ಲಿ ನೋಂದಾಯಿಸಿಕೊಳ್ಳುವಂತೆ ಹಾಗೂ ಅವರಿಗೆ ಅಗತ್ಯವಿರುವ ತರಬೇತಿಗಳನ್ನು ಆಯೋಜಿಸಲು ಕ್ರಮಕೈಗೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪಂಚ ಗ್ಯಾರಂಟಿ ಯೋಜನೆಗಳಾದ ಗೃಹಲಕ್ಷ್ಮೀ, ಗೃಹಜ್ಯೋತಿ, ಶಕ್ತಿ, ಅನ್ನಭಾಗ್ಯ ಮತ್ತು ಯುವನಿಧಿ ಯೋಜನೆಗಳಡಿ ಕೊಪ್ಪಳ ಜಿಲ್ಲೆಯ ಪ್ರಗತಿ ವಿವರ ಕುರಿತು ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಕಾಸಿಮ್ ಸಾಬ್ ಹಾಗೂ ಅಮರೇಶಪ್ಪ ಎಸ್.ಜಿ. ಸೇರಿದಂತೆ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸದಸ್ಯರು, ಜಿಲ್ಲೆಯ ವಿವಿಧ ತಾಲ್ಲೂಕುಗಳ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರು, ಸದಸ್ಯರು ಹಾಗೂ ಗ್ಯಾರಂಟಿ ಯೋಜನೆ ಅನುಷ್ಠಾನ ಇಲಾಖೆಗಳ ಅಧಿಕಾರಿಗಳು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## 17ನೇ ಫಿಲಂ ಫೆಸ್ಟಿವಲ್: ಫೈರ್ ಫ್ಲೈ ಚಿತ್ರಕ್ಕೆ ಮೆಚ್ಚುಗೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ನಟ ಶಿವರಾಜಕುಮಾರ್ ಅವರ ಪುತ್ರಿ ನಿವೇದಿತ ಶಿವರಾಜಕುಮಾರ್ ನಿರ್ಮಾಣದ ಮೊದಲ ಚಿತ್ರ "ಫೈರ್ ಫ್ಲೈ" 17 ನೇ ಅಂತಾರಾಷ್ಟ್ರೀಯ ಬೆಂಗಳೂರು ಚಿತ್ರೋತ್ಸವದ ಕನ್ನಡ ಚಲನಚಿತ್ರ ಸ್ಪರ್ಧಾ ವಿಭಾಗದಲ್ಲಿ ಪ್ರದರ್ಶನವಾಯಿತು. ವಂಶಿಕೃಷ್ಣಶ್ರೀನಿವಾಸ್ ನಿರ್ದೇಶನದಲ್ಲಿ ಆನಂದ್ ನೀನಾಸಂ, ರಚನಾ ಇಂದರ್, ಅಚ್ಯುತ್ ಕುಮಾರ್, ಸುಧಾರಾಣಿ ಮುಖ್ಯಭೂಮಿಕೆಯಲ್ಲಿ ನಟಿಸಿರುವ ಈ ಚಿತ್ರ ಈ ಬಾರಿಯ ಬೆಂಗಳೂರು ಚಿತ್ರೋತ್ಸವದಲ್ಲಿ ಎಲ್ಲರ ಮೆಚ್ಚುಗೆ ಪಡೆಯಿತು.

ಪ್ರದರ್ಶನದ ನಂತರ ಮಾತನಾಡಿದ ನಿರ್ಮಾಪಕಿ ನಿವೇದಿತ ಶಿವರಾಜಕುಮಾರ್, 17ನೇ ಬೆಂಗಳೂರು ಅಂತಾರಾಷ್ಟ್ರೀಯ ಚಿತ್ರೋತ್ಸವದಲ್ಲಿ ನಮ್ಮ ಚಿತ್ರ ಪ್ರದರ್ಶನವಾಗಿದ್ದು ಬಹಳ ಖುಷಿಯಾಗಿದೆ. ಆಯೋಜಕರಿಗೆ ಧನ್ಯವಾದ ಎಂದರು.

ಬೆಂಗಳೂರು ಚಿತ್ರೋತ್ಸವದಲ್ಲಿ ಕನ್ನಡಿಗರ ಜೊತೆಗೆ ಹೊರ ರಾಜ್ಯ ಹಾಗೂ ದೇಶದವರು ಸಹ ನಮ್ಮ ಚಿತ್ರವನ್ನು ವೀಕ್ಷಿಸಿ ಮೆಚ್ಚುಗೆ ಸೂಚಿಸಿದ್ದು ಬಹಳ ಸಂತೋಷವಾಗಿದೆ. ನಮ್ಮ ಚಿತ್ರ ಅಮೇಜಾನ್ ಪ್ರೈಮ್ ನಲ್ಲೂ ಲಭ್ಯವಿದೆ ಎಂದು ನಿರ್ದೇಶಕ ವಂಶಿಕೃಷ್ಣ ಶ್ರೀನಿವಾಸ್ ತಿಳಿಸಿದರು. ಛಾಯಾಗ್ರಾಹಕ ಅಭಿಷೇಕ್ ಕಲ್ಲತ್ತಿ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಗ್ರೀಟಿಂಗ್ ಕಾರ್ಡ್ ಸ್ಪರ್ಧೆ: ವಿದ್ಯಾನಂದ ಪ್ರೌಢಶಾಲೆಗೆ ಪ್ರಥಮ




• ಮಲ್ಲಮ್ಮ ನುಡಿ ವಾರ್ತೆ ಕುಕನೂರ

ಇಲ್ಲಿನ ಜವಾಹರ ನವೋದಯ ವಿದ್ಯಾಲಯದಲ್ಲಿ ನಡೆದ ಗ್ರೀಟಿಂಗ್ ಕಾರ್ಡ್ ತಯಾರಿಕೆ ಸ್ಪರ್ಧೆಯಲ್ಲಿ ಪಟ್ಟಣದ ವಿದ್ಯಾನಂದ ಗುರುಕುಲ ಪ್ರೌಢಶಾಲೆಯ ವಿದ್ಯಾರ್ಥಿನಿಯರು ಪ್ರಥಮ ಸ್ಥಾನ ಪಡೆದು ಗಮನ ಸೆಳೆದಿದ್ದಾರೆ. ವಿದ್ಯಾರ್ಥಿಗಳ ಸೃಜನಶೀಲತೆ ಹಾಗೂ ಕಲಾತ್ಮಕತೆಯನ್ನು ಉತ್ತೇಜಿಸುವ ಉದ್ದೇಶದಿಂದ ಈ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.

ಸ್ಪರ್ಧೆಯಲ್ಲಿ ಆರು ಶಾಲೆಗಳ ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದು, ಕಲರ್ ಪೇಪರ್‌ನಲ್ಲಿ ಗ್ರೀಟಿಂಗ್ ಕಾರ್ಡ್ ಮಾಡುವ ವಿದ್ಯಾರ್ಥಿನಿಯರು ಸೃಜನಶೀಲತೆಯಿಂದ ಆಕರ್ಷಣೆಯಾಗಿ ಮಾಡಿದರು.

ಫೇಸ್ ಸೆಟ್ಟಿಂಗ್ ಸ್ಪರ್ಧೆ ಸೇರಿದಂತೆ ವಿಭಿನ್ನ ವಿನ್ಯಾಸ, ಬಣ್ಣಗಳ ಸಮನ್ವಯ ಮತ್ತು ಸಂದೇಶದ ಸ್ಪಷ್ಟತೆಯ ಆಧಾರದಲ್ಲಿ ಮೌಲ್ಯಮಾಪನ ನಡೆಸಲಾಗಿತ್ತು.

ವಿದ್ಯಾನಂದ ಗುರುಕುಲ ಪ್ರೌಢಶಾಲೆಯ ಕ್ರಾಫ್ಟ್ ಶಿಕ್ಷಕಿ ಉಮಾ ದೇಸಾಯಿ ಅವರು ವಿದ್ಯಾರ್ಥಿನಿಯರಿಗೆ ತರಬೇತಿ ಹಾಗೂ ಮಾರ್ಗದರ್ಶನ ನೀಡಿದ್ದರು. ಈ ಸಾಧನೆಗೆ ಶಾಲೆಯ ಉಪಪ್ರಾಚಾರ್ಯ ಸೋಮಶೇಖರ ಲಮಾಣಿ ಹಾಗೂ ಶಿಕ್ಷಕ ಸಿಬ್ಬಂದಿ ವಿದ್ಯಾರ್ಥಿನಿಯರನ್ನು ಅಭಿನಂದಿಸಿ ಹರ್ಷ ವ್ಯಕ್ತಪಡಿಸಿದ್ದಾರೆ.

# ಜಿಬಿಎ ಚುನಾವಣೆಯಲ್ಲಿ ಪ್ರಬಲ ಸ್ಪರ್ಧಿಯಾಗಿ ನರಸಿಂಹಮೂರ್ತಿ ಕಣಕ್ಕೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ಕೆಂಪೇಗೌಡ ಬಡಾವಣೆ ಕ್ಷೇಮಾಭಿವೃದ್ಧಿ ಸಂಘ ಸ್ಥಾಪನೆ ಮಾಡಿ ಅದರ ಮುಖಾಂತರ ಹಲವಾರು ಸೇವಾ ಕಾರ್ಯಗಳನ್ನು ಕೈಗೊಂಡು ಎಲ್ಲರಿಗೂ ಚಿರಪರಿಚಿತರಾಗಿರುವ ನರಸಿಂಹಮೂರ್ತಿ (ಮಂಗಳವಾಟರ್) ರವರು ರಾಜಗೋಪಾಲನಗರ ವಾರ್ಡಿನಿಂದ ಬಿಜೆಪಿ ಪಕ್ಷದಿಂದ ಮುಂಬರುವ ಜಿಬಿಎ ಚುನಾವಣೆಯಲ್ಲಿ ಎದುರಾಳಿಗಳಿಗೆ ಪ್ರಬಲ ಸ್ಪರ್ಧಿಯಾಗಿ ಸ್ಪರ್ದೆಗೆ ಅಣಿಯಾಗುತ್ತಿದ್ದಾರೆ.

ಈ ಹಿಂದೆ ಮೂರು ವರ್ಷಗಳ ಕಾಲ ರಾಜಗೋಪಾಲನಗರ ವಾರ್ಡಿನ ಜೆಡಿಎಸ್ ಅಧ್ಯಕ್ಷರಾಗಿ ಕೆಲಸ ನಿರ್ವಹಿಸಿರುತ್ತಾರೆ. ನಂತರ ಈಗಿನ ಶಾಶಕರಾಗಿರುವ ಎಸ್ ಮುನಿರಾಜುರವರ ಕಳೆದ ಎರಡು ಅವಧಿಯಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಗಳನ್ನು ಮೆಚ್ಚಿ ಬಿಜೆಪಿ ಪಕ್ಷಕ್ಕೆ ಸೇರ್ಪಡೆಯಾಗಿ 2023ರ ವಿಧಾನಸಭಾ ಚುನಾವಣೆಯಲ್ಲಿ ಅವರ ಪರ ಕೆಲಸ ಮಾಡಿ ಅವರ ಗೆಲುವಿಗೆ ಸಹಕರಿಸಿರುತ್ತಾರೆ.

ಈಗ ಪ್ರಸ್ತುತ ಅವಧಿಯಲ್ಲಿ ರಾಜಗೋಪಾಲನಗರ ವಾರ್ಡ ಅಧ್ಯಕ್ಷರಾಗಿ ಪಕ್ಷ ಸಂಘಟನೆಯಲ್ಲಿ ತೆ–ೂಡಗಿಕೊಂಡಿದ್ದು ಹಗಲಿರುಳು ಜನಗಳ ಸಮಸ್ಯಗೆ ಶಾಸಕರ ಸಹಕಾರದಿಂದ ಸ್ಪಂದಿಸುತ್ತಿದ್ದು ಜಿಬಿಎ ಚುನಾವಣೆಗೆ ಜನರಲ್ ಕ್ಯಾಟಗರಿ ಬಂದಿರುವುದರಿಂದ ಚುನಾವಣೆಗೆ ಸ್ಪರ್ಧಿಸಲು ಹಲವಾರು ಸ್ನೇಹಿತರ ಹಿತೈಸಿಗಳ ಒತ್ತಾಯದ ಮೇರೆಗೆ ಸ್ಪರ್ಧಿಸಲು ಒಲವು ತೋರಿದ್ದು ಅದೃಷ್ಟ ಪರೀಕ್ಷೆಗೆ ಮುಂದಾಗಿದ್ದಾರೆ.

ಅಭಿವೃದ್ಧಿ ಹರಿಕಾರರು ಜನಪ್ರಿಯ ಶಾಸಕರಾದ ಎಸ್ ಮುನಿರಾಜಣ್ಣನವರ ಆರ್ಶೀವಾದದ ಇದ್ದು ಅವರ ಎಲ್ಲಾ ಯೋಜನೆಗಳನ್ನು ಜನಗಳಿಗೆ ತಲುಪಿಸುವ ನಿಟ್ಟಿನಲ್ಲಿ ಶ್ರಮ ವಹಿಸಿದ್ದನೆ. ಅದರಂತೆ ವಾರ್ಡಿನ ಜನತೆಯ ನಾಡಿಮಿಡಿತ ಅರಿತಿರುವುದರಿಂದ ಎದುರಾಳಿಗಳನ್ನು ಸುಲಭವಾಗಿ ಸೋಲಿಸಬಹುದು.

ಸ್ಥಳೀಯವಾಗಿ ವಾರ್ಡ್‌ನಲ್ಲೆವಾಸವಾಗಿರುವುದರಿಂದ ಯಾವುದೇ ಎಂತಹ ಸಂಧರ್ಭದಲ್ಲಿಯೂ ಕೂಡ ಅವರ ಕಷ್ಟ ಸುಖಗಳಲ್ಲಿ ಭಾಗಿಯಾಗಿ ಅವರ ಮನ ಗೆಲ್ಲಬಹುದು ಇದರಿಂದ ಕನ್ನಡ ಸಾಹಿತ್ಯ ಪರಿಷತ್ ಕಾರ್ಯಕ್ರಮದ ಬಗ್ಗೆ ಹಾಕಿ ಅದರಲ್ಲೂ ಅಧ್ಯಕ್ಷರಾಗಿದ್ದು ಎಲ್ಲಾ ನಮ್ಮ ವಾರ್ಡಿನ ಶಾಲೆಯ ಮಕ್ಕಳಿಗೆ ಕಾರ್ಯಕ್ರಮವನ್ನು ಕೊಟ್ಟು ಕನ್ನಡದಲ್ಲಿ ಹೆಚ್ಚಿನ ಅಂಕಗಳನ್ನು ಪಡೆಯುವ ವಿದ್ಯಾರ್ಥಿಗಳಿಗೆ ಪ್ರಶಸ್ತಿಯನ್ನು ನೀಡಿ ಗೌರವಿಸಿ ಇದರ ಮೂಲಕ ಜನಪ್ರಿಯತೆ ಸಾಧಿಸಿ ಭದ್ರಕೋಟೆಯಾಗಿ ಉಳಿಯಲಿದೆ.

# ನಗರಸಭೆ ಮುಂದೆ ನಾಗರಿಕ ಹಿತರಕ್ಷಣ ಸಮಿತಿ ಪ್ರತಿಭಟನೆ

• ಮಲ್ಲಮ್ಮ ನುಡಿ ವಾರ್ತೆ ಹುಣಸೂರು



ನಿವೇಶನ ರಹಿತ ಫಲಾನುಭವಿಗಳನ್ನು ಗುರುತಿಸಿ 25 ವರ್ಷಗಳ ಹಿಂದೆ ಹಕ್ಕು ಪತ್ರ ನೀಡಿದ್ದು, ಇದುವರೆಗು ಫಲಾನುಭವಿಗಳಿಗೆ ಸ್ಥಳ ಗುರುತಿಸಿ ನಿವೇಶನ ನೀಡದಿರುವ ನಗರಭೆ ಆಡಳಿತದ ವಿರುದ್ಧ ರೊಚ್ಚಿಗೆದ್ದ ಫಲಾನುಭವಿಗಳು ನಗರಸಭೆ ಮುಂದೆ ತಾಲ್ಲೂಕು ನಾಗರೀಕ ಹಿತರಕ್ಷಣ ಸಮಿತಿ ಮುಂದಾಳತ್ವದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಪ್ರತಿಭಟನಾಕರರನ್ನು ಉದ್ದೇಶಿಸಿ ನಾಗರೀಕ ಹಿತ ರಕ್ಷಣ ಸಮಿತಿಯ ತಾಲೂಕು ಅಧ್ಯಕ್ಷ ಸ್ವಾಮಿಗೌಡ ಮಾತನಾಡಿ, ನಗರ ನಿವೇಶನ ರಹಿತ ಬಡ ಜನರು ದಲಿತರು ಹಿಂದುಳಿದ ಹಾಗೂ ದುರ್ಬಲ ವರ್ಗದವರಿಗೆ ಆಶ್ರಯ ಸಮಿತಿವತಿಯಿಂದ 1991–92 ನೇ ಸಾಲಿನಲ್ಲಿ ನಗರ ಮಂಜುನಾಥ ಬಡಾವಣೆ, ವಿ.ಪಿ.ಬೋರೆಯಲ್ಲಿ ಖಾಲಿ ನಿವೇಶನವನ್ನು ಅಂಚಿಕೆಮಾಡಲಾಗಿತ್ತು, ಇದಾದ ನಂತರ 2002–03 ನೇ ಸಾಲಿನಲ್ಲಿ ಅಂದಿನ ಶಾಸಕರಾದ ದಿವಂಗತ ವಿ.ಪಾಪಣ್ಣರವರು ನಿವೇಶನ ರಹಿತ ಹಿಂದುಳಿದ ಮತ್ತು ದುರ್ಬಲ ವರ್ಗದವರಿಗೆ ಆಶ್ರಯ ಸಮಿತಿ ವತಿಯಿಂದ ಅರ್ಹ 870 ಫಲಾನುಭವಿಗಳನ್ನು ಗುರುತಿಸಿ ಆಯ್ಕೆ ಮಾಡಿ ಜಿಲ್ಲಾಧಿಕಾರಿಗಳಿಂದ ಅನುಮೋಧನೆಪಡೆದು ತಹಶೀಲ್ದಾರ್ ಮುಖಾಂತರ 2004–05 ನೇ ಸಾಲಿನಲ್ಲಿ ಹಕ್ಕುಪತ್ರಗಳನ್ನು ವಿತರಣೆ ಮಾಡಲಾಗಿತ್ತು.

ನಂತರದ ದಿನಗಳಲ್ಲಿ 2004–05 ನೇ ಸಾಲಿನಿಂದ 2025–26 ನೇ ಸಾಲಿನ ತನಕ 22 ವರ್ಷಗಳು ಕಳೆದರೂ ಹಿಂದಿನ ಪುರಸಭೆಯಾಗಲೀ ಪ್ರಸ್ತುತ ನಗರಸಭೆಯಾಗಲೀ ಹಕ್ಕುಪತ್ರ ಪಡೆದಿರುವ ಫಲಾನುಭವಿಗಳಿಗೆ ಖಾತೆ ಮಾಡಿ ಸ್ಥಳ ಗುರುತಿಸಿ ನಿವೇಶನಗಳನ್ನು ನೀಡುವಲ್ಲಿ ಅಧಿಕಾರಿಗಳು ಮುಂದಾಗದೇ ಬೇಜವಾಬ್ದಾರಿತನದಿಂದ ನಡೆದುಕೊಂಡಿದ್ದಾರೆ. ಇದರಿಂದ ನಿವೇಶನ ರಹಿತ ಅಸಹಾಯಕ ದುರ್ಬಲ ವರ್ಗದವರಿಗೆ ಘೋರ ಅನ್ಯಾಯವಾಗಿದೆ. ಈ ಅನ್ಯಾಯವನ್ನು ಖಂಡಿಸಿ ನಾವು ಪ್ರಭಟನೆ ಮಾಡುವ ಮೂಲಕ ಫಲಾನುಭವಿಗಳಿಗೆ ನಿವೇಶನ ಗುರುತಿಸಿಕೊಡಲು ತಾಲ್ಲೂಕು ಆಡಳಿತವನ್ನು ಒತ್ತಾಯಿಸುತ್ತಿದ್ದೇವೆ ಎಂದರು.

ಉಪಾಧ್ಯಕ್ಷರಾದ ಇಂಟೆಕ್ ರಾಜು ಮಾತನಾಡಿ, ಹಕ್ಕುಪತ್ರ ಪಡೆದಿರುವ ಫಲಾನುಭವಿಗಳು ಕಳೆದ 25 ವರ್ಷಗಳಿಂದ ನಗರಸಭೆಗೆ ನಿವೇಶನಕ್ಕಾಗಿ ಜನರು ಅಲೆಯುತ್ತಿದ್ದರೂ ಯಾವುದೇ ಜನಪ್ರತಿನಿಧಿಗಳಾಗಲೀ ಬಡವರ, ಬಗೆ ದೀನ ದಲಿತರ, ದುರ್ಬಲ ವರ್ಗದವರ ಬಗ್ಗೆ ಕಿಂಚಿತ್ತು ಕರುಣೆ ಕಾಳಜಿ ತೆ–ೂರದೆ ಇಂತಹ ನಗರ ಮುಗ್ಧ ಜನರನ್ನು ಕೇವಲ ಮತಕ್ಕಾಗಿ ಬಳಸಿಕೊಂಡ ರಾಜಕರಣಿಗಳು ತಮ್ಮ ರಾಜಕೀಯ ಬೇಳೆ ಬೇಯಿಸಿಕೊಂಡು ತೆವಲನ್ನು ತೀರಿಸಿಕೊಂಡಿದ್ದಾರೆ.

ಶಾಸಕರಾದ ದಿವಂಗತ ಪಾಪಣ್ಣರವರ ಆಯ್ಕೆಯಾಗಿ ಬಂದರೂ, ಬಡವರ, ದೀನ–ದಲಿತರಿಗೆ ಶಾಸ್ವತ ಸೂರಿನ ವ್ಯವಸ್ಥೆ ಮಾಡದೆ ಅವರ ಕಷ್ಟಗಳಿಗೆ ಸ್ಪಂದಿಸದೆ ತಮ್ಮ ನಗರದ ಜನತೆಗೆ ಸ್ವಾರ್ಥಕ್ಕೆ ರಾಜಕೀಯ ಬೇಳೆಯನ್ನು ಬೇಯಿಸಿಕೊಂಡು ಕಾಲ ವ್ಯಯ ಮಾಡಿದರೇ ಚುನಾಯಿತಿ ಪ್ರತಿನಿಧಿಗಳ ವಿನಹ ಬಡವರಿಗೆ ಸಾಶ್ವತ ಸೂರು ಕಲ್ಪಿಸುವಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ ತಮ್ಮ ಅವಧಿಯನ್ನು ಕಳೆದರು 23 ವರ್ಷಗಳಿಂದ ಕಳೆದರೂ ಕೂಡ ಪುರಸಭೆ ನಗರಸಭೆಗೆ ಇಲ್ಲಿತನಕ ಫಲಾನುಭವಿಗಳು ಪಡೆದಿರುವ ಹಕ್ಕು ಪತ್ರ ಹಕ್ಕುದಾರರಿಗೆ ಹಕ್ಕನ್ನು ಸಿಗದೇ ಇರುವ ದೊಡ್ಡ ದುರಂತ ಎಂದು ತಿಳಿಸಿದರು.

ಪ್ರತಿಭಟನಾ ಸ್ಥಳಕ್ಕೆ ನಗರಸಭಾ ಆಯು–ಕ್ತೆ ಮಾನಸರವರು ಬಂದು, ಪ್ರತಿಭಟನಾಕರರ ಮನವಿಯನ್ನು ಸ್ವೀಕರಿಸಿ ಈ ಬಗ್ಗೆ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ ಮುಂದಿನ ಕ್ರಮ ವಹಿಸುತ್ತೇನೆ ಎಂದು ಭರವಸೆ ನೀಡಿದರು. ನಂತರ ಮಾತನಾಡಿ ನನಗೆ ನೀಡಿರುವ ಮನವಿಯನ್ನು ಜಿಲ್ಲಾಧಿಕಾರಿಗಳಿಗೆ ಕಳಿಸುತ್ತೇನೆ ಹಾಗೂ ನನ್ನ ಊರಿನ ಮಗಳಾಗಿದ್ದು ನನಗೂ ಕೂಡ ಇದರ ಬಗ್ಗೆ ಬಹಳಷ್ಟು ನೋವಿದೆ ಆದಷ್ಟು ಕೂಡ ನಾನು ನಿಮಗೆ ನಿವೇಶನದಲ್ಲಿ ದೊರಕಿಸಿಕೊಡಲು ನಗರಸಭೆಯಿಂದ ಎಲ್ಲಾ ರೀತಿಯ ಸಹಕಾರ ಸಂಪೂರ್ಣ ಬೆಂಬಲವಾಗಿ ನೀಡುತ್ತೇನೆ ಎಂದು ಫಲಾನುಭವಿ ಗಳಿಗೆ ಪ್ರತಿಭಟನೆಯಲ್ಲಿ ಭರವಸೆ ನೀಡಿದರು. ಈ ಪ್ರತಿಭಟನೆಯಲ್ಲಿ ರೈತ ಮುಖಂಡ ಶಿವ ಶೇಖರ್ ಮಾಜಿ ಗ್ರಾಮ ಪಂಚಾಯಿತಿ ಸದಸ್ಯರಾದ ಖಾಲಿ ದ್ ಹಾಗೂ ಹಕ್ಕು ಪತ್ರ ಫಲಾಣಟಿಜಜಜಿಟಿಜಜನುಭವಿಗಳು ಭಾಗವಹಿಸಿದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)